ಬೀದರ | ಕಲಬುರಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಸಾರ    Postal Reg. No. BDR/054/2026-2027 Email: mallammanudi@gmail.com E-paper: www.mallammanudi.in

# ಮಲ್ಲಮ್ಮ ನುಡಿ

ಸತ್ಯಮೇವ ಜಯತೆ

ಪ್ರಾದೇಶಿಕ ಕನ್ನಡ ದಿನಪತ್ರಿಕೆ

ಸಂಪಾದಕರು: ರಮೇಶರೆಡ್ಡಿ | 9448 604450

Mallammanudi Regional News Paper | Editor: Ramesh Reddy | RNI NO:KARKAN/2011/48371

VOLUME-ಸಂಪುಟ:12 | ISSUE- ಸಂಚಿಕೆ: 355 | PAGE- ಪುಟ 8 | ಮಂಗಳವಾರ 28.01.2025 | RS.ಬೆಲೆ 2/-

# ಮುಡಾ ಹಗರಣ: ಪಾರ್ವತಿ, ಬೈರತಿಗೆ ಫೆ.10 ರವರೆಗೆ ಹೈಕೋರ್ಟ್ ತಾತ್ಕಾಲಿಕ ರಿಲೀಫ್




ಮಲ್ಲಮ್ಮ ನುಡಿ ವಾರ್ತೆ

ಧಾರವಾಡ:ಜ.27:ಮೈಸೂರು ಅಭಿವೃದ್ಧಿ ಪ್ರಾಧಿಕಾರದ(ಮುಡಾ) ನಿವೇಶನಹಂಚಿಕೆಯಲ್ಲಿಹಗರಣದ ಕೇಸಿನಲ್ಲಿ ವಿಚಾರಣೆಗೆ ಜ.27ಕ್ಕೆ ಹಾಜರಾಗುವಂತೆ ಜಾರಿ ನಿರ್ದೇಶನಾಲಯ (ಇಡಿ) ನೋಟೀಸ್ ಜಾರಿ ಮಾಡಿತ್ತು. ಆದರೆ, ಇಡಿ ನೋಟೀಸ್ ಪ್ರಶ್ನಿಸಿ ಬೈರತಿ ಸುರೇಶ್ ಹಾಗೂ ಪಾರ್ವತಿ ಸಿದ್ದರಾಮಯ್ಯ ಅವರು ಕೋರ್ಟ್ ಮೊರೆ ಹೋಗಿದ್ದರು. ಈ ಅರ್ಜಿ ವಿಚಾರಣೆ ಮಾಡಿದ ಹೈಕೋರ್ಟ್ ತಾತ್ಕಾಲಿಕ ರಿಲೀಫ್ ನೀಡಿದೆ. ಫೆ.10ರವರೆಗೆ ಇಡಿ ತನಿಖೆಗೆ ತಾತ್ಕಾಲಿಕ ತಡೆಯನ್ನು ನೀಡಿ ಆದೇಶ ಹೊರಡಿಸಿದೆ.

ಮುಡಾ ಹಗರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ

(2ನೇ ಪುಟ ನೋಡಿ)



ಹುಮನಾಬಾದ:ಗ್ರಾಮ ದೇವತೆ ಶ್ರೀ ವೀರಭದ್ರೇಶ್ವರರ ರಥೋತ್ಸವ ಇಂದು ಬೆಳಿಗ್ಗೆ ಲಕ್ಷಾಂತರ ಭಕ್ತರ ಜಯಘೋಷದ ಮಧ್ಯೆ ನಡೆಯಿತು.

## ಧನ್ಯವಾದಗಳು



ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ:ಜ.27:ಕಲ್ಯಾಣ ಕರ್ನಾಟಕದ ಐತಿಹಾಸಿಕ, ಪಾರಂಪರಿಕ, ಸುಪ್ರಸಿದ್ಧ ಹುಮನಾಬಾದ ಕ್ಷೇತ್ರದ ಒಡೆ-ಯ, ಪಟ್ಟಣದ ಆರಾಧ್ಯ ದೈವ "ಶ್ರೀ ವೀರಭದ್ರೇಶ್ವರ ಜಾತ್ರಾ ಮಹೋತ್ಸವ 2025" ಪ್ರತಿ

(2ನೇ ಪುಟ ನೋಡಿ)

# ಉಸಿರು ನಿಂತರೂ ಹೆಸರು ಉಳಿಸಿಕೊಂಡ ಧೀಮಂತ ನಾಯಕ ನಾಗನಗೌಡ ಕಂದಕೂರ



ಹುಟ್ಟಿದ ಪ್ರತಿ ಜೀವಿ ಶ್ರೇಷ್ಠನಾಗಲ್ಲ. ಶ್ರೇಷ್ಠನಾಗುವುದು ಸರ್ವರಿಗೂ ಸಾಧ್ಯವಿಲ್ಲ. ಜನಸಾಮಾನ್ಯರಂತೆಯೇ ಈ ಭೂವಿಗೆ ಬಂದರೂ ಅಸಾಮಾನ್ಯರಂತೇ ಬಾಳಿ ಉಸಿರು ಬಿಟ್ಟರೂ ಹೆಸರು ಉಳಿಸಿಕೊಂಡವರೇ ನಮ್ಮ ಲಿಂ. ನಾಗನಗೌಡ ಕಂದಕೂರ.

ಸುಮಾರು 75 ವರ್ಷ ನಮ್ಮೊಂದಿಗೆ ಇದ್ದ ನಾಗನಗೌಡರ ಬದುಕು ರೋಚಕ ಮತ್ತು ರೋಮಾಂಚಕ.

ಗೌಡ್ಕಿ ಮನೆತನದಲ್ಲಿ ಜನಿಸಿ, ತಾವಾಯಿತು, ತಮ್ಮ ಸಂಸಾರವಾಯಿತೆಂದು ಇದ್ದರೇ ಹತ್ತರಲ್ಲಿ ಹನ್ನೊಂದು ಎನ್ನುವಂತೆಯೇ ಇವರೊಬ್ಬರಾಗುತ್ತಿದ್ದರು. ಆದರೇ ಸಮಾಜಮುಖಿ ಕುಟುಂಬದಿಂದ ಬಂದ ಇವರಿಗೆ ಜೀವಪರ ಕಾಳಜಿ ಇತ್ತು. ಅಂತೆಯೇ ತನ್ನೊಂದಿಗೆ ಸರ್ವರ ಹಿತವೂ ಮುಖ್ಯವೆಂದು ಸಾರ್ವಜನಿಕ ಜೀವನಕ್ಕೆ ಕಾಲಿಟ್ಟು ಸುಮಾರು ಐವತ್ತು ವರ್ಷಗಳ ಕಾಲ ಅಧಿಕಾರವಿಲ್ಲದೇ ಸೇವೆಗೈದ ಧಿಮಂತಿಕೆಯ ವ್ಯಕ್ತಿ ನಾಗನಗೌಡ ಕಂದಕೂರು.

ಜಿಲ್ಲಾ ಪಂಚಾಯಿತಿ ಸದಸ್ಯರಾಗಿ,ಆಗಿನ ಹೈದ್ರಾಬಾದ ಕರ್ನಾಟಕ ಅಭಿವೃದ್ಧಿ ಮಂಡಳಿ ಅಧ್ಯಕ್ಷರಾಗಿ ಹಾಗೂ ಗುರುಮಠಕಲ್ ಕ್ಷೇತ್ರದ ಶಾಸಕರಾಗಿ ಜನಾನುರಾಗಿ ಜನನಾಯಕನಾಗಿ ಜನಸೇವೆ ಮಾಡಿದ ಧಿಮಂತ ವ್ಯಕ್ತಿ

ಗೌಡರು ಸಾಗಿಬಂದ ಸಾರ್ವಜನಿಕ ಜೀವನವೇನು ರತ್ನಗಂಬಳಿಯ ಹಾಸಿಗೆ ಆಗಿರಲಿಲ್ಲ. ಬದಲಿಗೆ ಮುಳ್ಳು ಹಾಸಿಗೆಯ ಹೊದಿಕೆಯೇ ಆಗಿತ್ತು.

ಅಬ್ಬಾ, ಈ ದಾರಿಯಲ್ಲಿ ನಡೆದ ಆ ದಿನಗಳ ಬಗ್ಗೆ ಬಲ್ಲವರು ಮೇಲಕು ಹಾಕಿದರೇ ಕೇಳಿದವರ ಜೀವ ಝಲ್ ಎನ್ನದೇ ಇರದು.

## ಸ್ವಚ್ಛ, ಶಿಸ್ತಿನ ಶ್ವೇತಧಾರಿ:

ನಾಗನಗೌಡರು ಜೀವನದಲ್ಲಿ ಗಳಿಸಿದ್ದಕ್ಕಿಂತ ಕಳೆದುಕೊಂಡಿದ್ದೇ ಹೆಚ್ಚು.

ಆಳೇತ್ತರ ಮನುಷ್ಯ. ಸದಾ ಸ್ವಚ್ಛ, ಶಿಸ್ತಿನಿಂದ ಇರುತ್ತಿದ್ದ ಇವರು ಶ್ವೇತಧಾರಿ.

ಬಿಳಿ ಬಣ್ಣದ ಖಾದಿ ಬಟ್ಟೆಗಳನ್ನೇ ಧರಿಸುತ್ತಿದ್ದರು, ಸಮಯ ಪಾಲನೆಗೆ ಮೊದಲ ಆದ್ಯತೆ.

ಎಷ್ಟು ಎತ್ತರ ಮತ್ತು ವಿಶಾಲ ದೇಹ ಹೊಂದಿದ್ದರೋ ಅಷ್ಟೆ ಅವರ ಮನಸ್ಸು ಕೂಡಾ ದೊಡ್ಡದಾಗಿತ್ತು.

(2ನೇ ಪುಟ ನೋಡಿ)




# ಪ್ರಥಮ ಪುಣ್ಯಸ್ಮರಣೆ



ಜನನ: 01-06-1945

ಲಿಂಗೈಕ್ಯ: 28-01-2024

## ಲಿಂ. ಶ್ರೀ ನಾಗನಗೌಡ ಕಂದಕೂರ

ಮಾಜಿ ಶಾಸಕರು, ಗುರುಮಠಕಲ್ ಮತಕ್ಷೇತ್ರ

ಕಲ್ಯಾಣ ಕರ್ನಾಟಕ ಭಾಗದ ರಾಜಕೀಯ ಮುತ್ಸದ್ದಿಗಳು, ಜನಪ್ರಿಯ ಮಾಜಿ ಶಾಸಕರು,
ಗುರುಮಠಕಲ್ ಕೇತ್ರದ ಅಭಿವೃದ್ಧಿಯ ಹರಿಕಾರರು, ಸರ್ವ ಜನಾಂಗದ ಜನಾನುರಾಗಿ ನಾಯಕರಾಗಿದ್ದ
ಲಿಂ. ಶ್ರೀ ನಾಗನಗೌಡ ಕಂದಕೂರವರು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು.
ನೀವು ತೋರಿದ ಜನಪರ ಕಾಳಜಿ, ನಿಮ್ಮ ನಡೆ ನುಡಿಗಳು ನಮ್ಮ ಮನದಾಳದಲ್ಲಿ ಸದಾ ಹಸಿರಾಗಿವೆ. ಭಗವಂತ
ನಿಮ್ಮ ದಿವ್ಯಾತ್ಮಕ್ಕೆ ಚಿರಶಾಂತಿ ನೀಡಲೆಂದು ಪ್ರಾರ್ಥಿಸುತ್ತಾ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸುತ್ತೇವೆ.

ಲಿಂ. ಶ್ರೀ ನಾಗನಗೌಡ ಕಂದಕೂರ ಅವರ ಪ್ರಥಮ ಪುಣ್ಯಸ್ಮರಣೆ ಕಾರ್ಯಕ್ರಮವು
ಶ್ರೀ ಮ.ನಿಪ್ರ. ಸಿದ್ದಲಿಂಗ ಮಹಾಸ್ವಾಮಿಗಳು ಅಧ್ಯಕ್ಷರು ಸಿದ್ಧಗಂಗಾ ಮಠ ತುಮಕೂರು
ಮತ್ತು ನಾಡಿನ ಸಮಸ್ತ ಮಠಾಧೀಶರ ಸಾನಿಧ್ಯದಲ್ಲಿ ಗಣ್ಯರ ಸಮ್ಮುಖದಲ್ಲಿ
ಇದೇ ದಿನಾಂಕ 28-01-2025 ರಂದು ಮಂಗಳವಾರ ಬೆಳಿಗ್ಗೆ 11 ಗಂಟೆಗೆ
ಗುರುಮಠಕಲ್ ತಾಲೂಕಿನ ಕಂದಕೂರ ಗ್ರಾಮದ ಕಂದಕೂರ ಅವರ ತೋಟದಲ್ಲಿ ಜರುಗುವದು.

ಸದಾ ನಿಮ್ಮ ಸ್ಮರಣೆಯಲ್ಲಿರುವ..

ಪತ್ನಿ : ಶ್ರೀಮತಿ ಚಂದ್ರಕಾಂತಮ್ಮ, ನಾಗನಗೌಡ ಕಂದಕೂರ
ಹಿರಿಯ ಪುತ್ರ, ಉದ್ಯಮಿಗಳಾದ ಶ್ರೀ ಮಲ್ಲಿಕಾರ್ಜುರೆಡ್ಡಿ, ಶ್ರೀಮತಿ ನಂದಿತಾ ಕಂದಕೂರ
ಕಿರಿಯ ಪುತ್ರ, ಗುರುಮಠಕಲ್ ಶಾಸಕರಾದ ಶ್ರೀ ಶರಣಗೌಡ, ಶ್ರೀಮತಿ ಸುಜಾತ ಕಂದಕೂರ
ಮಗಳಾದ ಶ್ರೀಮತಿ ರೋಹಿಣಿ, ಶ್ರೀ ರಾಜೇಂದ್ರರೆಡ್ಡಿ ಹೊಸಮನಿ
ಮೊಮ್ಮಕ್ಕಳಾದ ಸಂಜೀತರೆಡ್ಡಿ, ಸಮರ್ಥರೆಡ್ಡಿ, ಮನ್ವಿತ್‌ರೆಡ್ಡಿ

ಸಮಸ್ತ ಕಂದಕೂರ ಕುಟುಂಬ ವರ್ಗ ಮತ್ತು ಅಭಿಮಾನಿ ಬಳಗ.

## ಒಂದನೇ ಪುಟದಿಂದ

# ಧೀಮಂತ ನಾಯಕ ನಾಗನಗೌಡ ಕಂದಕೂರ

**ಹೋರಾಟ – ಬಡಿದಾಟ ಇವರ ಉಸಿರು:**

ಅಣ್ಣ ಲಿಂ.ಸದಾಶಿವರಡ್ಡಿ ಕಂದಕೂರ ಅವರ ನೆರಳಲ್ಲಿಯೇ ಮಾಗಿದ್ದ ನಾಗನಗೌಡರು 1970 ದಶಕದಲ್ಲಿ ಕಾಲೇಜು ಶಿಕ್ಷಣ ಮುಗಿಸಿ ಸಾರ್ವಜನಿಕ ಜೀವನಕ್ಕೆ ಕಾಲಿಟ್ಟವರು ಇಹಲೋಕ ತ್ಯಜಿಸುವವರೆಗೂ ಹಿಂದಿರುಗಿ ನೋಡಿದ್ದೇ ಇಲ್ಲ. ಅಣ್ಣನ ಆದರ್ಶಗಳು ಮೈಗೂಡಿಸಿಕೊಂಡೆ ಸಮಾಜ ಸೇವೆಗೆ ಇಳಿದ ಇವರು, 28 ರ ಹರೆಯದಲ್ಲಿಯೇ ವಿಎಸ್ ಎಸ್ ಎನ್ ಅಧ್ಯಕ್ಷ, 1986 ರಲ್ಲಿ ಕಂದಕೂರ ಕ್ಷೇತ್ರದ ಜಿಪಂ ಸದಸ್ಯರಾಗಿ ಆರೋಗ್ಯ ಮತ್ತು ಶಿಕ್ಷಣ ಸ್ಥಾಯಿ ಸಮಿತಿ ಅಧ್ಯಕ್ಷ, 1998 ರಲ್ಲಿ ಎಪಿಎಂಸಿ ಅಧ್ಯಕ್ಷ ಸ್ಥಾನ ಮತ್ತು 2007 ರಲ್ಲಿ ಹೈಕ ಮಂಡಳಿ ಅಧ್ಯಕ್ಷ ಸ್ಥಾನ ಹೀಗೆ ಒಂದು ಕಡೆ ಸಿಕ್ಕ ಅಧಿಕಾರದಿಂದ ಜನಸೇವೆ ಮಾಡಿದರೇ,ಇನ್ನೊಂದು ಕಡೆ ಅಧಿಕಾರರಹಿತ ಜನಮುಖಿ ಹೋರಾಟ ಇವರ ಮುಖ್ಯ ಕಾಯಕವಾಯಿತು.

**ದೇವೇಗೌಡರ ಕುಟುಂಬಕ್ಕೆ ಪರಮಾಪ್ತರು :**

ಅಣ್ಣ ಸದಾಶಿವ ರಡ್ಡಿ ಕಂದಕೂರ ತಮ್ಮ ನಾಗನಗೌಡ ಕಂದಕೂರ ಅವರು ಮಾಜಿ ಪ್ರಧಾನಿ ದೇವೇಗೌಡರ ಕುಟುಂಬಕ್ಕೆ ಕಳೆದ ಸುಮಾರು ಆರು ದಶಕಗಳಿಂದ ಪರಮಾಪ್ತರು.ಇವರ ಕುಟುಂಬದ ಮೇಲೆ ಗೌಡರ ಕುಟುಂಬದ ನಿಷ್ಠೆ ಬಗ್ಗೆ ವರ್ಣಿಸಲು ಶಬ್ದಗಳಿಲ್ಲ. ಇವರೂ ಅಷ್ಠೆ, ಯಾವುದೇ ಆಮಿಷ, ಅಧಿಕಾರಕ್ಕೆ ಒಳಗಾಗದೇ ವ್ಯಕ್ತಿ ಮತ್ತು ಪಕ್ಷ ನಿಷ್ಠೆಯೊಂದಿಗೇ ಇಂದಿಗೂ ಅವರೊಂದಿಗೆ ಇರುವುದು ಅಪರೂಪದ ಸಂಗತಿ.

ನಾಗನಗೌಡರಿಗೆ ಗುರುಮಠಕಲ್ ಕ್ಷೇತ್ರದಲ್ಲಿ ಬಲ್ಯಾಡ ಎನಿಸಿಕೊಂಡುವರು ಕೊಟ್ಟ ಕಿರುಕುಳ ಇದೆಯಲ್ಲ, ಇದು ಯಾರೋಬ್ಬರು ಸಹಿಸಲು ಸಾಧ್ಯವಿಲ್ಲ.

ಮನೆತನದ ಹೋರಾಟದ ಕಿಚ್ಚು ಮಡಿಲಲ್ಲಿ ಕಟ್ಟಿಕೊಂಡೇ, ಅನ್ಯಾಯ, ಅತ್ಯಾಚಾರ, ದರ್ಪ, ದೌರ್ಜನ್ಯಗಳ ವಿರುದ್ಧ ಸಿಡಿದೆದ್ದು ಅವಿರತ ಹೋರಾಟ ಮಾಡಿ, 20 ಕ್ಕೂ ಹೆಚ್ಚು ಸುಳ್ಳು ಕೇಸ್ ಗಳನ್ನು ಎದುರಿಸಿ, ಗುರುಮಠಕಲ್ ಮತ್ತು ಯಾದಗಿರಿ ತಾಲೂಕಿನಲ್ಲಿ ತನ್ನನ್ನು ನಂಬಿದ ಜನರ ಬೆಂಬಲಕ್ಕೆ ಸದಾ ನಿಂತ ಕೆಚ್ಚೆದೆಯ ಗಂಡು ಈ ಗೌಡರು.ಜನರಿಗಾಗಿ, ಅಭಿವೃದ್ಧಿಗಾಗಿ ಮನೆ,ಮಠ ತೊರೆದು ಬೀದಿಗಿಳಿದು ಜನಪರ ಹೋರಾಟಗಳನ್ನು ಮಾಡಿದಾಗ ಸಿಕ್ಕ ಬಹುಮಾನವೆಂದರೇ ಸುಳ್ಳು ಕೇಸುಗಳು ಮತ್ತು ಇನ್ನಿಲ್ಲದ ಕಿರುಕುಳಗಳು.

ದೇವೇಗೌಡರ ಬಲ, ಬೆಂಬಲವಿದ್ದರೂ ಎಂದಿಗೂ ಅದನ್ನು ತಮ್ಮ ಸ್ವಾರ್ಥಕ್ಕಾಗಿ ಬಳಸಿಕೊಳ್ಳುವ ಬದಲಿಗೆ ಸಾಮಾಜಿಕ ಮತ್ತು ರಾಜಕೀಯ ಬದುಕಿನಲ್ಲಿ ತಮ್ಮವರು ಎಂದು ಇರುವ ಗಟ್ಟಿಕಾಳಿನಂತಹ ಕೆಲವರೊಂದಿಗೆ ನಿಲ್ಲದ ಹೋರಾಟ ಮಾಡಿದ ಹುಲಿಯಂತಹ ಶಕ್ತಿವಂತ, ಆನೆಯಂತಹ ಬಲವಂತ ಈ ನಾಗನಗೌಡರು.ಜನತಾ ಪಕ್ಷ, ಜನತಾ ದಳ ಹೀಗೆ ದೇವೇಗೌಡರ ಗರಡಿಯಲ್ಲಿಯೇ ನಿಷ್ಠೆಯಿಟ್ಟು ಇಲ್ಲಿಯವರೆಗೂ ಬಂದಿರುವ ಬೆರಳೆಣಿಕೆಯಷ್ಟು ಜನರಲ್ಲಿ ಕಲ್ಯಾಣ ಕರ್ನಾಟಕದ ಗಿರಿಜಿಲ್ಲೆಯ ಈ ಕುಟುಂಬವು ಒಂದು.

ಗುರುಮಠಕಲ್ ಕ್ಷೇತ್ರದಲ್ಲಿ ಪಕ್ಷದ ಅಭ್ಯರ್ಥಿ ಪರ ಎದುರಾಳಿ ನಡುಗುವಂತೇ ಪ್ರಚಾರ ಮತ್ತು ಕೆಲಸ ಮಾಡುತ್ತ ಬಂದ ನಾಗನಗೌಡರು, ಬದಲಾದ ಮೀಸಲಾತಿಯಿಂದಾಗಿ 2008 ಮತ್ತು 2013 ರಲ್ಲಿ ಗುರುಮಠಕಲ್ ಕ್ಷೇತ್ರದಿಂದ ಸ್ಪರ್ಧಿಸಿ ಸೋತರು, ಮುಂದೇ 2018ರಲ್ಲಿ ಮತ್ತೇ ಕಣಕ್ಕೆ ಇಳಿದಾಗ ಇವರ ಪುತ್ರ, ಹಾಲಿ ಶಾಸಕ ಶರಣಗೌಡ ಕಂದಕೂರ ಮಾಡಿದ ಸಾಹಸದ ಮ್ಯಾಜಿಕ್ ನಿಂದಾಗಿ ಮತದಾರರು ಭಾರಿ ಮತಗಳ ಅಂತರದಿಂದ ಇವರನ್ನು ಗೆಲ್ಲಿಸಿ ಶಾಸಕರಾಗಿ ಆಯ್ಕೆ ಮಾಡಿದರು. 40 ವರ್ಷಗಳ ತಪಸ್ಸಿನಂತಹ ಹೋರಾಟ, ರಾಜಕಾರಣ ಮಾಡಿದ ಮೇಲೆ ಸಿಕ್ಕ ಅಧಿಕಾರದಿಂದ ಇಡಿ ಗುರುಮಠಕಲ್ ಕ್ಷೇತ್ರವನ್ನು ರಾಜ್ಯದ ಜನ ತಿರುಗಿ ನೋಡುವಂತೆಯೇ ಅಧಿವೃದ್ಧಿ ಕೆಲಸಗಳು ಮಾಡಿದರು, ಕುಮಾರಸ್ವಾಮಿ ಸಿಎಂ ಇದ್ದಷ್ಟು ದಿನ ಅನೇಕ ಹೊಸ, ಹೊಸ ಕೆಲಸಗಳಿಗೆ ಅನುದಾನ ತಂದರು, ಕರ್ನಾಟಕ ಕೊಳಚೆ ಮಂಡಳಿ ಅಧ್ಯಕ್ಷರಾಗಿ ಕೆಲಸ ಮಾಡಿದರು. ಆದರೇ ಅಧಿಕಾರ ಸಿಕ್ಕಿದೆ ಎಂದು ಮನೆ ಬೊಕ್ಕಸ್ ತುಂಬಿಕೊಳ್ಳದ ಪ್ರಮಾಣಿಕ ಎಂಎಲ್ ಎ ಎನ್ನುವಷ್ಟರ ಮಟ್ಟಿಗೆ ಕೆಲಸ ಮಾಡಿದವರು ನಾಗನಗೌಡರು. ಇವರ ಜಾಗದಲ್ಲಿ ಬೇರೆಯವರು ಎಂಎಲ್ ಎ, ಮಂಡಳಿ ಅಧ್ಯಕ್ಷರಾಗಿದ್ದರೇ ಕ್ಷೇತ್ರ ಮರೆತು ಕಳೆದುಕೊಂಡಿದ್ದನ್ನು ತುಂಬಿಕೊಳ್ಳುತ್ತಿದ್ದರು. ಕಾರಣ ಗೌಡರ ಕುಟುಂಬದ ಕುಡಿ ಕುಮಾರಸ್ವಾಮಿಯೇ ಸಿಎಂ ಇರಬೇಕಾದರೇ ಇವರು ಬೇಡಿದಲ್ಲವೂ ಸಿಗುತ್ತಿತ್ತು. ಆದರೇ ಹಸನಾದ ಜೀವನ ಮಾಡಿದ ಈ ಗೌಡರಿಗೇ ಅಪಮಾನದ ರಾಜಕೀಯ ಬೇಡವೇ ಬೇಡ ಎಂದು ಸ್ವಚ್ಛ ರಾಜಕಾರಣ ಮಾಡುವ ಮೂಲಕ ಇಂದಿಗೂ ಅಳಿಯದ ಛಾಪು ಉಳಿಸಿಕೊಂಡಿದ್ದಾರೆ.

ಇಂತಹ ಹೋರಾಟಗಾರ, ರಾಜಕಾರಣಿ ಮತ್ತು ಜೀವಪರ ಕಾಳಜಿ ಇರುವ ವ್ಯಕ್ತಿಗಳನ್ನು ಹಗಲು ಹೊತ್ತಿನಲ್ಲಿಯೇ ದೀಪ ಹಿಡಿದು ಹುಡುಕುವಂತ ಸ್ಥಿತಿಯಲ್ಲಿ ಶ್ವೇತವರ್ಣದ ಶಿಲೆಯಂತೆಯೇ ಇವರು ಹೊರಹೊಮ್ಮಿದ್ದಾರೆ.

--- ಗೌಡಪ್ಪಗೌಡ ಮಾಲಿಪಾಟೀಲ್ ಮದರಕಲ್.

# ಹೈಕೋರ್ಟ್ ತಾತ್ಕಾಲಿಕ ರಿಲೀಫ್

ಅವರ ಪತ್ನಿ ಪಾರ್ವತಿ ಸಿದ್ದರಾಮಯ್ಯ ಅವರು ಎ–1 ಆರೋಪಿ ಆಗಿದ್ದಾರೆ. ಸ್ನೇಹಮಯಿ ಕೃಷ್ಣ ಅವರು ನೀಡಿದ ದೂರಿನ ಆಧಾರದಲ್ಲಿ ಲೋಕಾಯುಕ್ತ ಇಲಾಖೆಯಲ್ಲಿ ತನಿಖೆ ನಡೆಯುತ್ತಿದೆ. ಇದರ ಬೆನ್ನಲ್ಲಿಯೇ ಇಡಿಯಿಂದ ತನಿಖೆ ಮಾಡುವಂತೆ ಸ್ನೇಹಮಯಿ ಕೃಷ್ಣ ಅವರು ಪತ್ರವನ್ನೂ ಬರೆದು ದೂರು ದಾಖಲಿಸಿದ್ದರು. ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದ ಅಧೀನದ ಜಾರಿ ನಿರ್ದೇಶನಾಲಯ ಅಧಿಕಾರಿಗಳು ಮುಡಾ ನಿವೇಶನ ಹಂಚಿಕೆ ಪ್ರಕರಣದ ಬಗ್ಗೆ ವಿಚಾರಣೆ ಮಾಡುವುದಕ್ಕೆ ಪಾರ್ವತಿ ಸಿದ್ದರಾಮಯ್ಯ ಅವರಿಗೆ ನೋಟೀಸ್ ನೀಡಿದ್ದರು. ಜೊತೆಗೆ, ತನಿಖೆಯ ಭಾಗವಾಗಿ ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಅವರಿಗೂ ನೋಟೀಸ್ ಜಾರಿ ಮಾಡಲಾಗಿತ್ತು. ಇದರ ಬೆನ್ನಲ್ಲಿಯೇ ಪಾರ್ವತಿ ಸಿದ್ದರಾಮಯ್ಯ ಹಾಗೂ ಸಚಿವ ಬೈರತಿ ಸುರೇಶ್ ಅವರು ಇಡಿ ವಿಚಾರಣೆಗೆ ಅನುಮತಿ ನೀಡಬಾರದು ಎಂದು ಹೈಕೋರ್ಟ್ ಮೊರೆ ಹೋಗಿದ್ದರು. ಈ ಪ್ರಕರಣ ವಿಚಾರಣೆ ಮಾಡಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಹೈಕೋರ್ಟ್ ಪೀಠವು ಪಾರ್ವತಿ ಸಿದ್ದರಾಮಯ್ಯ ಹಾಗೂ ಸಚಿವ ಬೈರತಿ ಸುರೇಶ್ ಅವರಿಗೆ ವಿಚಾರಣೆಗೆ ಬರುವಂತೆ ನೀಡಲಾದ ನೋಟೀಸ್‌ಗೆ ತಾತ್ಕಾಲಿಕ ತಡೆ ನೀಡಿ ಆದೇಶ ಹೊರಡಿಸಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಫೆ.10ರಂದು ಮುಂದಿನ ವಿಚಾರಣೆ ಮಾಡುವುದಾಗಿ ತಿಳಿಸಿದೆ. ಆದ್ದರಿಂದ ಪಾರ್ವತಿ ಸಿದ್ದರಾಮಯ್ಯ ಹಾಗೂ ಬೈರತಿ ಸುರೇಶ್ ಅವರಿಗೆ ತಾತ್ಕಾಲಿಕವಾಗಿ ರಿಲೀಫ್ ಸಿಕ್ಕಂತಾಗಿದೆ.

# ಧನ್ಯವಾದಗಳು

ವರ್ಷದಂತೆ ಈ ವರ್ಷವು ಅತ್ಯಂತ ವಿಜೃಂಭಣೆಯಿಂದ ನೆರವೇರಿಸಲು ಸಹಕರಿಸಿದ "ಸಕಲ ಭಕ್ತಾದಿಗಳಿಗೆ", ಸ್ವಯಂ ಸೇವಕರಿಗೆ,ದೇವಸ್ಥಾನ ವ್ಯವಸ್ಥಾಪನ ಸಮಿತಿಗೆ, ಸೇವೆ ಸಲ್ಲಿಸಿದ ಎಲ್ಲಾ ಇಲಾಖೆಯ ಸಿಬ್ಬಂದಿಗಳಿಗೆ, ಮಾಧ್ಯಮ ಮಿತ್ರರಿಗೆ, (ವಿಶೇಷವಾಗಿ ನಮ್ಮ ದೇವಸ್ಥಾನ ಸಮಿತಿ ಸಮಿತಿಯ ಸ್ವಯಂ ಸೇವಕರು,ಪೊಲೀಸ್ ಇಲಾಖೆ, ಪೌರಾಡಳಿತ ಇಲಾಖೆ,ಜೆಸ್ಕಾಂ ಇಲಾಖೆ, ಸಾರಿಗೆ ಇಲಾಖೆ ) ಜಾತ್ರಾ ಮಹೋತ್ಸವಕ್ಕೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕಾರ ನೀಡಿದ ಎಲ್ಲರಿಗೂ ನನ್ನ ಅನಂತ ಅನಂತ ಹೃತಪೂರ್ವಕ ಧನ್ಯವಾದಗಳು ಎಂದು ಮಾಜಿ ಸಚಿವ ರಾಜಶೇಖರ ಬಿ ಪಾಟೀಲ್ ತಿಳಿಸಿದ್ದಾರೆ.

## ಲಕ್ಕುಂಡಿ ಸ್ತಬ್ಧಚಿತ್ರಕ್ಕೆ ಓಟ್ ಮಾಡಲು ವಾರ್ತಾ ಇಲಾಖೆಯ ಆಯುಕ್ತ ಹೇಮಂತ್ ನಿಂಬಾಳ್ಕರ್ ಮನವಿ

ರಾಯಚೂರುಜ.27:ದೆಹಲಿಯಲ್ಲಿ ಜನವರಿ 26 ರಂದು ನಡೆದ 76ನೇ ಗಣರಾಜ್ಯೋತ್ಸವದ ಅಂಗವಾಗಿ ಪಥಸಂಚಲನದಲ್ಲಿ ಭಾಗವಹಿಸಿದ್ದ ವಿವಿಧ ರಾಜ್ಯಗಳ ಸ್ತಬ್ಧಚಿತ್ರಗಳನ್ನು ಜನಾಭಿಪ್ರಾಯ ಆಧರಿಸಿ ಪ್ರಶಸ್ತಿಗೆ ಪರಿಗಣಿಸಲು ಕೇಂದ್ರ ಸರ್ಕಾರದ ರಕ್ಷಣಾ ಸಚಿವಾಲಯವು ಆನ್ಲೈನ್ ನಲ್ಲಿ ಓಟ್ ಮಾಡಲು ಅವಕಾಶ ಕಲ್ಪಿಸಿದೆ. ಈ ಬಾರಿ ಕರ್ನಾಟಕವು 'ಲಕ್ಕುಂಡಿ:ಶಿಲ್ಪಕಲೆಯ ತೊಟ್ಟಿಲು' ಸ್ತಬ್ಧಚಿತ್ರದೊಂದಿಗೆ ಭಾಗವಹಿಸಿತ್ತು. ಅಪಾರ ಜನರ ಮೆಚ್ಚುಗೆಗೆ ಪಾತ್ರವಾಗಿರುವ ನಮ್ಮ ರಾಜ್ಯದ ಸ್ತಬ್ಧಚಿತ್ರವನ್ನು ಓಟ್ ಮಾಡಿ ಬೆಂಬಲಿಸುವಂತೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತರಾದ ಹೇಮಂತ್ ಎಂ. ನಿಂಬಾಳ್ಕರ್ ಅವರು ಮನವಿ ಮಾಡಿದ್ದಾರೆ.

ಕೇಂದ್ರ ಸರ್ಕಾರವು ಅತ್ಯುತ್ತಮ ಸ್ತಬ್ಧಚಿತ್ರದ ಆಯ್ಕೆಗಾಗಿ ಸಾರ್ವಜನಿಕರು ಆನ್ ಲೈನ್, ಇಮೇಲ್ ಮತ್ತು ಎಸ್ಎಂಎಸ್ ಮೂಲಕ ಓಟ್ ಮಾಡಲು ಅವಕಾಶ ಕಲ್ಪಿಸಿದೆ. ಜನವರಿ 28ರ ಮಧ್ಯರಾತ್ರಿ 12ರವರೆಗೆ ಓಟ್ ಮಾಡಲು ಅವಕಾಶವಿದೆ. ಸಾರ್ವಜನಿಕರು ನಿಗದಿತ ಅವಧಿಯೊಳಗೆ ಓಟ್ ಮಾಡಿ ರಾಜ್ಯದ ಸ್ತಬ್ಧಚಿತ್ರವನ್ನು ಬೆಂಬಲಿಸುವಂತೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತರು ಪತ್ರಿಕಾ ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.ಓಟ್ ಮಾಡುವ ವಿಧಾನದ ಬಗ್ಗೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಕಿರುಚಿತ್ರವನ್ನು ಸಹ ಬಿಡುಗಡೆಗೊಳಿಸಿದೆ. ಇದನ್ನು ಅನುಸರಿಸಿ, ಐಚಿಇಇಣಟಿಜು ಅಡಿಚಿಜಟಜ ಠಜ, ಣಂಟಿಜ ಅಡಿಚಿಜಿಣ ವಿಷಯದ ಸ್ತಬ್ಧಚಿತ್ರಕ್ಕೆ ಹೆಚ್ಚು ಹೆಚ್ಚು ಓಟ್ ಮಾಡುವ ಮೂಲಕ ಬೆಂಬಲ ಹಾಗೂ ಮೆಚ್ಚುಗೆ ಸೂಚಿಸಬೇಕೆಂದೂ ಎಂದು ಅವರು ಪ್ರಕಟಣೆಯಲ್ಲಿ ಕೋರಿದ್ದಾರೆ.https://www.mygov.in/group-poll/vote-your-favourite-tableau-and-marching-contingent-republic-day-parade-2025/ ಕೊಂಡಿಯನ್ನು ಕ್ಲಿಕ್ ಮಾಡಿ, Login to participate ಮೇಲೆ ಕ್ಲಿಕ್ ಮಾಡಿ, ತಮ್ಮ ನೋಂದಾಯಿತ ಮೊಬೈಲ್ ನಂಬರ್ ಅಥವಾ ಇಮೇಲ್ ವಿವರ ನಮೂದಿಸಿ, ತಾವು ಸ್ವೀಕರಿಸುವ ಒಟಿಪಿ ನಮೂದಿಸಿ, ನಂತರ Resend.OTP/ Submitted EzÀgÀ°è submitt ಕ್ಲಿಕ್ ಮಾಡಿ, ಎಲ್ಲಾ ಸ್ತಬ್ಧಚಿತ್ರಗಳ ಮಾಹಿತಿ ಕಾಣುತ್ತದೆ.

## ವಾರ್ತಾ ಇಲಾಖೆಯ ಉಪನಿರ್ದೇಶಕರಾಗಿ ಜಡಿಯಪ್ಪ ಜಿ.ಅಧಿಕಾರ ಸ್ವೀಕಾರ

## ನಿರ್ಗಮಿತ ಅಧಿಕಾರಿ ಸಿದ್ದೇಶ್ವರಪ್ಪ ಜಿ.ಬಿ. ಅವರಿಗೆ ಸಿಬ್ಬಂದಿಯಿಂದ ಆತ್ಮೀಯ ಬೀಳ್ಕೊಡುಗೆ



ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಜ.27: ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ಜಡಿಯಪ್ಪ ಜಿ. ಅವರು ಸೋಮವಾರ ಕಲಬುರಗಿ ಉಪನಿರ್ದೇಶಕರ ಕಚೇರಿಯಲ್ಲಿ ಹಿರಿಯ ಸಹಾಯಕ ನಿರ್ದೇಶಕರ ಹುದ್ದೆ ಜೊತೆಗೆ ಉಪನಿರ್ದೇಶಕ ಹುದ್ದೆಯ ಅಧಿಕಾರ ವಹಿಸಿಕೊಂಡರು.

ಕಲಬುರಗಿ ಕಚೇರಿಯ ಉಪನಿರ್ದೇಶಕ ಹುದ್ದೆಯನ್ನು ಪ್ರಭಾರದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಿದ್ದೇಶ್ವರಪ್ಪ ಜಿ.ಬಿ. ಅವರು ಜಡಿಯಪ್ಪ ಜಿ. ಅವರಿಗೆ ಅಧಿಕಾರ ಹಸ್ತಾಂತರಿಸಿದರು.

ನಂತರ ವಾರ್ತಾ ಭವನದಲ್ಲಿ ನಡೆದ ಸರಳ ಸಮಾರಂಭದಲ್ಲಿ ಪ್ರಭಾರದಿಂದ ಮುಕ್ತರಾದ ಸಿದ್ದೇಶ್ವರಪ್ಪ ಜಿ.ಬಿ. ಅವರಿಗೆ ಕಚೇರಿ ಸಿಬ್ಬಂದಿಗಳು ಮೈಸೂರು ಪೇಟಾ,ಶಾಲು,ಫಲತಾಂಬೂಲ ಹಾಗೂ ಸ್ಮರಣಿಕೆ ನೀಡಿ ಬೀಳ್ಕೊಟ್ಟರು. ಅದೇ ರೀತಿ ನೂತನ ಉಪನಿರ್ದೇಶಕರಿಗೆ ಸ್ವಾಗತ ಕೋರಲಾಯಿತು.

ಸಿಬ್ಬಂದಿಗಳ ಆತ್ಮೀಯ ಸನ್ಮಾನ ಸ್ವೀಕರಿಸಿ ಮಾತನಾಡಿದ ಸಿದ್ದೇಶ್ವರಪ್ಪ ಜಿ.ಬಿ. ಅವರು ತಾವು ಇಲಾಖೆಗೆ 2016ರಲ್ಲಿ ನೇಮಕವಾಗಿದ್ದು, ಅಲ್ಲಿಂದ ಇಲ್ಲಿಯ ವರೆಗೆ ಕಲ್ಯಾಣ ಕರ್ನಾಟಕ ಭಾಗದಲ್ಲಿ ಕೆಲಸ ನಿರ್ವಹಿಸಿದ್ದು, ಇಲ್ಲಿನ ಸಂಸ್ಕೃತಿ, ವೇಷ ಭೂಷಣ ಅರಿಯಲು ಸಾಧ್ಯವಾಗಿದೆ. ಕಲಬುರಗಿ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುವ ಸಂದರ್ಭದಲ್ಲಿ ಸಹಕಾರ ನೀಡಿದ ಜಿಲ್ಲೆಯ ಪತ್ರಕರ್ತರಿಗೆ, ಸಿಬ್ಬಂದಿ ವರ್ಗಕ್ಕೆ ಧನ್ಯವಾದ ತಿಳಿಸಿದರು.

ನೂತನ ಉಪನಿರ್ದೇಶಕ ಜಡಿಯಪ್ಪಜಿ.ಅವರುಮಾತನಾಡಿ, ಕೇಂದ್ರ ಕಚೇರಿ ಮತ್ತು ಮುಖ್ಯ ಚುನಾವಣಾಧಿಕಾರಿಗಳ ಕಚೇರಿಯಲ್ಲಿ ಕಾರ್ಯನಿರ್ವಹಿಸಿರುವ ನನಗೆ ಸರ್ಕಾರ ಇತ್ತೀಚೆಗೆ ಕಲಬುರಗಿ ಕಚೇರಿಗೆ ವರ್ಗ ಮಾಡಿದ್ದು, ಅದರಂತೆ ಇಂದು ಅಧಿಕಾರ ಸ್ವೀಕರಿಸಿರುವೆ. ಸಿದ್ದೇಶ್ವರಪ್ಪ ಜಿ.ಬಿ. ಅವರಿಗೆ ನೀಡಿದ ಸಹಕಾರ ತಮಗೂ ನೀಡುವಂತೆ ಮಾಧ್ಯಮ ಮಿತ್ರರಲ್ಲಿ ಮನವಿ ಮಾಡಿಕೊಂಡರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ ಅನೇಕ ಪತ್ರಕರ್ತರು ನಿರ್ಗಮಿತ ಅಧಿಕಾರಿ ಸಿದ್ದೇಶ್ವರಪ್ಪಜಿ.ಬಿ.ಮತ್ತು ನೂತನ ಉಪನಿರ್ದೇಶಕರಾಗಿ ಅಧಿಕಾರ ವಹಿಸಿದ ಜಡಿಯಪ್ಪ ಜಿ ಅವರಿಗೆ ವೈಯಕ್ತಿಕವಾಗಿ ಸನ್ಮಾನಿಸಿ ಅವರೊಂದಿಗಿನ ಸೇವಾ ಒಡನಾಟದ ಬಗ್ಗೆ ಮುಕ್ತ ಮನಸ್ಸಿನಿಂದ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು.

ಕಾರ್ಯಕ್ರಮದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಬಾಬುರಾವ ಯಡ್ರಾಮಿ, ರಾಜ್ಯ ಉಪಾಧ್ಯಕ್ಷ ಭವಾನಿ ಸಿಂಗ್, ಪ್ರಧಾನ ಕಾರ್ಯದರ್ಶಿ ಸಂಗಮನಾಥ ರೇವತಗಾಂವ, ಜಿಲ್ಲಾ ದಿನಪತ್ರಿಕೆಗಳ ಸಂಪಾದಕರ ಸಂಘದ ಅಧ್ಯಕ್ಷ ಸಿದ್ರಾಮಪ್ಪ ಬಿರಾದರ, ಹಿರಿಯ ಪತ್ರಕರ್ತರಾದ ಎಸ್.ಬಿ.ಜೋಷಿ, ವಾರ್ತಾ ಇಲಾಖೆ ಸಿಬ್ಬಂದಿಗಳಾದ ಉಮಾಶಂಕರ, ಸೈಯದ್ ಇಸ್ಮಾಯಿಲ್ ಪಾಶಾ, ದೇವಿಂದ್ರ, ಲಕ್ಷ್ಮೀಬಾಯಿ, ನರಸಿಂಹ, ಅಶೋಕ, ಅಪ್ರೆಂಟಿಸ್ ಅಭ್ಯರ್ಥಿ ರೂಪಾ ಸೇರಿದಂತೆ ಜಿಲ್ಲೆಯ ಅನೇಕ ಮುದ್ರಣ, ವಿದ್ಯುನ್ಮಾನ ಮಾಧ್ಯಮದ ಹಿರಿಯ ಮತ್ತು ಕಿರಿಯ ಪತ್ರಕರ್ತರು ಹಾಜರಿದ್ದರು.

ಕಾರ್ಯಕ್ರಮದಲ್ಲಿ ಪತ್ರಕರ್ತ ಸಿದ್ದಣ್ಣಮಾಲಗಾರನಿರೂಪಿಸಿದರು. ವಾರ್ತಾ ಇಲಾಖೆಯ ರವಿ ಮಿರಸ್ಕರ್ ವಂದಿಸಿದರು.

# ಡಿಸಿ ಜಾನಕಿ ಅವರಿಗೆ ಸನ್ಮಾನ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಜ.27: ಚುನಾವಣೆಯ ಅತ್ಯುತ್ತಮ ಕಾರ್ಯನಿರ್ವಹಣೆಗಾಗಿ ರಾಜ್ಯ ಮಟ್ಟದ ಪ್ರಶಸ್ತಿ ಪಡೆದುಕೊಂಡಿರುವ ಜಿಲ್ಲಾಧಿಕಾರಿ ಜಾನಕಿ ಕೆ.ಎಂ ಅವರನ್ನು ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪೂರ ಸನ್ಮಾನಿಸಿದರು.

ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ ಗಣರಾಜ್ಯೋತ್ಸವ ಸಮಾರಂಭದಲ್ಲಿ ಡಿಸಿ ಅವರನ್ನು ಸನ್ಮಾನಿಸಿದ ಸಂದರ್ಭದಲ್ಲಿ ಸಂಸದ ಪಿ.ಸಿ.ಗದ್ದಿಗೌಡರ, ಶಾಸಕ ಎಚ್.ವಾಯ್.ಮೇಟಿ, ವಿಧಾನ ಪರಿಷತ್ ಸದಸ್ಯರಾದ ಪಿ.ಎಚ್.ಪೂಜಾರ, ಹನಮಂತ ನಿರಾಣಿ, ನಗರಸಭೆ ಅಧ್ಯಕ್ಷೆ ಸವಿತಾ ಲೆಂಕೆನ್ನವರ ಸೇರಿದಂತೆ ಮತ್ತಿತರರು ಇದ್ದರು.

# ದ.ರಾ.ಬೇಂದ್ರೆ ದೇವರು ಕರುಣಿಸಿದ ವರಕವಿ : ಡಾ.ಬಿದರಕುಂದಿ




ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಜ.27:ತಮ್ಮ ಸಾಹಿತ್ಯ, ಭಾಷೆಯ ಮೂಲಕ ಕೋಟ್ಯಾಂತರ ಸಾಹಿತ್ಯಾಸಕ್ತರನ್ನು ಹೊಂದಿರುವ ದ.ರಾ.ಬೇಂದ್ರೆ ಅವರು ದೇವರು ಕನ್ನಡಕ್ಕೆ ಕುರಣಿಸಿದ ವರಕವಿ ಎಂದು ಹುಬ್ಬಳ್ಳಿಯ ಹಿರಿಯ ಸಾಹಿತಿ ಡಾ.ಶ್ಯಾಮಸುಂದರ ಬಿದರಕುಂದಿ ಹೇಳಿದರು.

ನಗರದ ಶಿವಾನುಭವ ಸಮಿತಿ ಹಾಗೂ ಸಾಹಿತ್ಯ ಸಂಸ್ಕೃತಿ ಸಂವಹನ ವೇದಿಕೆ ಚರಂತಿಮಠ ಬಾಗಲಕೋಟೆ ಇವರ ಸಹಯೋಗದಲ್ಲಿ ಜರುಗಿದ ಜ್ಞಾನಪೀಠ ಪುರಸ್ಕೃತ ಸಾಹಿತ್ಯ ಸಂವಾದ ತಿಂಗಳ ಉಪನ್ಯಾಸ ಮಾಲಿಕೆ–2ರಲ್ಲಿ ಜ್ಞಾನಪೀಠ ಪುರಸ್ಕೃತ ದ.ರಾ.ಬೇಂದ್ರೆಯವರ ನಾಕುತಂತಿ ಚಿಂತನಪರ ಭಾವಗೀತೆ ಕುರಿತು ಅವರು ಉಪನ್ಯಾಸ ನೀಡಿದರು.

ವರಕವಿ ಬೇಂದ್ರೆಯವರ ನಾಕುತಂತಿ ಆಧ್ಯಾತ್ಮಿಕ ನೆಲೆಯ ಒಂದು ನಿಗೂಢ ಕವನವಾಗಿದೆ. ಬೇಂದ್ರೆಯವರ ಪ್ರಕಾರ ಸಮಸ್ತ ಸೃಷ್ಟಿಯೇ ಒಂದು ವಿರಾಟ್ ವೀಣೆ. ಆ ವೀಣೆಯ ನಾಲ್ಕು ತಂತಿಗಳೆಂದರೆ ನಾನು, ನೀನು, ಆನು, ತಾನು. ವಿಶ್ವವೆಂಬ ವಿರಾಟ್ ವೀಣೆ ಈ ನಾಲ್ಕು ತತ್ವದಿಂದ ವಿಕಸನಗೊಂಡಿದೆ ಎಂಬುದು ಬೇಂದ್ರೆಯವರ ಆಧ್ಯಾತ್ಮಿಕ ದರ್ಶನವಾಗಿದೆ ಎಂದು ಅವರು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಬಿ.ವಿ.ವಿ.ಸಂಘದ ಆಡಳಿತಾಧಿಕಾರಿ ಡಾ. ವಿಜಯಕುಮಾರ ಕಟಗಿಹಳ್ಳಿಮಠ ಮಾತನಾಡಿ, ಮಾಸಿಕ ಉಪನ್ಯಾಸ ಮಾಲೆ ನಿಜಕ್ಕೂ ಅರ್ಥಪೂರ್ಣವಾಗಿದೆ, ಜ್ಞಾನಪೀಠ ಪುರಸ್ಕೃತ ಸಾಹಿತ್ಯ ಸಂವಾದ ಜಿಲ್ಲೆಯ ಸಾಂಸ್ಕೃತಿಕ ಜಗತ್ತನ್ನು ಗಟ್ಟಿಗೊಳಿಸುವ ನಿಟ್ಟಿನಲ್ಲಿ ಹೊಸ ಹೆಜ್ಜೆಯನ್ನು ಇಟ್ಟಿರುವುದು ಶ್ಲಾಘನಿಯ ಎಂದರು.

ಡಾ.ಎಂ.ನಂಜುಂಡಸ್ವಾಮಿ ಸ್ವಾಗತಿಸಿದರು. ಪ್ರಾಸ್ತಾವಿಕವಾಗಿ ಜಿ.ಆಯ್.ನಂದಿಕೋಲಮಠ ಮಾತನಾಡಿದರು. ಡಾ.ಬಸವರಾಜ ಖೋತ ವಂದಿಸಿದರು, ಡಾ.ಐ.ಕೆ.ಮಠದ ಕಾರ್ಯಕ್ರಮ ನಿರೂಪಿಸಿದರು. ಕುಮಾರಿ ಶ್ರೇಯಾ ಜೋರಾಪುರ ಅವರು ಹಾಡಿದ ನಾಲ್ಕು ತಂತಿಯ ಗೀತ ಗಾಯನ ಎಲ್ಲರ ಗಮನ ಸೆಳೆಯಿತು.

ಕಾರ್ಯಕ್ರಮದಲ್ಲಿ ಎ.ಎಸ್.ಪಾವಟೆ. ಎಸ್.ಆರ್. ಮನಹಳ್ಳಿ, ಬಸವರಾಜ ಭಗವತಿ. ಎಂ.ಸಿ.ಹಾಲವರ, ಎಸ್.ಜಿ.ಕೋಟಿ, ಡಾ.ಎಸ್.ಡಿ.ಕೆಂಗಲಗುತ್ತಿ, ಅಕ್ಕನ ಬಳಗದ ಮಾತೆಯರು ಭಾಗವಹಿಸಿದ್ದರು.

# ಹಣಕಾಸು ನಿರ್ವಹಣೆಯ ಮಹತ್ವ ತಿಳಿದು ವ್ಯವಹರಿಸಿ: ಶರತ್.ಎಮ್.ಎಸ್




ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ:ಜ.27: ಹಣಕಾಸು ನಿರ್ವಹಣೆಯ ಮಹತ್ವ ತಿಳಿದು ವ್ಯವಹಾರ ಮಾಡಬೇಕು ಎಂದು ಬೆಂಗಳೂರಿನ ಫ್ರೇಡಂ ಯ್ಯಾಪ್ ಹಿರಿಯ ಉಪಾಧ್ಯಕ್ಷ ಶರತ್. ಎಮ್.ಎಸ್ ಅಭಿಪ್ರಾಯಪಟ್ಟರು.

ಪಟ್ಟಣದಲ್ಲಿ ನಡೆದ ಸಿದ್ದೇಶ್ವರ ಅರ್ಬನ್ ಮಲ್ಟಿಸ್ಟೇಟ್ ಸಂಸ್ಥೆಯ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು. 78% ಸಾಕ್ಷರತೆ ಇರುವ ನಮ್ಮ ನಾಡಿನಲ್ಲಿ ಆರ್ಥಿಕ ಸಾಕ್ಷರತೆ ಕೇವಲ 15% ಇದೆ. ನಾವು ಆರ್ಥಿಕ ಸಾಕ್ಷರತೆಗೆ ಹೆಚ್ಚು ಒತ್ತು ಕೊಡಬೇಕಾಗಿದೆ. ಪಾಶ್ಚಾತ ರಾಷ್ಟ್ರಗಳು ಶಿಕ್ಷಣದ ಭಾಗವಾಗಿ ಆರ್ಥಿಕ ಸಾಕ್ಷರತೆಯನ್ನು ಕೈಗೊಂಡಿವೆ. ದುಡ್ಡಿರುವವರೂ ಕೂಡ ಆರ್ಥಿಕ ಸಮಸ್ಯೆಗಳಿಗೆ ಸಿಲುಕಿಕೊಳ್ಳುತ್ತಿದ್ದಾರೆ. ಕಾರಣ ಅವರು ಹಣದ ನಿರ್ವಹಣೆಯ ಬಗ್ಗೆ ತಿಳಿದುಕೊಂಡಿಲ್ಲ. ಹೀಗಾಗಿ ನಾವು ಎಷ್ಟೇ ಹಣ ಗಳಿಸಿದರೂ ಅದರ ನಿರ್ವಹಣೆಯ ಬಗ್ಗೆ ತಿಳಿದುಕೊಂಡು ವ್ಯವಹರಿಸಬೇಕು ಎಂದು ಹೇಳಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಸಂಸದ ಸಾಗರ ಈಶ್ವರ ಖಂಡ್ರೆ, ರಾಷ್ಟ್ರೀಕೃತ ಬ್ಯಾಂಕ್ ಗಳಲ್ಲಿ ಸಾಲ ಪಡೆಯಲು ಹರಸಾಹಸ ಪಡಬೇಕಾಗುತ್ತದೆ. ಆದರೆ ಸಿದ್ದೇಶ್ವರ ಅರ್ಬನ್ ಮಲ್ಟಿಸ್ಟೇಟ್ ಸಂಸ್ಥೆಯಲ್ಲಿ ಸಲೀಸಾಗಿ ಸಾಲ ಪಡೆಯಬಹುದು. ಬ್ಯಾಂಕ್‌ಗಳಿಂದ ಸಾಲ ಪಡೆಯುವ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಬೇಕು. ಹಣದಿಂದ ಹಣ ಬೆಳೆಸುವ ಕಾರ್ಯವಾಗಬೇಕು. ಅಂತಹ ಕೆಲಸಕ್ಕೆ ಸಾಲ ಪಡೆದು, ಸರಿಯಾಗಿ ಸಾಲ ತೀರಿಸುವ ಕಾರ್ಯವಾಗಬೇಕು ಎಂದು ಹೇಳಿದರು.

ಹಿರೇಮಠ ಸಂಸ್ಥಾನದ ಪೀಠಾಧಿಪತಿ ಶ್ರೀ ಗುರುಬಸವ ಪಟ್ಟದ್ದೇವರು ಮಾತನಾಡಿ, ಕಾಕನಾಳೆ ಮನೆತನ ಸೇವಾ ಕ್ಷೇತ್ರದಲ್ಲಿದೆ. ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಅವರು ಮಾಡಿದ ಸೇವೆ ಅನುಪಮ ಎಂದು ಹೇಳಿದರು. ಪ್ರಶಾಂತ ಓಂಕಾಂತ ಕಾಕನಾಳೆ ಪ್ರಾಸ್ತಾವಿಕವಾಗಿ ಮಾತನಾಡಿದರು.

ಬಸವಕಲ್ಯಾಣ ಅನುಭವ ಮಂಟಪ ಅಧ್ಯಕ್ಷ ನಾಡೋಜ ಡಾ|ಬಸವಲಿಂಗ ಪಟ್ಟದ್ದೇವರು ದಿವ್ಯ ಸಾನಿಧ್ಯ ವಹಿಸಿ ಅವರು ಮಾತನಾಡಿದರು. ಕಾರ್ಯಕ್ರಮದಲ್ಲಿ ಲೋಕಮುದ್ರಾ ಗ್ರೂಪ್ ಸಂಸ್ಥಾಪಕ ಸುಭಾಷ ಶೇಡೋಳೆ, ಮಕ್ಕಳು ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶಶಿಧರ ಕೋಸಂಬೆ, ಸಂಸ್ಥೆಯ ಸಿಇಓ ಜ್ಯೋತಿ ಅಂಬರೀಶ, ಕಿರಣ ನೀಲಂಗೆ, ಆಕಾಶ ಪಾಟೀಲ ಉಪಸ್ಥಿತರಿದ್ದರು.

ಸಂಗಮೇಶ ಪಾಟೀಲ ಸ್ವಾಗತಿಸಿದರು. ಲಕ್ಷಿ ??ೀ ಬಾಗಲಕೋಟೆ ನಿರೂಪಿಸಿದರು. ಓಂಕಾಂತ ಕಾಕನಾಳೆ ವಂದಿಸಿದರು.

# ಗುರು ಹಿರಿಯರನ್ನು ಪೂಜ್ಯ ಭಾವನೆಯಿಂದ ಕಾಣಿರಿ



ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ : ಜ.27– ಗುರು ಹಿರಿಯರನ್ನು ಪೂಜ್ಯ ಭಾವನೆಯಿಂದ ಕಾಣಿರಿ ಎಂದು ಯಾದಗಿರಿ ಕಲಬುರ್ಗಿ ಹಾಗೂ ಹುಮನಾಬಾದ ಹಾಗೂ ಇಲ್ಲಿನ ಪರಮಪೂಜ್ಯ ಶ್ರೀ ಶ್ರೀ ಶ್ರೀ ಶ್ರೀ ನಿವಾಸ ಮಹಾಸ್ವಾಮಿಜಿಗಳು ತಿಳಿಸಿದರು. ನಗರದ ಸರ್ವೋದಯಾ ಕಾಲೊನಿಯಲ್ಲಿ ಜಗದ್ಗುರು ಶ್ರೀ ಮೌನೇಶ್ವರ 15 ನೇಯ ಜಾತ್ರಾ ಮಹೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ ಸಮಾರಂಭ ಬಹು ಉತ್ತಮ ವಾಗಿ ಹಮ್ಮಿಕೊಂಡಿದ್ದಿರಿ ತಂದೆ ತಾಯಿಗೂ ಸಹ ಉತ್ತಮವಾಗಿ ಕಾಣಿರಿ ನಮಗೆಲ್ಲರಿಗೂ ಮೌನೇಶರ ಶುಭ ಆಶೀರ್ವಾದ ನಿಡಲಿ ಎಂದು ಶುಭಾ ಹಾರೈಸಿದ್ದರು. ಶಾಹಪೂರದ ಪರಮಪೂಜ್ಯ ಶ್ರೀ ಶ್ರೀ ಶ್ರೀ ಕಾಳ ಹಸ್ತೆಂದ್ರ ಮಹಾಸ್ವಾಮಿಜಿಗಳು. ಮಾತನಾಡಿ ಎಲ್ಲರಿಗೂ ವಳಿತನ್ನು ಮಾಡುವ ಧರ್ಮ ಪಂಚಾಳ ಧರ್ಮ ವಾಗಿದೆ ಈ ಜನಾಂಗ ಕಾಯಕ ಜೀವಿಗಳಾಗಿದ್ದಾರೆ ಎಂದರು. ತಿಪುರಾಂತಿನ ಪೂಜ್ಯ ಶ್ರೀ ಡಾ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ ಮನದ ಮೈಲಿಗೆ ಹೋಗಿಸುವ ಜಾತ್ರೆ ಇದಾಗಿದೆ ಹಿಂದು ಮುಸ್ಲಿಂ ಭಾವ್ಯಕದ ಸಮಾಜವೆ ಪಂಚಾಳ ಜನಾಂಗದ ಎಂದರು. ಖೇಳಗಿ ಪೂಜ್ಯ ಶ್ರೀ. ಮ.ನಿ.ಪ್ರ. ಶಿವಲಿಂಗೇಶ್ವರ ಮಹಾಸ್ವಾಮಿಜಿ ಮಾತನಾಡಿ ತನಗಾಗಿ ಬದುಕು ಬಾರದು ಸಮಾಜಕ್ಕಾಗಿ ಧರ್ಮ ಕಾಗಿ ಬದುಕಿದರೆ ಆ ಬದುಕು ಶಾಶ್ವತ ಎಂದರು. ವೇದಿಕೆಯ ಮೇಲೆ ಸಸ್ತಾಪುರ ಬೇಟಬಾಲಕುಂದಾ ಪೂಜ್ಯ ಶ್ರೀ ಸದಾನಂದ ಅಪ್ಪಗಳ. ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಮಾಲಾ ಬಿ ನಾರಾಯಣರಾವ. ಮಾಜಿ ವಿಧಾನ ಪರಿಷತ್ ಸದಸ್ಯ ವಿಜಯಸಿಂಗ. ಕಾಂಗ್ರೆಸ್ ಮುಖಂಡರಾದ ಧನರಾಜ ತಾಡಂಪ್ಪಳ್ಳಿ. ಮಾಜಿ ವೆವಸ್ಥಾಪಕ ನಿರ್ದಶಕ ಮಲ್ಲಿಕಾರ್ಜುನ ಗುಗೆ. ನಗರಸಭೆಯ ಸದಸ್ಯ ನಿರ್ಮಲಾ ಶಿವಣಕರ್ ಮಾತನಾಡಿದರು. ಈ ಸಂದರ್ಭದಲ್ಲಿ ಭಾರತೀಭಾಯಿ ಗುರುತಾಯಿ. ಬೀದರ ವಿಶ್ವಕರ್ಮ ಅಧ್ಯಕ್ಷರಾದ ಮಹೇಶ ಪಂಚಾಳ. ಗುರುನಾಥ ಅರ್ಚಕ. ಬಾಬುರಾವ ಚಿಮಕೋಡ. ಪ್ರವಚನಕಾರ ವೇ/ಮಲ್ಲಿಕಾರ್ಜುನ ಶಾಸ್ತ್ರಿಗಳು ಅಲ್ಲದೆ ಸಮಾಜದ ಅಧ್ಯಕ್ಷರಾದ ಈರಣ್ಣ ಎಸ್. ಪಂಚಾಳ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷರಾದ ಜಯಪ್ರಕಾಶ್ ಎಮ್. ಪೋದ್ದಾರ್. ಸಹ ಕಾರ್ಯದರ್ಶಿ ಲಕ್ಷ್ಮೀ ಕಾಂತ ಪಂಚಾಳ. ಖಜಾಂಚಿ ಜಗನ್ನಾಥ ಬಿ. ಪಂಚಾಳ. ಉಪ ಖಜಾಂಚಿಗಳಾದ ಕ್ರಾಂತಿಕುಮಾರ ಪಂಚಾಳ. ಸದ್ಯಸರಾದ ಸೂರ್ಯಕಾಂತ ಪಂಚಾಳ. ವಿಧ್ಯಾದರ ಪಂಚಾಳ. ಸುಭಾಷ ಪಂಚಾಳ. ವಿಶ್ವನಾಥ ಪಾಂಚಳ. ಶಿವಶಂಕರ ಹರಿಶ್ಚಂದ್ರ ಪಂಚಾಳ. ವಿರಣ್ಣ ಪಂಚಾಳ. ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು. ಸ್ವಾಗತ ಪ್ರಧಾನ ಕಾರ್ಯದರ್ಶಿ ವೈಜನಾಥ ಬಿ. ಪಂಚಾಳ. ರವಿ ಶಂಕರ್ ಪಂಚಾಳ ನಿರೂಪಿಸಿದರು. ಇದಕ್ಕೂ ಮೊದಲು ಸದ್ಗುರು ಮೌನೇಶ್ವರ ಉತ್ಸವ ಮೂರ್ತಿಯ ಪಲ್ಲಕಿ ಮೆರವಣಿಗೆ ಕುಂಬ ಕಳಸದೊದಿಗೆ ಪುರವಂತರ ಸೇವೆಯೊಂದಿಗೆ ನಗರದ ಪ್ರಮುಖ ವೃತ್ತಗಳ ಮುಖಾಂತರ ದೇವಸ್ಥಾನಕ್ಕೆ ಬಂದು ತಲುಪಿತು.

# ಸಂವಿಧಾನವು ಮೂಲಭೂತ ಹಕ್ಕು ಹಾಗೂ ಕರ್ತವ್ಯ ಬಗ್ಗೆ ತಿಳಿಸಿದೆ.



ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ : ಜ.27– ನಗರದ ಶ್ರೀ ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಅಡಿಯಲ್ಲಿ ಬರುವ ಎಲ್ಲಾ ಶಾಲಾ–ಕಾಲೇಜುಗಳ ಒಕ್ಕೂಟದೊಂದಿಗೆ ಮಹಾವಿದ್ಯಾಲಯದ ಆವರಣದಲ್ಲಿ 76ನೇ ಗಣರಾಜ್ಯೋತ್ಸವ ಸಮಾರಂಭ ಆಚರಿಸಲಾಯಿತು. ಅಧ್ಯಕ್ಷತೆ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ಬಸವರಾಜ ಎವಲೆ ಧ್ವಜಾರೋಹಣ ನೆರವೇರಿಸಿ ಮಾತನಾಡಿ ಭಾರತ ಸಂವಿಧಾನ ಕುರಿತು ಮಾತನಾಡುತ್ತಾ ನಮ್ಮ ದೇಶದ ಸಂವಿಧಾನ ರಚನೆಯಲ್ಲಿ ಡಾ. ಬಾಬಾ ಸಾಹೇಬ ಅಂಬೇಡ್ಕರ ಪಾತ್ರ ಪ್ರಮುಖ ವಾದದ್ದು ಜೊತೆಗೆ ಕರಡು ಸಮಿತಿಯ ಅಧ್ಯಕ್ಷತೆ ವಹಿಸಿ ವಿವಿಧ ದೇಶಗಳ ಸಂವಿಧಾನಗಳನ್ನು ಅಧ್ಯಯನ ಮಾಡಿ ಸುಭದ್ರ ಬೃಹತ ಸಂವಿಧಾನವನ್ನು ರಚಿಸಿ ಶಾಸಕಾಂಗ ಕಾರ್ಯಾಂಗ ನ್ಯಾಯಾಂಗ ಗಳಿಗೆ ಅಧಿಕಾರ ವಿಂಗಡಿಸಿ ಸರ್ವರಿಗೂ ಸಮಾನತೆ ಹಾಗೂ ಮೂಲಭೂತ ಹಕ್ಕ ಗಳನ್ನು ಒದಗಿಸಿಕೊಟ್ಟಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಪ್ರತಿಭಾ ಕಾರಂಜಿಯಲ್ಲಿ ಪ್ರಥಮ ಹಾಗೂ ದ್ವಿತೀಯ ಬಹುಮಾನ ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು. ಹಾಗೂ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೂ ಮತ್ತು 32 ಎನ್.ಸಿ.ಸಿ. ಬಟಲಿಯನ್ ನಲ್ಲಿ ನಮ್ಮ ಮಹಾ ವಿದ್ಯಾಲಯದಿಂದ ವಿವಿಧ ಸ್ಪರ್ಧೆಯಲ್ಲಿ ಭಾಗವಹಿಸಿದ ಜಯಗಳಿಸಿದ ಎನ್ ಸಿ.ಸಿ. ಕೇಡೆಟ್ ಗಳಿಗೆ ಮೆಡಲ್ ಹಾಗೂ ಪ್ರಮಾಣ ಪತ್ರ ವಿತರಿಸಿದರು. ಜೊತೆಗೆ ಎನ್. ಸಿ.ಸಿ. ಕೇಡೆಟ್ ಗಳಿಂದ ಗೌರವ ಪಡೆದುಕೊಂಡರು. ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಎಲ್ಲ ಶಾಲಾ – ಕಾಲೇಜುಗಳಾದ ರಾಚಯ್ಯ ಮಠಪತಿ, ವಿದ್ಯಾಧರ್ ದತ್ತರಗೆ, ಸಿದ್ರಾಮ ಮಾಲಿ ಪಾಟೀಲ್, ಲೋಕೇಶ್ ಮನ್ನಾಳೆ, ಜ್ಯೋತಿ ಎಸ್, ಹಾಗೂ ಐಕ್ಯೂ ಎಸಿ ಸಂಯೋಜಕರಾದ ಡಾ. ಶಿವಕುಮಾರ್ ಪಾಟೀಲ್ ಎನ್. ಸಿ.ಸಿ. ಅಧಿಕಾರಿಗಳಾದ ಭೀಮಾಶಂಕರ ಪೂಜಾರಿ, ಎನ್. ಎಸ್.ಎಸ್ ಅಧಿಕಾರಿಗಳಾದ ಡಾ. ಸುರೇಶ ಎಚ್ ಆರ್, ಗ್ರಂಥ ಪಾಲಕರಾದ ಸೂರ್ಯಕಾಂತ ನಾಸೆ, ದೈಹಿಕ ನಿರ್ದೇಶಕರಾದ ಶಿವಾನಂದ್ ಬಿರಾದರ, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಉಪಸ್ಥಿತರಿದ್ದರು. ಪ್ರೊ. ವಿಠೋಭಾ ಡೊಣೆಗೌಡರ ಸ್ವಾಗತ. ನಿರೂಪಿಸಿ. ವಂದಿಸಿದರು.

ತಿಂಗಳ ಅನುಭವ ಮಂಟಪ – 1 ಹಾಗೂ ಶಿವಯೋಗಿ

# ಸಿದ್ದರಾಮೇಶ್ವರ ಜಯಂತಿ ಹಾಗೂ ನಿಜಶರಣ ಅಂಬಿಗರ ಚೌಡಯ್ಯ ಜಯಂತಿ ಇಂದು.

ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ :– ಇಲ್ಲಿನ ಅನುಭವ ಮಂಟಪದ ಪರಿಸರದಲ್ಲಿ ನಡೆಯಲಿರುವ ಇಂದು ತಿಂಗಳ ಅನುಭವ ಮಂಟಪ – 1 ಹಾಗೂ ಶಿವಯೋಗಿ ಸಿದ್ದರಾಮೇಶ್ವರ ಜಯಂತಿ ಹಾಗೂ ನಿಜಶರಣ ಅಂಬಿಗರ ಚೌಡಯ್ಯ ಜಯಂತಿ ದಿನಾಂಕ – 28 – 1 – 2025 ರಂದು ಸಾಯಂಕಾಲ 5 ಗಂಟೆಗೆ ನಡೆಯಲಿದೆ. ಈ ಕಾರ್ಯಕ್ರಮದಲ್ಲಿ ದಿವ್ಯಸಾನಿಧ್ಯ ಅನುಭವ ಮಂಟಪದ ಟ್ರಸ್ಟಿನ ಅಧ್ಯಕ್ಷರಾದ ನಾಡೋಜ ಡಾ. ಬಸವಲಿಂಗ ಪಟ್ಟದೇವರು ವಹಿಸಲಿದ್ದಾರೆ. ಉದ್ಘಾಟನೆ ಹಾವೇರಿ ಶ್ರೀ ನಿಜಶರಣ ಅಂಬಿಗರ ಚೌಡಯ್ಯನವರ ಗುರುಪೀಠ ನರಸೀಪುರದ ಪರಮಪೂಜ್ಯ ಜಗದ್ಗುರು ಶ್ರೀ ಶಾಂತ ಭೀಷ್ಮ ಚೌಡಯ್ಯ ಮಹಾಸ್ವಾಮಿಜಿ. ನೇತ್ರತ್ವ ಭಾಲ್ಕಿಯ ಸಂಸ್ಥಾನ ಹಿರೇಮಠದ ಪೂಜ್ಯ ಶ್ರೀ ಗುರುಬಸವ ಪಟ್ಟದ್ದೇವರು. ಅಧ್ಯಕ್ಷತೆ ಅನುಭವ ಮಂಟಪ ಸಂಚಾಲಕರಾದ ಪೂಜ್ಯ ಶ್ರೀ ಶಿವಾನಂದ ದೇವರು. ಅನುಭಾವ ಹುಮನಾಬಾದ ಹಿರಿಯ ಸಾಹಿತಿಗಳಾದ ಡಾ. ಸೋಮನಾಥ ಯಾಳವಾರ. ಮುಖ್ಯ ಅತಿಥಿಗಳಾಗಿ ಮಾಣಿಕರಾವ ವಾಡೇಕರ. ಹಾಗೂ ಶಾಂತರಾಮ ರಾಜೋಳೆ. ನಗರ ಸಭೆಯ ಅಧ್ಯಕ್ಷರಾದ ಎಂ. ಡಿ. ಶಗಿರೋದಿನ. ನಗರ ಸಭೆಯ ಉಪಾಧ್ಯಕ್ಷರು ಲಕ್ಷ್ಮಿಬಾಯಿ ಭೀಮಶಾ ಪುಲೆ. ಸಂಚಾಲನೆ ವೀರಣ್ಣ ಕುಂಬಾರ. ದಾಸೋಹ ಸೇವೆ ಶರಣೆ ವಿಧ್ಯಾವತಿ. ಶರಣೆ ವಿಶ್ವನಾಥ ಸಜ್ಜನ ಶೆಟ್ಟಿ ಬಗದಲ. ಈ ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕು ಎಂದು ಪ್ರಕಟಣೆ ತಿಳಿಸಿದ್ದಾರೆ.

# ರಾಯಣ್ಣ ಪುಣ್ಯಸ್ಮರಣೆ ಆಚರಣೆ

ಮಲ್ಲಮ್ಮ ನುಡಿ ವಾರ್ತೆ

ಇಂಡಿ : ತಾಲೂಕಿನ ಶಿರಗೂರು ಗ್ರಾಮದಲ್ಲಿ 76ನೇ ಗಣರಾಜ್ಯೋತ್ಸವ ಹಾಗೂ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಅವರ ಪುಣ್ಯಸ್ಮರಣೆ ದಿನದಂದು ವೃತ್ತದಲ್ಲಿ ರಾಯಣ್ಣ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಬೆಳಗಿನ ಜಾವ 7:00ಗೆ ಧ್ವಜಾರೋಣ ನೆರವೇರಿಸಲಾಯಿತು. ಈ ವೇಳೆ ಗ್ರಾಪಂ ಮಾಜಿ ಅಧ್ಯಕ್ಷರಾದ ಬೀರಪ್ಪ ನಾವದಗಿ ಧ್ವಜಾರೋಹಣವನ್ನು ನೆರವೇರಿಸಿದರು. ಗ್ರಾಮದ ಯುವ ಮುಖಂಡರಾದ ಅನಿಲ್ ಗೌಡ್ ಪಾಟೀಲ್, ರಾಚಯ್ಯ ಹಿರೇಮಠ, ವಿಠ್ಠಲ್ ಪೂಜಾರಿ, ಗಜಾನಂದ್ ಬಳಗಾರ, ವಿಶ್ವನಾಥ್ ಹಡಪದ್, ನಿಂಗಪ್ಪ ನಾವದಗಿ, ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರು ಸೇರಿದಂತೆ ಮತ್ತಿತ್ತರು ಉಪಸ್ಥಿತರಿದ್ದರು.

# ಬಸವಲಿಂಗ ಶಿವಾಚಾರ್ಯರ ಮೂರ್ತಿ ಪ್ರಾಣಪ್ರತಿಷ್ಠಾಪನೆಗೆ ಸಂಸದರಿಗೆ ಆವ್ಹಾನ



ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ: ತಾಲೂಕಿನ ಖಟಕ ಚಿಂಚೋಳಿ ಗ್ರಾಮದ ಹುಗ್ಗೆಳ್ಳಿ ಹಿರೇಮಠ ಸಂಸ್ಥಾನದಲ್ಲಿ ಫೆ. 3 ರಂದು ನಡೆಯಲಿರುವ ಮಹಾತಪಸ್ವಿ ಶ್ರೀ ಬಸವಲಿಂಗ ಶಿವಾಚಾರ್ಯರ ನೂತನ ಮೂರ್ತಿ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮಕ್ಕೆ ಬೀದರ ಕ್ಷೇತ್ರದ ಸಂಸದ ಸಾಗರ ಈಶ್ವರ ಖಂಡ್ರೆ ಯವರಿಗೆ ಶ್ರೀಮಠದ ಶ್ರೀ ಬಸವಲಿಂಗ ಮಹಾಸ್ವಾಮಿಗಳು ಸೋಮವಾರ ಆವ್ಹಾನ ನೀಡಿದರು.

ಆಹ್ವಾನ ಪತ್ರಿಕೆ ಸ್ವೀಕರಿಸಿ ಮಾತನಾಡಿದ ಸಂಸದ ಸಾಗರ ಖಂಡ್ರೆಯವರು, ಶ್ರೀ ಬಸವಲಿಂಗ ಶಿವಾಚಾರ್ಯರು ಮಹಾತಪಸ್ವಿಯಾಗಿದ್ದರು. ಅವರು ಮಾಡಿರುವ ಸಂಕಲ್ಪದಿಂದ ಹಲವಾರು ವ್ಯಕ್ತಿಗಳು ಉತ್ತಮ ಮಾರ್ಗ ಕಂಡು ಕೊಂಡಿದ್ದಾರೆ. ಅವರ ಮಾರ್ಗದಲ್ಲಿಯೇ ನಡೆಯುತ್ತಿರುವ ಶ್ರೀ ಬಸವಲಿಂಗ ಸ್ವಾಮಿಗಳು ಭಕ್ತರಿಗೆ ಸಂಸ್ಕಾರಯುತ ಜೀವನ ನಡೆಸಲು ಮಾರ್ಗದರ್ಶನ ಮಾಡುತ್ತಿರುವುದು ಹೆಮ್ಮೆಯ ವಿಷಯ ಎಂದು ಹೇಳಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಕಾಶ ಮಾಶೆಟ್ಟೆ, ನಿವೃತ್ತ ಮುಖ್ಯ ಶಿಕ್ಷಕ ಗುರಯ್ಯಾ ಸ್ವಾಮಿ ಮತ್ತಿತರರು ಇದ್ದರು.

# ಎಸಿ, ಎಸ್ಟಿ ಹಾಸ್ಟೆಲ್‌ಗೆ ಶಾಸಕ ಆರ್.ವಿ.ಎನ್. ದಿಢೀರ್ ಭೇಟಿ



ಮಲ್ಲಮ್ಮ ನುಡಿ ವಾರ್ತೆ

ಸುರಪುರ : ಸಮಾಜ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರ ಬಾಲಕರ ವಿದ್ಯಾರ್ಥಿನಿಲಯಕ್ಕೆ ಶಾಸಕ ರಾಜಾ ವೇಣುಗೋಪಾಲ್ ನಾಯಕ್ ಸೋಮವಾರ ಮುಂಜಾನೆ ದಿಢೀರ್ ಭೇಟಿ ನೀಡಿದರು.

ಹಾಸ್ಟೆಲ್‌ನಲ್ಲಿರುವ ಸೌಲಭ್ಯಗಳ ಕುರಿತು ವಾರ್ಡ್‌ನ್ ಅವರಿಂದ ಮಾಹಿತಿಪಡೆದ ಅವರು, ಉಗ್ರಾಣಕ್ಕೆ ಹೋಗಿ ಆಹಾರ ಪದಾರ್ಥಗಳ ಗುಣಮಟ್ಟವನ್ನು ಪರಿಶೀಲನೆ ನಡೆಸಿದರು. ಹಾಸ್ಟೆಲ್ ಆವರಣ, ಕೊಠಡಿಗಳು, ಶೌಚಾಲಯ ಹಾಗೂ ಅಡುಗೆ ಕೋಣೆಗಳ ಸ್ವಚ್ಛತೆಯನ್ನು ವೀಕ್ಷಿಸಿದರು.

ಮೆನು ಪ್ರಕಾರ ತಿಂಡಿ, ಊಟ ಕೊಡುವುದಿಲ್ಲ

ವಾರ್ಡ್‌ನ್ ನಮ್ಮನ್ನು ಗದರಿಸುತ್ತಾರೆ. ಬೆದರಿಕೆಯಿಂದ ನಮ್ಮನ್ನು ಇಟ್ಟಿದ್ದಾರೆ. ಹಾಲಿಗೆ ಹೆಚ್ಚು ನೀರು ಬೆರೆಸಿಕೊಡುತ್ತಾರೆ. ನೋಡಿ ಸರ್ ಎಂದು ವಿದ್ಯಾರ್ಥಿಗಳು ಹಾಲಿನ ಲೋಟ ತಂದು ತೋರಿಸಿದ್ದರು. ಹಾಗೆಯೇ ಮಧ್ಯಾಹ್ನದ ಚಪಾತಿಯನ್ನು ರಾತ್ರಿ ಕೊಡುತ್ತಾರೆ. ಮೆನು ಪ್ರಕಾರ ತಿಂಡಿ, ಊಟ ಕೊಡುವುದಿಲ್ಲ ಎಂದು ಸೇರಿದಂತೆ ಹಲವು ಸಮಸ್ಯೆಗಳನ್ನು ಅಲವತ್ತುಕೊಂಡರು.

**ಹಾಸ್ಟೆಲ್ ವಾರ್ಡನ್ ಗೆ ಶಾಸಕರ ಕ್ಲಾಸ್..!**

ವಾರ್ಡನ್ (ಮೇಲ್ವಿಚಾರಿ) ಮಕ್ಕಳಿಗೆ ಮೂಲಭೂತ ಸೌಕರ್ಯ ಕಲ್ಪಿಸುವಲ್ಲಿ ವಿಫಲರಾಗಿದ್ದಾರೆ. ಸಮಯ ಪರಿಪಾಲನೆ ಮಾಡಲ್ಲ, ಸರಿಯಾದ ಬಾಳೆಹಣ್ಣು ವಿತರಣೆ ಮಾಡುವುದಿಲ್ಲ ಎಂದು ಮಕ್ಕಳಿಂದ ದೂರು ಬಂದ ಹಿನ್ನೆಲೆ ಇಂದು ಮಾನ್ಯ ಶಾಸಕರು ಶಾಲೆಗೆ ದಿಢೀರ್ ಭೇಟಿ ನೀಡಿ ವಾರ್ಡನ್ ರವರಿಗೆ ಎಚ್ಚರಿಕೆ ನೀಡಿದರು ಮಕ್ಕಳ ಜೊತೆ ಸೌಜನ್ಯ ರೀತಿ ವರ್ತಿಸಬೇಕೆಂದು ಹೇಳಿದರು.

ಪರಿಶಿಷ್ಟ ಬಾಲಕರ ವಿದ್ಯಾರ್ಥಿ ನಿಲಯ ಆವರಣದಲ್ಲೇ ನಿಂತ ಚರಂಡಿ ನೀರು ಶಾಸಕರಿಗೆ ಆಹ್ವಾನ ನೀಡಿತು. ಹಾಸ್ಟೆಲ್ ಸುತ್ತ ಜಾಲಿ, ಕುರುಚಲು ಬೆಳೆದಿದ್ದು, ಇಂಗು ಗುಂಡಿ ಸಹ ನಿರ್ಮಿಸದೆ ಇರುವುದನ್ನು ಕಂಡ ಶಾಸಕರು, ವಾರ್ಡನ್ ನಿರ್ಲಕ್ಷದ ವಿರುದ್ಧ ಕಿಡಿ–ಕಾರಿದರು. ಸ್ವಚ್ಛತೆಯತ್ತ ಗಮನ ಹರಿಸುವಂತೆ ಸಲಹೆ ನೀಡಿದರು.

ವಿದ್ಯಾರ್ಥಿಗಳೊಂದಿಗೆ ಶಾಸಕರು ಬೆಳಗಿನ ತಿಂಡಿಯನ್ನು ಸವಿದರು ನಂತರ ಶಾಸಕರು ಮಾತನಾಡಿ 'ಇನ್ನು ಮುಂದೆ ಹೆದರಬೇಡಿ, ನಿಮಗೆ ಮೆನು ಪ್ರಕಾರವೇ ತಿಂಡಿ, ಊಟ ಕೊಡುತ್ತಾರೆ. ಧೈರ್ಯವಾಗಿರಿ, ನಿಮಗೆ ಸಮಸ್ಯೆ ಎದುರಾದರೆ ತಕ್ಷಣ ನನಗೆ ಕರೆ ಮಾಡಿ' ಎಂದು ಧೈರ್ಯ ತುಂಬಿ ಸಾಂತ್ವನ ಹೇಳಿದರು.

ಶ್ರೀ ವೀರಭದ್ರೇಶ್ವರ ಜಾತ್ರಾ ಮಹೋತ್ಸವದ ನಿಮಿತ್ತ ಜರುಗಿದ

# ಶ್ರೀ ವೆಂಕಟೇಶ್ವರ ಗೋಲ್ಡನ್ ಸಿಟಿ ವತಿಯಿಂದ ಭಕ್ತಾಧಿಗಳಿಗೆ ಅನ್ನ ದಸೋಹ




ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ:ಜ.26ರಂದು ಜರುಗಿದ ಶ್ರೀ ವೀರಭದ್ರೇಶ್ವರ ಜಾತ್ರಾ ಮಹೋತ್ಸವದ ನಿಮಿತ್ತ ಪಟ್ಟಣದ ಗಾದಾ ಕಾಂಪ್ಲೇಕ್ಸ್‌ನಲ್ಲಿರುವ ಶ್ರೀ ವೆಂಕಟೇಶ್ವರ ಗೋಲ್ಡನ್ ಸಿಟಿ ಕಛೇರಿ ಹುಮನಾಬಾದ ವತಿಯಿಂದ ಹಮ್ಮಿಕೊಂಡಿದ್ದ ಭಕ್ತಾಧಿಗಳಿಗೆ ನಿಖಿಲ್‌ರವರಿಂದ ಅನ್ನದಾಸೋಹಕ್ಕೆ ಚಾಲನೆ ನೀಡಲಾಯಿತ್ತು. ಸಾವೀರಾರು ಭಕ್ತಾಧಿಗಳು ಅನ್ನದಾಸೋಹದಲ್ಲಿ ಪಾಲ್ಗೊಂಡು ಅನ್ನ ಸಾರು ಸವಿದರು. ಈ ಸಂದರ್ಭದಲ್ಲಿ ಅಹ್ಮದ್ ಖಾನ್ ಪಟೇಲ್, ಮಲ್ಲಿಕಾರ್ಜುನ ಕರಿಬಸನೂರ್, ಪ್ರಭು ಬಿರಾದಾರ, ಪ್ರೇಮ್ ಉಡಬಾಳ, ರವೀಂದ್ರ ಭಮ್ಮಶೆಟ್ಟಿ ಧುಮ್ಮನಸೂರ, ಶಿವಕುಮಾರ ಹುಮನಾಬಾದ, ಮಂಜುನಾತ ಧುಮ್ಮನಸೂರ, ಆಕಾಶ ರಾಜಗೀರಿ, ಸಿದ್ದು ಗುಮ್ಮಾ ಇದ್ದರು.



ಚಿಟಗುಪ್ಪ: ಪಟ್ಟಣದ ಪುರಸಭೆಯ ವಾರ್ಡ್ ಸಂಖ್ಯೆ 03ರಲ್ಲಿರುವ ಸುಭಾಷ ವೃತ್ತದಲ್ಲಿ 76ನೇ ಗಣರಾಜ್ಯೋತ್ಸವ ಧ್ವಜಾರೋಹಣ ಪುರಸಭೆ ಸದಸ್ಯೆ ಪದ್ಮಾವತಿ ಜವಳಿ ನೆರೆವೇರಿಸಿದರು. ಈ ಸಂದರ್ಭದಲ್ಲಿ ತುಕರಾಮ ಬಡಗು, ರಾಜಕುಮಾರ್ ಗುತ್ತೆದಾರ್, ಲಕ್ಷ್ಮಣ ಭೋವಿ, ದತ್ತು ತೇಲಂಗ, ವಿಠಲರಾವ ತೇಲಂಗ, ಪ್ರಶಾಂತ ಜವಳಿ, ಯಲ್ಲಾಲಿಂಗ ಕಲ್ಲೂರ್, ರಾಕೇಶ್ ಕಟಗಿ ಸೇರಿದಂತೆ ಇತರರು ಉಪಸ್ಥಿತರಿದ್ದರು. (ಮಲ್ಲಮ್ಮ ನುಡಿ ಚಿತ್ರ)

# ಕೋಳಿ ಮೊಟ್ಟೆ ಸರಬರಾಜು ಶೆಡ್ ಉದ್ಘಾಟನೆ



ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ: ಸಿದ್ದೇಶ್ವರ್ ಗ್ರಾಮ ಪಂಚಾಯತನ ನಕ್ಷತ್ರ ಸ್ವ–ಸಹಾಯ ಸಂಘದ ಸದಸ್ಯರು ಮರೂರ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿದ "ಕೋಳಿ ಮೊಟ್ಟೆ ಸರಬರಾಜು ಶೆಡ್"ನ್ನು ಜಿಪಂ ಯೋಜನಾ ನಿರ್ದೇಶಕರು ಮಾನ್ಯ ಜಗನ್ನಾಥ್ ಮೂರ್ತಿ ಸರ್ ಅವರು ಉದ್ಘಾಟಿಸಿದರು.

ಕಾರ್ಯಕ್ರಮದಲ್ಲಿ ಎನ್ ಆರ್ ಎಲ್ ಎಂ ಯೋಜನೆಯ ಜಿಲ್ಲಾ ವ್ಯವಸ್ಥಾಪಕರು ಶ್ರೀ ಭರತ್ ಮೂಲಗೆ, ಭಾಲ್ಕಿ ತಾಪಂ ಯೋಜನೆಯ ತಾಲ್ಲೂಕು ಕಾರ್ಯಕ್ರಮ ವ್ಯವಸ್ಥಾಪಕಿ ಸಾಧನಾ ಗೌಡಗಾಂವೆ, ಶ್ವೇತಾ, ಭಾಲ್ಕಿ ತಾಪಂ ಶ್ರೀಮಂತ ಸರ್, ಪ್ರಭು ವಲಯ ಮೇಲ್ವಿಚಾರಕ ಹಾಗೂ ಗ್ರಾಪಂ ಸಿಬ್ಬಂದಿ ಕಾರ್ಯಕ್ರಮದಲ್ಲಿ ಹಾಜರಿದ್ದರು.

# ಕುಮನೂರ್ ಗ್ರಾಮದಲ್ಲಿ 76ನೇ ಗಣರಾಜ್ಯೋತ್ಸವ ವಿಜೃಂಭಣೆಯಿಂದ ಆಚರಣೆ

ಮಲ್ಲಮ್ಮ ನುಡಿ ವಾರ್ತೆ

ವಡಗೇರಿ ತಾಲೂಕು ಕುಮನೂರ್ ಗ್ರಾಮದಲ್ಲಿ 76 ನೇ ಗಣರಾಜ್ಯೋತ್ಸವ ನಿಮಿತ್ಯವಾಗಿ ಸಾಂಸ್ಕೃತಿಕ ಕಾರ್ಯಕ್ರಮ ಅಮ್ಮಿಕೊಂಡಿದ್ದು ಈ ಕಾರ್ಯಕ್ರಮದಲ್ಲಿ ಧ್ವಜಾರೋಹಣವನ್ನು ಖಆಒಅ ಅಧ್ಯಕ್ಷರು, ಉಪಾಧ್ಯಕ್ಷರು ಶಾಲೆಯ ಮಖ್ಯ ಗುರುಗಳು ಮತ್ತು ಸಿಬ್ಬಂದಿ ವರ್ಗ ಹಾಗೂ ಊರಿನ ಗಣ್ಯರು, ಪೋಷಕರು ಪಾಲ್ಗೊಂಡು ವಿಜೃಂಭಣೆಯಿಂದ ಆಚರಿಸಲಾಯಿತು. ಈ ಕಾರ್ಯಕ್ರಮದಲ್ಲಿ ಸಂವಿಧಾನ ಶಿಲ್ಪಿ ಡಾ ಬಿ ಆರ್ ಅಂಬೇಡ್ಕರ್, ಕಿತ್ತೂರು ರಾಣಿ ಚನ್ನಮ್ಮ, ಮಹಾತ್ಮಾ ಗಾಂಧೀಜಿ, ಸಂಗೊಳ್ಳಿ ರಾಯಣ್ಣ, ಮದರ್ ತೆರೇಸಾ ಪಾತ್ರಗಳಿಗೆ ಜೀವ ತುಂಬಿ ವೇಷಧರಿಸಿದ ಮಕ್ಕಳು ಅತಿ ಆಕರ್ಷಣಿಯ ವಾಗಿದ್ದರು ಪ್ರಭಾತ್ ಪೇರಿ ಮೆಚ್ಚುಗೆಗೆ ಪಾತ್ರ ವಾಗಿತ್ತು.

ಅಂಬೇಡ್ಕರ್ ಸೇನೆ ತಾಲೂಕ್ ಅಧ್ಯಕ್ಷರಾದ ಮಲ್ಲಿಕಾರ್ಜುನ್ ಕುಮನೂರ್ ಹಾಗೂ ಶಿಕ್ಷಕರುಂದದವರು ಉಪಸ್ಥಿತರಿದ್ದರು.

# ಆಟಲ್‌ಜೀ ವ್ಯಕ್ತಿಯಲ್ಲ ಅವರೊಂದು ಶಕ್ತಿ: ಸೋಮನಾಥ ಪಾಟೀಲ




ಮಲ್ಲಮ ನುಡಿ ವಾರ್ತೆ

ಬೀದರ. ಜ. 27 : ಆಟಲ್ ಬಿಹಾರಿ ವಾಜಪೇಯಿಯವರು ಈ ದೇಶಕಂಡ ಅಪ್ರತಿಮ ನಾಯಕರಾಗಿದ್ದರು. ಹಲವು ಮಹಾತ್ವಾಕಾಂಕ್ಷೆಗಳನ್ನುಇಟ್ಟುಕೊಂಡು ದೇಶ ಮುನ್ನಡೆಸಿದ ಧೀಮಂತ ನಾಯಕರಾಗಿದ್ದರು. ಅವರೊಬ್ಬ ವ್ಯಕ್ತಿಯಲ್ಲ ಶಕ್ತಿಯಾಗಿದ್ದರು ಎಂದು ಭಾರತೀಯ ಜನತಾ ಪಕ್ಷದ ಜಿಲ್ಲಾಧ್ಯಕ್ಷ ಸೋಮನಾಥ ಪಾಟೀಲ ಹುಡಗಿ ತಿಳಿಸಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು ಆಟಲ್ ಬಿಹಾರಿ ವಾಜಪೇಯಿಯವರು 1925ರ ಡಿ. 25 ರಂದು ಗ್ವಾಲಿಯರ್‌ನಲ್ಲಿ ಜನ್ಮತಾಳಿದ್ದರು. 2024ರ ಡಿ. 25ರಂದು ನೂರು ವರ್ಷ ಕಳೆದಿರುವ ಪ್ರಯುಕ್ತ ಅವರ ಜನ್ಮಶತಮಾನೋತ್ಸವ ಪ್ರಯುಕ್ತ ಫೆಬ್ರುವರಿ 14 ರಿಂದ ಮಾರ್ಚ್ 14ರ ವರೆಗೆ ಹಲವು ವಿನೂತನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ವಾಜಪೇಯಿಯವರು ಪಾಂಚಜನ್ಯ ಪತ್ರಿಕೆಯ ಸಂಪಾದಕರಾಗಿದ್ದರು. ಕವಿಗಳಾಗಿದ್ದರು. ಪತ್ರಕರ್ತರಾಗಿದ್ದರು. ಸುವರ್ಣ ಚತುಷ್ಪಥ ರಸ್ತೆ ನಿರ್ಮಾಣ, ಪೋಖ್ರಾನ್ ಅಣು ಪರೀಕ್ಷೆ, ಸರ್ವ ಶಿಕ್ಷಣ ಅಭಿಯಾನದ ಮೂಲಕ ಸರ್ಕಾರಿ ಶಾಲೆಗೆ ಹೊಸ ರೂಪ ನೀಡಿದ್ದರು. ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆ, ರೈತರಿಗೆ ಕಿಸಾನ್ ಕ್ರೆಡಿಟ್ ಕಾರ್ಡ್, ಕಾರ್ಗಿಲ ವಿಜಯ, ಗ್ರಾಮರಾಜ್ಯದಿಂದ ರಾಜ್ಯ ರಾಜ್ಯದ ನಿರ್ಮಾಣ ಸಂಕಲ್ಪ ಹೊತ್ತಿದ್ದರು. ನದಿಗಳ ಜೋಡಣೆ ಆಟಲ್‌ಜೀ ಅವರ ಬಹುದೊಡ್ಡ ಕನಸಾಗಿತ್ತು. ಅವರ ಮಾರ್ಗದಲ್ಲಿ ಸಾಗುತ್ತಿರುವ ಪ್ರಧಾನಿ ನರೇಂದ್ರ ಮೋದಿಯವರು ಉತ್ತಮ ಆಡಳಿತ ನೀಡುತ್ತಿದ್ದಾರೆ. ಹೀಗಾಗಿ ಆಟಲ್‌ಜೀ ಜನ್ಮಶತಾಬ್ದಿ ಕಾರ್ಯಕ್ರಮದಲ್ಲಿ ಸರ್ವರೂ ಪಾಲ್ಗೊಳ್ಳಬೇಕೆಂದು ಕರೆ ನೀಡಿದರು.

ಆಟಲ್‌ಜೀ ಜನ್ಮಶತಾಬ್ದಿ ಜಿಲ್ಲಾ ಪ್ರಮುಖರು ಹಾಗೂ ಬುಡಾ ಮಾಜಿ ಅಧ್ಯಕ್ಷ ಬಾಬು ವಾಲಿ ಮಾತನಾಡಿ ಆಟಲ್‌ಜೀ ಒಬ್ಬ ಕವಿಗಳಾಗಿದ್ದರು ಹೀಗಾಗಿ ಜಿಲ್ಲೆಯಲ್ಲಿ "ಕವಿ ಸಮ್ಮೇಳನ" ಆಯೋಜನೆ, ಪತ್ರಕರ್ತರಾಗಿದ್ದರಿಂದ "ನಾನೂ ಪತ್ರಕರ್ತ" ಎಂಬ ಕಾರ್ಯಕ್ರಮ, ವಾಕಥಾನ್, "ಖೇಲ್ ಭಿ ಜೀತೋ, ದಿಲ್ ಭಿ ಜೀತೋ" ಹೀಗೆ ಹಲವು ಕಾರ್ಯಕ್ರಮಗಳನ್ನು ಒಂದು ತಿಂಗಳುಗಳ ಕಾಲ ಹಮ್ಮಿಕೊಳ್ಳಲಾಗಿದೆ ಎಂದು ವಾಲಿ ತಿಳಿಸಿದರು.

ಇದೇವೇಳೆ ಪತ್ರಿಕಾಗೋಷ್ಠಿಯಲ್ಲಿ ನಗರ ಮಂಡಲ ಅಧ್ಯಕ್ಷ ಶಶಿ ಹೊಸಳ್ಳಿ, ಪಕ್ಷದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪೀರಪ್ಪ ಔರಾದೆ, ಗುರುನಾಥ ಜ್ಯಾಂತಿಕರ್, ಸಾಮಾಜಿಕ ಜಾಲತಾಣದ ಮುಖ್ಯಸ್ಥ ವೀರೂ ದಿಗ್ವಾಲ್, ಮಾಧ್ಯಮ ಪ್ರತಿನಿಧಿ ಶ್ರೀನಿವಾಸ ಚೌಧರಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಜ. 16 ರಂದು ನಗರದಲ್ಲಿ ನಡೆದ ಎಟಿಎಂ ಹಣ ದರೋಡೆ ಹಾಗೂ ಶೂಟೌಟ್ ಪ್ರಕರಣ ಭೇದಿಸುವಲ್ಲಿ ಪೊಲೀಸ್ ಇಲಾಖೆ ಸಂಪೂರ್ಣ ವಿಫಲವಾಗಿದೆ. ಅಲ್ಲದೇ ಈ ಪ್ರಕರಣದ ನಂತರವೂ ನಗರದಲ್ಲಿ ಮನೆಕಳ್ಳತನಗಳು ನಡೆದಿವೆ. ಹೀಗಾಗಿ ಈಗಿರುವ ಅಧಿಕಾರಿಗಳನ್ನು ವರ್ಗಾವಣೆ ಮಾಡಿ ದಕ್ಷ ಮತ್ತು ಪ್ರಾಮಾಣಿಕ ಅಧಿಕಾರಿಗಳನ್ನು ಸರ್ಕಾರ ನೇಮಿಸಬೇಕೆಂದು ಬಿಜೆಪಿ ಜಿಲ್ಲಾಧ್ಯಕ್ಷ ಸೋಮನಾಥ ಪಾಟೀಲ ಒತ್ತಾಯಿಸಿದರು. 10 ದಿನಗಳ ಒಳವಾಗಿ ದುಷ್ಕರ್ಮಿಗಳನ್ನು ಬಂಧಿಸದಿದ್ದರೆ ಪಕ್ಷದ ವತಿಯಿಂದ ಹೋರಾಟ ಮಾಡಲಾಗುವುದು ಎಂದು ತಿಳಿಸಿದರು.

# ಮನಬಂದಂತೆ ಶಸ್ತ್ರಚಿಕಿತ್ಸೆ: ರೋಗಿಯ ಬಲಗೈ ಕೈಬೆರಳು ತುಂಡು: ವೈದ್ಯರ ಅಮಾನತಿಗೆ ಆಗ್ರಹ



ಮಲ್ಲಮ ನುಡಿ ವಾರ್ತೆ

ಬೀದರ. ಜ. 27 : ನನ್ನ ಬಲಗೈ ಕೈ ಬೆರಳಿನ ಮೂಳೆ ಮುರಿದ ಕಾರಣ ಬೀದರ ಸರ್ಕಾರಿ ಆಸ್ಪತ್ರೆಗೆ ದಾಖಲಾದರೆ ಮನಬಂದಂತೆ ಶಸ್ತ್ರಚಿಕಿತ್ಸೆ ಮಾಡಿ ರಾಡ್ ಹಾಕದೇ ನಿರ್ಲಕ್ಷ್ಯ ತೋರಿ ನನ್ನ ಕೈಬೆರಳಿನ ಮೂಳೆ ಮುರಿಯುವಂತೆ ಮಾಡಿದ ವೈದ್ಯರನ್ನು ಕೂಡಲೇ ಅಮಾನತುಗೊಳಿಸಬೇಕೆಂದು ಹುಮನಾಬಾದ ತಾಲೂಕಿನ ಸಿಂದಬಂದಗಿ ಗ್ರಾಮದ ಸಂತ್ರಸ್ತ ನರಸಿಂಗ ವಿಠಲ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ಕುರಿತು ಅಪರ ಜಿಲ್ಲಾಧಿಕಾರಿ ಶಿವಕುಮಾರ ಶೀಲವಂತ ಅವರಿಗೆ ದೂರು ಸಲ್ಲಿಸಿದ ಬಳಿಕ ಪ್ರಕಟಣೆ ಹೊರಡಿಸಿದ್ದಾರೆ.

ನಾನು 2024ರ ನ. 21 ರಂದು ಆಸ್ಪತ್ರೆಯಲ್ಲಿ ದಾಖಲಾದೆ. ನ. 26 ರಂದು ಶಸ್ತ್ರಚಿಕಿತ್ಸೆ ಮಾಡಿಸಲಾಯಿತು. ಅದೇ ತಿಂಗಳು 30 ರಂದು ಆಸ್ಪತ್ರೆಯಿಂದ ಡಿಸ್ಚಾರ್ಜ್ ಆದೆ. ಒಂದು ತಿಂಗಳು ಮನೆಯಲ್ಲಿ ವಿಶ್ರಾಂತಿ ಪಡೆದ ಬಳಿಕ 2025ರ ಜ. 4 ರಂದು ಪುನಃ ಎಕ್ಸ್ ರೇ ಮಾಡಿಸಿದ ಬಳಿಕ ನನ್ನ ಬಲಗೈ ಬೆರಳಿನ ಮೂಳೆ ಮೊದಲಿನಂತೆಯೇ ತುಂಡಾಗಿರುವ ವಿಷಯ ತಿಳಿದಿದೆ. ಅಲ್ಲದೇ ಮನಬಂದಂತೆ ಕೈಗೆ ಹೊಕಿಗೆ ಹಾಕಿದ್ದಾರೆ. ವೈದ್ಯರ ನಿರ್ಲಕ್ಷ್ಯತನದಿಂದ ಚಿಕಿತ್ಸೆ ಫಲಕಾರಿಯಾಗದ ಕಾರಣ ನನ್ನ ಚಿಕಿತ್ಸೆ ವೆಚ್ಚ ವೈದ್ಯರೇ ಭರಿಸಬೇಕೆಂದು ದೂರಿನಲ್ಲಿ ತಿಳಿಸಿದ್ದಾರೆ.

ಇದೇ ವೇಳೆ ವಿವಿಧ ಸಂಘಟನೆಯ ಪ್ರಮುಖರಾದ ಗುರುದಾಸ ಅಮದಲಪಾಡ, ಆನಂದರೆಡ್ಡಿ, ಗಣೇಶ, ಸುನೀಲ ಸೇರಿದಂತೆ ಹಲವರಿದ್ದರು.

## ಜಾತಿ ಜನಗಣತಿ ಮಾಡದೆ ಒಳಮೀಸಲಾತಿ ಜಾರಿ ಮಾಡಿದರೆ ಉಗ್ರ ಹೋರಾಟ: ಗೋವರ್ಧನ ರಾಠೋಡ್




ಮಲ್ಲಮ್ಮ ನುಡಿ ವಾರ್ತೆ

ಬೀದರ. ಜ. 27 : ಬಂಜಾರಾ ಸಮುದಾಯ ದುಸ್ಥಿತಿಯಲ್ಲಿದೆ. ಸರ್ಕಾರದ ಸೌಲಭ್ಯಗಳು ಕಡಿಮೆ ಇವೆ. ಒಳಮೀಸಲಾತಿಯಿಂದ ನಮಗೆ ಹೊರಗಿಡುವ ಹುನ್ನಾರ ನಡೆಯುತ್ತಿದೆ. ಹೀಗಾಗಿ ಜಾತಿ ಜನಗಣತಿ ಮಾಡದೆ ಒಳಮೀಸಲಾತಿಯನ್ನು ಸರ್ಕಾರ ಜಾರಿ ಮಾಡಿದರೆ ಉಗ್ರ ಹೋರಾಟ ಮಾಡಲಾಗುವುದೆಂದು ಗೋರಸೇನಾ ಸಂಘಟನೆಯ ಜಿಲ್ಲಾಧ್ಯಕ್ಷ ರಮೇಶಕುಮಾರ ಜಾಧವ ತಿಳಿಸಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಸೋಮವಾರ ಕರೆದ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು ಸರ್ಕಾರದ ನಕರುಗಳ ದತ್ತಾಂಶ ಬಹಳ ಪರಿಪೂರ್ಣವಾಗಿ ಇಡುತ್ತದೆ. ಆದರೆ ನಮ್ಮ ಬಂಜಾರಾ ಸಮುದಾಯದ ದತ್ತಾಂಶ ಇಟ್ಟಿಲ್ಲ. ತಹಸಿಲ್ದಾರ್ ಅವರಿಗೆ ಮಾಹಿತಿ ಹಕ್ಕು ಕಾಯ್ದೆಯಡಿ ಮಾಹಿತಿ ಕೇಳಿದರೆ ನಿಮ್ಮ ತಾಂಡಾಗಳ ಜನಸಂಖ್ಯೆಯ ಸರಿಯಾದ ಮಾಹಿತಿ ನಮಗಿಲ್ಲ ಎಂದು ಹಾರಿಕೆ ಹಿಂಬರಹ ನೀಡುತ್ತಾರೆ. ನಾವು ಈಗಾಗಲೇ ನ್ಯಾ. ನಾಗಮೋಹನದಾಸ್ ಅವರಿಗೆ ಮನವಿ ನೀಡಿದ್ದೇವೆ. ಸರಿಯಾಗಿ ಬಂಜಾರಾ ಸಮಾಜದ ಕುರಿತು ಅಧ್ಯಯನ ಮಾಡಿ, ಕಾಂತರಾಜು ವರದಿ ಪ್ರಕಾರ ಜಾತಿ ಜನಗಣತಿ ಮಾಡಿ ಒಳಮೀಸಲಾತಿ ಜಾರಿ ಮಾಡಬೇಕು. ಯಾವುದೇ ಪೂರ್ವಾಪರ ಮಾಹಿತಿ ಇಲ್ಲದೆ ಅವೈಜ್ಞಾನಿಕವಾಗಿ ಒಳಮೀಸಲಾತಿ ಜಾರಿ ಮಾಡಿದರೆ ರಾಜ್ಯದಾದ್ಯಂತ ಗೋರಸೇನಾ ಸಂಘಟನೆ ವತಿಯಿಂದ ಉಗ್ರ ಹೋರಾಟ ಮಾಡಲಾಗುವುದು ಎಂದು ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.

ಬಂಜಾರಾ ಸಮಾಜದ ಗೋರಸಿಕವಾಡಿ ಸಂಘಟನೆಯ ಹಿರಿಯ ಮುಖಂಡರಾದ ಗೋವರ್ಧನ ರಾಠೋಡ್ ಮಾತನಾಡಿ ಬಂಜಾರಾ ಸಮಾಜದ ಜನರು ತಮ್ಮ ಹೊಟ್ಟೆಪಾಡಿಗಾಗಿ ತಾಂಡಾ ಬಿಟ್ಟು ಪಟ್ಟಣಗಳಿಗೆ ಗುಳೆ ಹೋಗಿದ್ದಾರೆ. ನಾವು ಇಲ್ಲದಿದ್ದರೆ ಇಂದು ಬಹುತೇಕ ರಾಜ್ಯದ ಸಕ್ಕರೆ ಕಾರ್ಖಾನೆಗಳು ನಡೆಯುತ್ತಿರಲಿಲ್ಲ. 2011ರಲ್ಲಿ ನಡೆಸಿದ ಜಾತಿ ಜನಗಣತಿ ಸಂದರ್ಭದಲ್ಲಿ ಅಧಿಕಾರಿಗಳು ತಾಂಡಾಗಳಿಗೆ ಭೇಟಿಯೇ ನೀಡಿಲ್ಲ. ಮೇಲಾಗಿ ನಮ್ಮ ನಿಖರವಾದ ದತ್ತಾಂಶ ಸರ್ಕಾರದ ಹತ್ತಿರ ಇಲ್ಲ. ಅನೇಕರು ಕಬ್ಬು ಕಟಾವು ಸಂದರ್ಭದಲ್ಲಿ ವಿದ್ಯುತ್ ತಗುಲಿ, ವಾಹನ ದುರ್ಘಟನೆ, ಹಾವು ಕಡಿತ, ಕಾಡುಪ್ರಾಣಿಗಳ ದಾಳಿಗೆ ಬಲಿಯಾಗಿದ್ದಾರೆ. ಇಂತಹ ಸಂದಿಗ್ಧ ಸನ್ನಿವೇಶದಲ್ಲಿ ನಿಖರ ಮಾಹಿತಿ ಇಲ್ಲದೆ ಒಳಮೀಸಲಾತಿ ಜಾರಿ ಮಾಡಿದರೆ ನಮಗೆ ಘೋರ ಅನ್ಯಾಯವಾಗುತ್ತದೆ. ನಮ್ಮ ಇಡೀ ಸಮಾಜವೇ ಅರ್ಧಪತನಗೊಳ್ಳುತ್ತದೆ. ಆದ್ದರಿಂದ ಒಳಮೀಸಲಾತಿ ಜಾರಿ ಮಾಡಲು ನಮಗೆ ಅಭ್ಯಂತರವಿಲ್ಲ. ಆದರೆ ವೈಜ್ಞಾನಿಕವಾಗಿ ಜಾತಿ ಜನಗಣತಿ ನಂತರ ಮಾಡಿದರೆ ಉತ್ತಮ ಎಂದು ಪ್ರತಿಪಾದಿಸಿದರು.

ಗೋರಸೇನಾ ಸಂಘಟನೆಯ ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಸವಿತಾಬಾಯಿ ರಾಠೋಡ್ ಮಾತನಾಡಿ 101 ಜಾತಿಗಳಲ್ಲಿ ಬಂಜಾರಾ ಸಮಾಜಕ್ಕೆ ಏಕೆ ಕಡೆಗಣನೆ ಮಾಡಲಾಗುತ್ತಿದೆ? ಈಗಾಗಲೇ ನಾವು ಸರ್ಕಾರಕ್ಕೆ ಮನವಿ ಸಲ್ಲಿಸಿದ್ದೇವೆ. ಆದರೆ ತಾಂಡಾಗಳು ಎಲ್ಲಿವೆ? ಎಂದು ಹಾರಿಕೆ ಉತ್ತರ ಕೊಡುತ್ತಾರೆ. 2011ರ ಜನಗಣತಿ ಪ್ರಕಾರ ರಾಜ್ಯದಲ್ಲಿ ಕೇವಲ 11 ಲಕ್ಷ ಬಂಜಾರಾ ಸಮಾಜದ ಜನಸಂಖ್ಯೆ ತೋರಿಸಲಾಗಿದೆ. ಆದರೆ 2025ರಲ್ಲಿ ಕನಿಷ್ಠ ಎಂದರೂ 40 ಲಕ್ಷಕ್ಕೂ ಮೇಲ್ಪಟ್ಟ ಜನಸಂಖ್ಯೆ ಇದೆ. ಇಂತಹ ಸಂದರ್ಭದಲ್ಲಿ 2011ರ ದತ್ತಾಂಶ ಇಟ್ಟುಕೊಂಡು ಒಳಮೀಸಲಾತಿ ಜಾರಿ ಮಾಡಿದರೆ ನಮಗೆ ಘೋರ ಅನ್ಯಾಯವಾಗುತ್ತದೆ. ತರಾತುರಿಯಲ್ಲಿ ರಾಜ್ಯ ಸರ್ಕಾರ ಜಾರಿ ಮಾಡದೆ ಜಾತಿ ಜನಗಣತಿ ನಡೆಸಿ ಜಾರಿ ಮಾಡಲಿ ಎಂದರು.

ಸಂಘಟನೆಯ ಕಾರ್ಯಾಧ್ಯಕ್ಷ ಬಾಬುರಾವ ಜಾಧವ್, ಉಪಾಧ್ಯಕ್ಷ ನೀಲಕಂಠ ರಾಠೋಡ್, ಸಂತೋಷ ಬಾನೋದ್, ಶಶಿಕಲಾ ಸೇರಿದಂತೆ ಇತರರು ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

## ಮಾದರಿ ಪ್ರಾಜೆಕ್ಟ್ ಪ್ರದರ್ಶನದಿಂದ ಕ್ರಿಯಾಶೀಲತೆ ವೃದ್ಧಿ: ಡಾ. ಶಶಿಧರ ಪಾಟೀಲ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಜ. 27 : ತಾಲೂಕಿನ ಅಷ್ಟೂರ ಗ್ರಾಮದಲ್ಲಿರುವ ಅಲ್ಲಮಪ್ರಭು ಹಿರಿಯ ಪ್ರಾಥಮಿಕ ಶಾಲೆ ವಿದ್ಯಾರ್ಥಿಗಳ ಪ್ರತಿಭೆ ಅನಾವರಣಕ್ಕೆ ಸಾಕ್ಷಿಯಾಯಿತು. ಇದು ಇಡೀ ಜಿಲ್ಲೆಯ ಜನರ ಹುಬ್ಬೇರಿಸುವಂತೆ ಮಾಡಿದೆ. ಇಲ್ಲಿ ಜಿಲ್ಲೆಯ ಸ್ಮಾರಕಗಳ ಪದರ್ಶನಗೈದು ಜಿಲ್ಲೆಯ ಐತಿಹಾಸಿಕ ಹಿನ್ನೆಲೆ ಎತ್ತಿ ಹಿಡಿಯುವುದರ ಜೊತೆಗೆ ವಿಜ್ಞಾನ ಹಾಗೂ ತಂತ್ರಜ್ಞಾನದ ಉಪಯೋಗದ ಬಗ್ಗೆಯೂ ಮೆಲುಕು ಹಾಕಿರುವುದು ವಿಶೇಷವಾಗಿತ್ತು. ಇದರಿಂದ ಮಕ್ಕಳ ಸೃಜನಶೀಲತೆ ವೃದ್ಧಿಯಾಗುವುದರ ಜೊತೆಗೆ ಸಂಶೋಧನಾ ಮನೋಭಾವ ಬೆಳೆಯುತ್ತದೆ ಎಂದು ಗ್ರಾಮದ ಮುಖಂಡ ಡಾ. ಶಶಿಧರ ಪಾಟೀಲ ಇದೇ ವೇಳೆ ತಿಳಿಸಿದರು.

ಅಷ್ಟೂರ ಗ್ರಾಮದ ಶ್ರೀಮತಿ ಇಂದಿರಾಗಾಂಧಿ ಮೆಮೊರಿಯಲ್ ಚಿಲ್ಡನ್ ಡೆಸ್ಟಿಟ್ಯೂಟ್ ಶಿಕ್ಷಣ ಸಂಸ್ಥೆ ಅಡಿಯಲ್ಲಿನ ಅಲ್ಲಮಪ್ರಭು ಹಿರಿಯ ಪ್ರಾಥಮಿಕ ಶಾಲೆಯಲ್ಲಿ 76ನೇ ಗಣರಾಜ್ಯೋತ್ಸವ ಅಂಗವಾಗಿ ಆಯೋಜಿಸಿದ ಮಾದರಿ ಪ್ರಾಜೆಕ್ಟ್ ಗಳ ಪ್ರದರ್ಶನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ್ದರು.

ಮಕ್ಕಳಿಗೆ ಕೇವಲ ಅಂಕ ಗಳಿಸುವ ಪುಸ್ತಕದ ಯಂತ್ರ ಮಾಡದೆ, ವಿವಿಧ ಮಾದರಿಯ ಪ್ರಾಜೆಕ್ಟ್ ತಯಾರಿಸಲು ತಿಳಿಸಿ, ಅವರ ಆತ್ಮವಿಶ್ವಾಸ, ಛಲ ಮತ್ತು ಪ್ರಾಯೋಗಿಕ ಜ್ಞಾನ ಹೆಚ್ಚಿಸುವ ಕಾರ್ಯ ಶಾಲೆಯ ಅಧ್ಯಕ್ಷ ಖಂಡಪ್ಪ ಪಾತರಪಳ್ಳಿ ಮಾಡುತ್ತಿರುವುದು ಪ್ರಶಂಸನೀಯವಾಗಿದೆ ಎಂದರು.

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಶಿವಕುಮಾರ ಪಾಟೀಲ ಮಾತನಾಡಿ ಮಕ್ಕಳ ಕುಂಚದಿಂದ ಅಷ್ಟೂರ ಗುಂಬಜ್, ಮದರಸಾ, ಬೀದರ ಕೋಟೆ, ಚೌಬಾರಾ, ಇವಿಎಂ ಯಂತ್ರ, ಪೋಸ್ಟ್ ಬಾಕ್ಸ್, ಚೌಖಂಡಿ, ರಾಕೇಟ್, ಹೈನುಗಾರಿಕೆ, ಪರಿಸರ, ಸೋಲಾರ್, ಗ್ರಹಗಳು, ಕನ್ನಡ ಮತ್ತು ಇಂಗ್ಲೀಷ್ ಸ್ವರಜ್ಞಾನ, ಕೃಷಿ, ಹೀಗೆ ಹತ್ತು ಹಲವಾರು ಜ್ಞಾನ ನೀಡುವ ಮಾದರಿಗಳ ತಯಾರಿಕೆ ಸರ್ವತೋಮುಖ ಬೆಳವಣಿಗೆಗೆ ಸಾಕ್ಷಿಯಾಗಿದೆ. ಇದನ್ನು ಕಂಡು ಪಾಲಕರು ಖುಷಿಯಾಗಿದ್ದಾರೆ ಎಂದು ಪ್ರತಿಪಾದಿಸಿದರು.

ಅಧ್ಯಕ್ಷತೆ ವಹಿಸಿದ್ದ ಶಾಲೆಯ ಅಧ್ಯಕ್ಷ ಖಂಡಪ್ಪ ಪಾತರಪಳ್ಳಿ ಮಾತನಾಡಿ ಶಾಲೆಯಲ್ಲಿ ಶಿಕ್ಷಣದ ಜೊತೆಗೆ ಹೊರಲೋಕದ ಜ್ಞಾನ ಮಕ್ಕಳಿಗೆ ನೀಡಲಾಗುತ್ತಿದೆ. ಮಕ್ಕಳ ಹೃದಯದಲ್ಲಿ ಸಂಸ್ಕಾರ ಮತ್ತು ದೇಶಸೇವೆಯ ಸೊಗಡು ಮೂಡಿಸಲಾಗುತ್ತಿದೆ. ಇದಕ್ಕೆ ಪಾಲಕರ ಹಾಗೂ ಶಾಲಾ ಸಿಬ್ಬಂದಿಗಳ ಸಹಕಾರ ಸಾಕಷ್ಟಿದೆ ಎಂದರು.

ಕಾರ್ಯಕ್ರಮದಲ್ಲಿ ಗ್ರಾ.ಪಂ. ಅಧ್ಯಕ್ಷೆ ರೇಣುಕಾ ಮೌರ್ಯ, ಉಪಾಧ್ಯಕ್ಷೆ ಪ್ರೇಮಲಾ, ಮುಖಂಡರಾದ ಶಿವಕುಮಾರ ನಾಗಲಗಿದ್ದಿ, ಅರ್ಜುನ ಕಾಳಗೊಂಡ, ಸಂಜೀವಕುಮಾರ, ರಮೇಶ ಪಾಟೀಲ, ವಿನೋದ ಪಸರ್ಗಿ, ತುಕಾರಾಮ ಹಾವಗೆ, ಸೇರಿದಂತೆ ಶಾಲೆಯ ವಿದ್ಯಾರ್ಥಿಗಳು, ಪಾಲಕರು ಹಾಗೂ ಗ್ರಾಮದ ಮುಖಂಡರು ಉಪಸ್ಥಿತರಿದ್ದರು.

ಕು. ದಾಕ್ಷಾಯಿಣಿ ಸ್ವಾಗತಿಸಿದರು. ಕು. ಪೂಜಾ ನಿರೂಪಿಸಿದರು. ಭೂಮಿಕಾ ಡೊಮನೆ ವಂದಿಸಿದರು.

## ಸಿರ್ಕಟನಹಳ್ಳಿ ಗ್ರಾಮದಲ್ಲಿ ಅಂಬೇಡ್ಕರ್ ಮೂರ್ತಿ ನೀಡಿದ ಲೋಕೇಶ್ ಮಂಗಲ್ಗೆ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಜ. 27 : ಸಿರ್ಕಟನಹಳ್ಳಿ ಗ್ರಾಮದಲ್ಲಿ ಅಂಬೇಡ್ಕರ್ ಮೂರ್ತಿಯನ್ನು ಕಾಂಗ್ರೆಸ್ ಪಾರ್ಟಿಯ (ಖಅ) ಜಿಲ್ಲಾ ವಕ್ತಾರರಾದ ಲೋಕೇಶ್ ಮಂಗಲ್ಗೆ ಅವರು ನೀಡಿದರು. ಹಾಗೂ ಪ್ರತಿಷ್ಠಾಪನೆ ಮಾಡಲಾಯಿತು. ಈ ಅಂಬೇಡ್ಕರ್ ಮೂರ್ತಿಯ ಉದ್ಘಾಟನೆ ಸ್ವಲ್ಪ ದಿನಗಳಲ್ಲಿ ಮಾಡಲಾಗುವುದು ಎಂದು ತಿಳಿಸಿದರು ಈ ಕಾರ್ಯಕ್ರಮದಲ್ಲಿ ನಿರೂಪಣೆ ಮಾಡಿದವರು ಹಣಮಂತ್ ಕೊಂಡೆ ಹಾಗೂ ಈ ಅಂಬೇಡ್ಕರ್ ಮೂರ್ತಿಯನ್ನು ನೀಡಿದ ಲೋಕೇಶ್ ಮಂಗಲ್ಗೆ ಅವರಿಗೆ ರಾಹುಲ್ ಗಂಗೆ ಸನ್ಮಾನಿಸಿದರು. ಈ ಒಂದು ಕಾರ್ಯಕ್ರಮದಲ್ಲಿ ಮಹಿಳೆಯರ ಅತಿ ಹೆಚ್ಚು ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಹಾಗೂ ಮೂರ್ತಿಯ ಪೂಜೆಯನ್ನು ಮಾಡಿ ಪ್ರತಿಷ್ಠಾಪಿಸಲಾಯಿತು.

ಮೂರ್ತಿಯ ಪೂಜೆಯನ್ನು ಹಿರಿಯರಾದ ಶಿವರಾಜ್ ಮಂಗಲ್ಗೆ ಅವರು ನೆರವೇರಿಸಿದರು ಈ ಕಾರ್ಯಕ್ರಮದಲ್ಲಿ ಸೈನ್ಯದಲ್ಲಿ ಸೇವಿಸಲಿಸುತ್ತಿರುವ ಮಹೇಶ್ ಮಂಗಲ್ಗೆ ಅವರು ಆತ್ಮಾನಂದ ಕೊಂಡವರು ಅನಿಲ್ ಕೊಂಡೇ ನಾಗರಾಜ್ ಮೇಲ್ಮನೆ ಈಶ್ವರ್ ಬಿದರಿ ಗ್ರಾಮಸ್ಥರು ಸೇರಿಕೊಂಡಿದ್ದರು.

ಈ ಮೂರ್ತಿ ಉದ್ಘಾಟನೆಯನ್ನು ಸ್ವಲ್ಪದಿನದಲ್ಲಿ ಮಾಡಲಾಗುವುದೆಂದು ಶ್ರೀ ಲೋಕೇಶ್ ಮಂಗಲಿ ಅವರು ತಿಳಿಸಿದ್ದಾರೆ.

## ಬಿ.ಕೆ.ಡಿ. ಫೌಂಡೇಷನ್‌ನಿಂದ ಉಚಿತ ಕಾರ್ಯಾಗಾರ ಫೆ. 7 ರಿಂದ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಜ. 27 : ಡಾ. ಗಂಗಾಂಬಿಕೆ ಅಕ್ಕ ಅವರ ನೇತೃತ್ವದಲ್ಲಿ ನಡೆಯಲಿರುವ 23ನೇ ವಚನ ವಿಜಯೋತ್ಸವ ಅಂಗವಾಗಿ ಬಸವ ಕಾಯಕ ದಾಸೋಹ (ಬಿ.ಕೆ.ಡಿ.) ಫೌಂಡೇಷನ್ ವತಿಯಿಂದ ನಗರದ ಐ.ಎಂ.ಎ. ಹಾಲನಲ್ಲಿ ಫೆ. 7 ರಿಂದ 9 ರ ವರೆಗೆ 'ವಿದ್ಯುತ್ ಸ್ವಿಚ್ ಗೇರ್ ಮತ್ತು ಅದರ ಅನ್ವಯಗಳು' ಕುರಿತ ಉಚಿತ ಕೌಶಲ ಅಭಿವೃದ್ಧಿ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ.

300ಕ್ಕೂ ಅಧಿಕ ಕಾರ್ಯಾಗಾರಗಳನ್ನು ನಡೆಸಿದ ಅನುಭವ ಹೊಂದಿರುವ ಡಿ.ಬಿ. ಸನ್'ನ ಶಿವಾನಂದ ಡಿ.ವಿ. ಅವರು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಲಿದ್ದಾರೆ.

ಎಸ್.ಎಸ್.ಎಲ್.ಸಿ. ಉತ್ತೀರ್ಣ, ಅನುತ್ತೀರ್ಣ, ಐಟಿಐ ಎಲೆಕ್ಟ್ರಿಕಲ್, ಡಿಪ್ಲೊಮಾ ಎಲೆಕ್ಟ್ರಿಕಲ್, ಎಂಜಿನಿಯರಿಂಗ್ ಎಲೆಕ್ಟ್ರಿಕಲ್ ವಿಭಾಗದ ವಿದ್ಯಾರ್ಥಿಗಳು ಕಾರ್ಯಾಗಾರದಲ್ಲಿ ಭಾಗವಹಿಸಬಹುದಾಗಿದೆ ಎಂದು ಫೌಂಡೇಷನ್ ಅಧ್ಯಕ್ಷ ಬಸವರಾಜ ಧನ್ನೂರ ತಿಳಿಸಿದ್ದಾರೆ.

ಮೂರೂ ದಿನ ಬೆಳಿಗ್ಗೆ 9.30 ರಿಂದ ಸಂಜೆ 5 ರ ವರೆಗೆ ಕಾರ್ಯಾಗಾರ ಜರುಗಲಿದೆ. ಹೆಸರು ನೋಂದಾಯಿಸಿದ 60 ವಿದ್ಯಾರ್ಥಿಗಳಿಗೆ ಮಾತ್ರ ಪಾಲ್ಗೊಳ್ಳಲು ಅವಕಾಶ ಇದೆ. ನಿತ್ಯ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಊಟದ ವ್ಯವಸ್ಥೆ ಇರಲಿದೆ ಎಂದು ಹೇಳಿದ್ದಾರೆ.

ಕಾರ್ಯಾಗಾರ ಕುರಿತು ಹೆಚ್ಚಿನ ಮಾಹಿತಿ ಹಾಗೂ ಹೆಸರು ನೋಂದಣಿಗೆ ಮೊಬೈಲ್ ಸಂಖ್ಯೆ 9036811486 ಅಥವಾ 9740998983 ಗೆ ಸಂಪರ್ಕಿಸಬಹುದಾಗಿದೆ ಎಂದು ತಿಳಿಸಿದ್ದಾರೆ.

# ರಾಜ್ಯ ಮಟ್ಟದ ಆದರ್ಶ ದಂಪತಿ ಪ್ರಶಸ್ತಿ



ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ:–ತಾಲೂಕಿನ ಆಲಗೂಡ ಸರ್ಕಾರಿ ಪ್ರೌಢ ಶಾಲೆಯ ಶಿಕ್ಷಕರಾದ ನಾಗಪ್ಪಾ ನಿಣ್ಣೆ ಶ್ರೀಮತಿ ಶೋಭಾವತಿ ನಿಣ್ಣೆ ಇವರ ವಿವಿಧ ಕ್ಷೇತ್ರದ ಸೇವೆಯನ್ನು ಪರಿಗಣಿಸಿ ಇಲ್ಲಿನ ಪೂಜ್ಯ ಚನ್ನಬಸವ ಪಟ್ಟದ್ದೇವರು ರಂಗ ಮಂದಿರ ಬೀದರದಲ್ಲಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಮಾತೋಶ್ರೀ ರಮಾಬಾಯಿ ಅಂಬೇಡ್ಕರ್ ಆದರ್ಶ ದಂಪತಿಗಳ ರಾಜ್ಯ ಮಟ್ಟದ ಪ್ರಶಸ್ತಿಯಿಂದ ಕಲ್ಯಾಣ ಕರ್ನಾಟಕ ಪ್ರಾಢಶಾಲಾ ಶಿಕ್ಷಕರ ಸಂಘದ ಸಂಸ್ಥಾಪಕ ಅಧ್ಯಕ್ಷರಾದ ಪಾಂಡುರಂಗ ಬೇಲ್ದಾರ ಕರ್ನಾಟಕ ಶಿಕ್ಷಕರ ಸಂಘಗಳ ಪರಿಷತ್ತಿನ ರಾಜ್ಯ ಅಧ್ಯಕ್ಷರಾದ ಸಂಗಮೇಶ ಡಿ. ಬನ್ನಿ ನಾಯ್ಕರ. ಭಾಲ್ಕಿಯ ಪೂಜ್ಯ ಶ್ರೀ ಗುರುಬಸವ ಪಟ್ಟದ್ದೇವರು ಸನ್ಮಾನಿಸಿದ್ದಾರೆ. ಈ ಸಂದರ್ಭದಲ್ಲಿ ಇಲಾಖೆಯ ಅಧಿಕಾರಿಗಳಾದ ಝಾಕಿರ ಹುಸೇನ್. ಟಿ. ಆರ್. ದೋಡೆ. ನಿವೃತ್ತ ಉಪನ್ಯಾಸಕರಾದ ಶಿವಶರಣಪ್ಪಾ ಹುಗ್ಗಿ ಪಾಟೀಲ. ಸಂಘದ ತಾಲೂಕಾ ಅಧ್ಯಕ್ಷರಾದ ಚನ್ನಬಸವ ಬಿರಾದಾರ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ಕನಕದುರ್ಗಮ್ಮ ಗುಡಿ ಅಂಡರ್'ಪಾಸ್ ಕಾಮಗಾರಿ ಶೀಘ್ರ ಪೂರ್ಣ: ಶಾಸಕ ನಾರಾ ಭರತ್ ರೆಡ್ಡಿ



ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ: ಬಳ್ಳಾರಿ ನಗರದ ಕನಕದುರ್ಗಮ್ಮ ಗುಡಿ ಬಳಿಯ ಅಂಡರ್'ಪಾಸ್ ಕಾಮಗಾರಿ ಬಹುತೇಕ ಪೂರ್ಣಗೊಂಡಿ–ದ್ದು ಕೆಲವೇ ದಿನಗಳಲ್ಲಿ ಸಾರ್ವಜನಿಕರ ಬಳಕೆಗೆ ಮುಕ್ತಗೊಳ್ಳಲಿದೆ ಎಂದು ಶಾಸಕ ನಾರಾ ಭರತ್ ರೆಡ್ಡಿ ತಿಳಿಸಿದ್ದಾರೆ.

ಸೋಮವಾರ ಸಂಜೆ ಕಾಮಗಾರಿ ನಡೆಯುತ್ತಿರುವ ಸ್ಥಳಕ್ಕೆ ಭೇಟಿ ನೀಡಿ ಬಾಕಿ ಉಳಿದಿರುವ ಕೆಲಸದ ಬಗ್ಗೆ ಮಾಹಿತಿ ಪಡೆದರು.

ಸದರಿ ಅಂಡರ್'ಪಾಸ್'ನ ಮಧ್ಯೆ ಮೇಲ್ಭಾಗದಲ್ಲಿ ರೆಲ್ವೆ ಟ್ರ್ಯಾಂಕ್ ಇದ್ದು ಆ ಭಾಗದ ಕಾಮಗಾರಿಯು ವಿಳಂಬ ಆಗಿದ್ದು, ಅದಕ್ಕೆ ಸಂಬಂಧಿಸಿ ರೈಲ್ವೆ ಇಲಾಖೆಯ ಅಧಿಕಾರಿಗಳಿಂದ ಮಾಹಿತಿ ಪಡೆದು, ಕಾಮಗಾರಿ ಪೂರ್ಣಗೊಳಿಸಲು ಸಹಕರಿಸುವಂತೆ ಸೂಚಿಸಿದರು.

ವಿದ್ಯುತ್ ದೀಪ ಅಳವಡಿಕೆ ಮಾತ್ರ ಬಾಕಿ ಇರುವುದಾಗಿ ಅಧಿಕಾರಿಗಳು ತಿಳಿಸಿದರು.

ಕಾಮಗಾರಿಯ ಕಾಲಮಿತಿಯು 6 ತಿಂಗಳ ಅವಧಿಯಾಗಿದ್ದು, ಎರಡೇ ತಿಂಗಳ ಅವಧಿಯಲ್ಲಿ ಬಹುತೇಕ ಪೂರ್ಣಗೊಳಿಸಲಾಗಿದೆ. ಆದರೆ ಕಾಮಗಾರಿ ವಿಳಂಬ ಆಗುತ್ತಿದೆ ಎಂಬುದು ನಿರಾಧಾರ ಎಂದು ಶಾಸಕ ನಾರಾ ಭರತ್ ರೆಡ್ಡಿ ಸ್ಪಷ್ಟನೆ ನೀಡಿದ್ದಾರೆ.

ಒಂದು ವಾರದ ಒಳಗೆ ಕಾಮಗಾರಿ ಪೂರ್ಣಗೊಂಡು, ಸಾರ್ವಜನಿಕರ ಬಳಕೆಗೆ ಮುಕ್ತಗೊಳಿಸಲಾಗವುದು. ಸಾರ್ವಜನಿಕರು, ಸಂಘ ಸಂಸ್ಥೆಗಳು ಸಹಕರಿಸುವಂತೆ ಅವರು ಕೋರಿದ್ದಾರೆ.

# ಸಸಿ ನೆಡುವ ಮೂಲಕ ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆಗೆ ಚಾಲನೆ : ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್



ಮಲ್ಲಮ್ಮ ನುಡಿ ವಾರ್ತೆ

ವಿಜಯನಗರ: ಭವಿಷ್ಯದಲ್ಲಿ ಸ್ವಾವಲಂಬನೆ ಬದುಕು ಕಟ್ಟಿಕೊಳ್ಳಲು ವಿದ್ಯಾಭ್ಯಾಸಕ್ಕೆ ಹೆಚ್ಚಿನ ಆದ್ಯತೆ ನೀಡಬೇಕೆಂದು ವಿದ್ಯಾರ್ಥಿನಿಯರ ಕುರಿತು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಸಲಹೆ ನೀಡಿದರು. ಇಲ್ಲಿನ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಚೈತನ್ಯ ಗ್ರಾಮೀಣ ಅಭಿವೃದ್ಧಿ ಎಜ್ಯುಕೇಷನಲ್ ಟ್ರಸ್ಟ್ ಸಹಯೋಗದಲ್ಲಿ ಹೆಣ್ಣು ಮಕ್ಕಳ ರಾಷ್ಟ್ರೀಯ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಕೇಂದ್ರ ಸರ್ಕಾರ ಹೆಣ್ಣು ಮಕ್ಕಳಿಗಾಗಿ ಬೇಟಿ ಬಚಾವೋ, ಬೇಟಿ ಪಡಾವೋ ಯೋಜನೆಯನ್ನು ಅನುಷ್ಠಾನಗೊಳಿಸಿ ದಶಮಾನೋತ್ಸವ ಸಂಭ್ರಮ ಆಚರಿಸುತ್ತಿದ್ದೇವೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹೆಣ್ಣುಮಕ್ಕಳಿಗೆ ಹೆಚ್ಚಿನ ಪ್ರೋತ್ಸಾಹ, ರಕ್ಷಣೆ ನೀಡಲು ಅನೇಕ ಯೋಜನೆಗಳನ್ನು ಜಾರಿ ಮಾಡಿದ್ದು ಅವುಗಳನ್ನು ವಿದ್ಯಾರ್ಥಿನಿಯರು ಸಮರ್ಪಕವಾಗಿ ಸದ್ಬಳಕೆ ಮಾಡಿಕೊಳ್ಳಬೇಕು. ಸ್ವಾವಲಂಬಿಯಾಗಿ ಬದುಕಲು ಶಿಕ್ಷಣ ಪೂರಕವಾಗಿದೆ. ವಿದ್ಯಾಭ್ಯಾಸಕ್ಕೆ ಹೆಚ್ಚಿನ ಆದ್ಯತೆ ನೀಡಿ ವಿದ್ಯಾವಂತರಾಗಿ, ಪ್ರಜ್ಞಾವಂತ ಪ್ರಜೆಗಳಾಗಿ ಪೋಷಕರಿಗೆ, ಕಲಿತ ಶಾಲೆಗೆ, ನಿಮ್ಮೂರುಗಳಿಗೆ ಕೀರ್ತಿ ತರುವಂತಹ ಕಾರ್ಯಕ್ಕೆ ಮುಂದಾಗಬೇಕು ಎಂದರು.

ಇದೇ ವೇಳೆ ಜಿಲ್ಲಾಧಿಕಾರಿ ಕಚೇರಿ ಮುಂಭಾಗದಲ್ಲಿ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್‌ರವರ ತಾಯಿ ನಾಗರತ್ನಮ್ಮ, ಜಿಪಂ ಸಿಇಒ ನೊಂಗ್ಜಾಯ್ ಮೊಹಮ್ಮದ್ ಅಕ್ರಮ್ ಅಲಿ ಷಾ ಅವರ ತಾಯಿ ಸಫೀನಾ ಹೆಸರಿನಲ್ಲಿ ಸಸಿಗಳನ್ನು ನೆಡುವ ಮೂಲಕ ರಾಷ್ಟ್ರೀಯ ಹೆಣ್ಣುಮಕ್ಕಳ ದಿನಾಚರಣೆಗೆ ಚಾಲನೆ ನೀಡಿದರು. ಬಳಿಕ ವಿದ್ಯಾರ್ಥಿಗಳಿಗೆ ಪ್ರತಿಜ್ಞಾವಿಧಿ ಬೋಧನೆ, ಸಹಿ ಸಂಗ್ರಹ ಅಭಿಯಾನವನ್ನು ನಡೆಸಲಾಯಿತು. ಜಿಲ್ಲಾಧಿಕಾರಿ ಕಚೇರಿಯಿಂದ ಪ್ರಮುಖ ರಸ್ತೆಯಲ್ಲಿ ಪಥಸಂಚಲನ ನಡೆಸುವ ಮೂಲಕ ಜಾಗೃತಿ ಜಾಥಾ ನಡೆಸಲಾಯಿತು.

ಈ ವೇಳೆ ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣಪ್ಪ, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಧಿಕಾರಿ ಸಲೀಂ ಪಾಷ, ಜಿಲ್ಲಾ ನಿರೂಪಣಾ ಅಧಿಕಾರಿ ಸುಭದ್ರಾ ದೇವಿ, ಸಿಡಿಪಿಒ ಸಿಂಧು ಅಂಗಡಿ, ಚೈತನ್ಯ ಗ್ರಾಮೀಣ ಅಭಿವೃದ್ಧಿ ಎಜ್ಯೂಕೇಷನಲ್ ಟ್ರಸ್ಟ್ ಸಂಸ್ಥೆಯ ಅಧ್ಯಕ್ಷ ಯು.ಭೀಮರಾಜ, ಶಿಶು ಅಭಿವೃದ್ಧಿ ಯೋಜನಾಧಿಕಾರಿ ಅಂಬುಜಾ, ಜಿಲ್ಲಾ ಮಿಷನ್ ಸಂಯೋಜಕ ಶಿವಣ್ಣ, ನೇತ್ರಾ ಹರ್ತಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಮಕ್ಕಳ ರಕ್ಷಣಾಧಿಕಾರಿ ಗಂಗಾಧರ ಡೊಳ್ಳಿನ ಇತರರಿದ್ದರು.

# ಜಿಲ್ಲಾ ಕೇಂದ್ರ ಸ್ಥಾನದ ನಗರ ಠಾಣೆಗೆ ಪಿಐ ಹುದ್ದೆ ಕೊಡಿ, ಸಿಬ್ಬಂದಿ ಕೊಡಿ



ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ: ನಗರ ಪೊಲೀಸ್ ಠಾಣೆಯನ್ನು ಸಬ್ ಇನ್ಸಪೆಕ್ಟರ್ ಹುದ್ದೆಯ ಮೇಲೆ ನಿರ್ವಹಣೆ ಮಾಡುತ್ತಿರುವುದು ಅಸಹಜ ಸಂಗತಿಯಾಗಿದ್ದು ತಕ್ಷಣ ಕೇಂದ್ರಸ್ಥಾನದ ಠಾಣೆಗೆ ಪಿ.ಐ. ಹುದ್ದೆಯನ್ನು ಮಂಜೂರು ಮಾಡುವಂತೆ ಸಾಮಾಜಿಕ ಹೋರಾಟಗಾರ ಭೀಮು ಪೂಜಾರಿ ಆಗ್ರಹಿಸಿದರು.

ನಗರಕ್ಕೆ ಆಗಮಿಸಿದ್ದ ಗೃಹ ಸಚಿವ ಡಾ. ಜಿ. ಪರಮೇಶ್ವರ ಅವರಿಗೆ ಮನವಿ ಸಲ್ಲಿಸಿ ಮಾತನಾಡಿದ ಅವರು, ಜಿಲ್ಲಾ ಕೇಂದ್ರ ಸ್ಥಾನದಲ್ಲಿ ಪಿಎಸ್.ಐ. ಹುದ್ದೆಯಿಂದ ಠಾಣೆ ನಡೆಸಲಾಗುತ್ತಿದೆ, ಆದರೆ ತಾಲ್ಲೂಕು ಗ್ರಾಮ ಮಟ್ಟದಲ್ಲಿ ಪಿ.ಐ. ಹುದ್ದೆಗಳಿಂದ ನಿರ್ವಹಣೆ ಮಾಡುತ್ತಿರುವುದು ಜಿಲ್ಲೆಗೆ ಅವಮಾನಕಾರಿ ಸಂಗತಿಯಾಗಿದೆ.

ಗುರುಮಠಕಲ್, ಸೈದಾಪೂರ, ಶಹಾಪೂರ, ಸುರಪುರ ಠಾಣೆಗಳು ಪಿ.ಐ. ಹುದ್ದೆಯಿಂದ ನಿರ್ವಹಣೆ ಮಾಡಲಾಗುತ್ತಿದೆ ಇದೇ ರೀತಿಯಲ್ಲಿ ತಮ್ಮ ಆಡಳಿತಾವಧಿಯಲ್ಲಿ ತಕ್ಷಣ ನಗರ ಠಾಣೆಯ ಹುದ್ದೆಯನ್ನು ಮೇಲ್ದರ್ಜೆಗೇರಿಸಬೇಕು ಮತ್ತು ಹೆಚ್ಚಿನ ಸಿಬ್ಬಂದಿಗಳನ್ನು ನೇಮಿಸಿ, ಕೇಂದ್ರ ಸ್ಥಾನದ ಕಾನೂನು ಸುವ್ಯವಸ್ಥೆಯನ್ನು ಸಮರ್ಥವಾಗಿ ನಿಭಾಯಿಸಲು ಆಗುವಂತೆ ಕ್ರಮ ಕೈಗೊಳ್ಳಬೇಕೆಂದು ಅವರು ಸಚಿವರನ್ನು ಒತ್ತಾಯಿಸಿದರು.

ನಗರ ಪೊಲೀಸ್ ಠಾಣೆಯಲ್ಲಿ ಈಗ ಸದ್ಯ 78 ಜನ ಸಿಬ್ಬಂದಿಗಳು ಮಾತ್ರ ಇದ್ದು, ಸುಮಾರು 150 ಕ್ಕೂ ಹೆಚ್ಚು ಸಿಬ್ಬಂದಿಗಳ ಅವಶ್ಯಕತೆ ಇರುತ್ತದೆ. ಯಾದಗಿರಿ ಜಿಲ್ಲಾ ಕೇಂದ್ರವಾಗಿದ್ದು, ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕ್ರೈಂಗಳು ನಡೆಯುತ್ತಿದ್ದು, ಸಿಬ್ಬಂದಿಗಳ ಕೊರತೆ ಇರುತ್ತದೆ. ಕಳೆದ 14 ವರ್ಷದಿಂದ ಕಡಿಮೆ ಸಿಬ್ಬಂದಿಗಳೇ ಕೆಲಸ ನಿರ್ವಹಿಸುತ್ತಿದ್ದು, ಇದರಿಂದ ಜಿಲ್ಲೆಯಲ್ಲಿನ ಅಕ್ರಮಗಳ ತಡೆಗೆ ಪೊಲೀಸರಿಗೆ ಕಷ್ಟವಾಗುತ್ತಿದೆ.

ಯಾದಗಿರಿ ನಗರ ವಿಸ್ತಾರಗೊಳ್ಳುತ್ತಿರುವುದರಿಂದ ಸ್ಟೇಷನ್ ಏರಿಯಾದಲ್ಲಿ ಒಂದು ಪೊಲೀಸ್ ಠಾಣೆ ತೆರೆದು ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ಸಚಿವರಿಗೆ ಒತ್ತಾಯಿಸಿದರು.

# ಅಭಿಮಾನಿಗಳ ಪ್ರೋತ್ಸಾಹಕ್ಕೆ ಚಿರಋಣಿ : ಚಿತ್ರನಟಿ ಪ್ರೇಮಾ



ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ : ಕಳೆದ 25 ವರ್ಷಗಳ ಹಿಂದೆ ನಾನು ಚಿತ್ರರಂಗಕ್ಕೆ ಆಕಸ್ಮಿಕವಾಗಿ ಪ್ರವೇಶ ಮಾಡಿದೆ, ಪಂಚಭಾಷೆಗಳಲ್ಲಿ ನಟನೆ ಮಾಡಿ, ಒಂದು ಕುಟುಂಬಕ್ಕೆ, ಸಮಾಜಕ್ಕೆ ಒಳ್ಳೆಯ ಸಂದೇಶ ನೀಡುವ ಪಾತ್ರಗಳಲ್ಲಿ ನಟಿಸಿ, ಎಲ್ಲರ ಮೆಚ್ಚುಗೆ ಗಳಿಸಿದ್ದೇನೆ, ಅದಕ್ಕೆ ನೀವೂ ನೀಡಿರುವ ಅಭಿಮಾನದ ಪ್ರೊತ್ಸಾಹಕ್ಕೆ ಚಿರಋಣಿ ಎಂದು ಕನ್ನಡ ಖ್ಯಾತ ಚಿತ್ರ ನಟಿ ಪ್ರೇಮಾ ಹೇಳಿದರು.

ಜಿಲ್ಲೆಯ ಶಹಾಪುರ ತಾಲ್ಲೂಕಿನ ಇಬ್ರಾಹಿಂಪೂರ ಗ್ರಾಮದಲ್ಲಿರುವ ಶ್ರೀ ಸಾಯಿ ಸಿದ್ಧಾಶ್ರಮ (ರಿ)ನ ಸಾಯಿ ಮಂದಿರದ ಆವರಣದಲ್ಲಿ ಸಂಜೆ ಹಮ್ಮಿಕೊಂಡಿದ್ದ 3ನೇ ವರ್ಷದ ಜಾತ್ರಾ ಮಹೋತ್ಸವ ಧಾರ್ಮಿಕ ಹಾಗೂ ಸಾಂಸ್ಕೃತಿಕ ರಸಮಂಜರಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಈ ಹಿಂದೆ ನಾಡಿನಲ್ಲಿ ರಾಜಕುಮಾರ, ವಿಷ್ಣುವರ್ಧನ್, ಅಂಬರೀಶ, ಲೀಲಾವತಿ, ಜಯಂತಿ ಇನ್ನಿತರ ನಟ–ನಟಿಯರು ಒಳ್ಳೆಯ ಸಿನಿಮಾಗಳನ್ನು ನಾಡಿಗೆ ಪರಿಚಯಿಸುವ ಮೂಲಕ ಚಿತ್ರರಂಗಕ್ಕೆ ಮೆರಗು ತಂದರು, ಆದರೆ ಇಂದಿನ ಚಿತ್ರರಂಗದಲ್ಲಿ ನಾವೂ ಹಲವಾರು ವ್ಯತ್ಯಾಸಗಳನ್ನು ಕಾಣುತ್ತಿದ್ದೇವೆ, ನಾನು ಈಗಾಗಲೇ ಹಲವಾರು ನಿರ್ದೇಶಕರೊಂದಿಗೆ ಚರ್ಚಿಸಿ, ಒಂದು ಅದ್ಭುತ ಸಿನಿಮಾ ಮಾಡಲು ಸಿದ್ಧತೆಯಲ್ಲಿದ್ದೇವೆ ಎಂದು ತಿಳಿಸಿದರು,

ಕಲ್ಯಾಣ ಕರ್ನಾಟಕ ಭಾಗ ಶರಣರ, ಸೂಫಿ–ಸಂತರ ನಾಡಾಗಿದೆ, ಇಲ್ಲಿ ಮೊದಲಿನಿಂದಲೂ ಜನರು ಕಲೆ, ಸಾಹಿತ್ಯ, ಸಾಂಸ್ಕೃತಿಕ ಚಟುವಟಿಕೆಗಳಿಗೆ ಬೆಂಬಲಿಸುತ್ತಾ ಬಂದಿರುವುದನ್ನು ಕಂಡಿದ್ದೇನೆ, ಅಲ್ಲದೇ ಹಲವಾರು ಪ್ರತಿಭಾವಂತ ಕಲಾವಿದರು ಇಲ್ಲಿದ್ದಾರೆ, ಅವರಿಗೆ ಸೂಕ್ತ ವೇದಿಕೆ ಕಲ್ಪಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದು ತಿಳಿಸಿದ ಅವರು, ಇಲ್ಲಿರುವ ಸಾಯಿಬಾಬಾರ ದರ್ಶನ ಪಡೆದು ನನ್ನಲ್ಲಿ ಹೊಸ ಧನಾತ್ಮಕ ಶಕ್ತಿ ಮೂಡಿದೆ. ಈ ಕ್ಷೇತ್ರ ಇನ್ನಷ್ಟೂ ಪ್ರಗತಿಯಾಗಲಿ ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಮಾಜಿ ಸಚಿವ ರಾಜುಗೌಡ, ಸಾಯಿ ಬಾಬಾರ ಜಾತ್ರೆ ಜನರಲ್ಲಿ ಸಾಮರಸ್ಯ ಮೂಡಿಸಿದೆ, ಧಾರ್ಮಿಕ ಕಾರ್ಯಕ್ರಮಗಳ ಜೊತೆಗೆ ರಸಮಂಜರಿ ಕಾರ್ಯಕ್ರಮ ನಡೆಸುವ ಮೂಲಕ ನಾಡಿನ ಪ್ರತಿಭಾವಂತ ಕಲಾವಿದರ ಪ್ರದರ್ಶನ ಈ ಭಾಗದ ಜನರು ವಿಕ್ಷೀಸಲು ಸಹಕಾರಿಯಾಗಿದೆ ಎಂದು ಹೇಳಿದರು.

ಹಿರಿಯ ಸಾಹಿತಿ ಮಹಿಪಾಲರಡ್ಡಿ ಮುನ್ನೂರ ಮಾತನಾಡಿ, ಕನ್ನಡ ಸಾಹಿತ್ಯಕ್ಕೆ ರಾಷ್ಟ್ರಕೂಟರು ಕವಿರಾಜ ಮಾರ್ಗ ಗ್ರಂಥ ನೀಡುವ ಮೂಲಕ ಹಿರಿಮೆಯನ್ನು ಹೆಚ್ಚಿಸಿದರು ಎಂದು ಕಲ್ಯಾಣ ಕರ್ನಾಟಕದ ಸಾಹಿತ್ಯ, ಕಲೆ, ಸಂಗೀತ ಕ್ಷೇತ್ರಗಳ ಮೆಲುಕು ಹಾಕಿ, ವಿವರಿಸಿದರು.

ಸಮಾರಂಭದ ದಿವ್ಯ ಸಾನಿಧ್ಯ ವಹಿಸಿದ ಗುರುಮಿಠಕಲ್ ಖಾಸಾ ಮಠದ ಪೀಠಾಧಿಪತಿ ಶಾಂತವೀರ ಮಹಾಸ್ವಾಮಿಜಿ, ಅರಕೇರಾ (ಕೆ) ಗುರುಲಿಂಗ ಮಹಾಸ್ವಾಮಿಜಿ ಆಶೀರ್ವಚನ ನೀಡಿದರು.

ಅಧ್ಯಕ್ಷತೆಯನ್ನು ಮಂದಿರ ಅಧ್ಯಕ್ಷ ಮಹಾರಾಜ ದಿಗ್ಗಿ ವಹಿಸಿ ಮಾತನಾಡಿದರು,

ವೇದಿಕೆ ಮೇಲೆ ಸೂಗೂರ (ಎನ್) ಭೋಜಲಿಂಗೇಶ್ವರ ಮಠದ ಹಿರಗಪ್ಪ ತಾತನವರು, ಚಟ್ನಳ್ಳಿಯ ವಿಶ್ವಾರಾಧ್ಯ ಶ್ರೀ, ಸಿದ್ದಪ್ಪಾಜಿ, ಚಿತ್ರನಟಿ ಶರಣ್ಯ ಶೆಟ್ಟಿ, ಕರವೇ ಉತ್ತರ ಕರ್ನಾಟಕ ಅಧ್ಯಕ್ಷ ಶರಣು ಗದ್ದುಗೆ, ಸುಭಾಷ ರಾಠೋಡ, ಶ್ರೀನಿವಾಸರಡ್ಡಿ ಪಾಟೀಲ್ ಚನ್ನೂರ, ಡಾ. ಶರಣಭೂಪಾಲರಡ್ಡಿ ನಾಯ್ಕಲ್, ಬಸವರಾಜ ಪಡುಕೋಟೆ, ಜಹಿರುದ್ದೀನ್, ವಿಶ್ವನಾಥ ಹಿರೇಮಠ, ಹಣಮಂತರಡ್ಡಿ ಪಾಟೀಲ್ ಇಬ್ರಾಹಿಂಪೂರ, ಚನ್ನಾರಡ್ಡಿ ಜಾದವ, ಅಲ್ಲಿಸಾಬ್ ನಾಯ್ಕಲ್, ಮಲ್ಲಯ್ಯ ಕಸಬಿ, ಗಣೇಶ ದುಪ್ಪಲ್ಲಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ನಂತರ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಬೆಂಗಳೂರಿನ ಕಾಮಿಡಿ ಕಿಲಾಡಿಗಳು, ಸರಿಗಮಪ, ಜೋಡಿ ನಂ. 1, ಡಾನ್ಸ್ ಕರ್ನಾಟಕ ಡಾನ್ಸ್ ಇನ್ನಿತರ ಕಲಾವಿದರ ತಂಡಗಳು ಸಂಗೀತ ಕಾರ್ಯಕ್ರಮ ಪ್ರೇಕ್ಷರನ್ನು ರಂಜಿಸಿತು.

ನಾಗರಾಜ ಪಾಟೀಲ್ ಸ್ವಾಗತಿಸಿದರೆ, ಡಾ. ಜ್ಯೋತಿಲತಾ ತಡಿಬಿಡಿಮಠ ನಿರೂಪಿಸಿದರೆ, ಮಾಳಪ್ಪಯಾದವ ವಂದಿಸಿದರು.

# ಯಾದಗಿರಿ! ಮೈಕ್ರೋ ಫೈನಾನ್ಸ್ ಕಂಪನಿಗಳ ಕಿರುಕುಳ ತಾಳಲಾರದೆ ವಿವಿಧ ಮಹಿಳಾ ಸ್ವಸಹಾಯ ಸಂಘಗಳಿಂದ ಎಸ್ಪಿ ಗೆ ದೂರು




ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ: ಜಿಲ್ಲೆಯ ಸುರಪುರ ತಾಲ್ಲೂಕಿನ ಕೆಂಭಾವಿ ಪಟ್ಟಣದಲ್ಲಿ ಮೈಕ್ರೋ ಫೈನಾನ್ಸ್ ಕಂಪೆನಿಯವರಿಂದ ಒಂದು–ಎರಡು ಕಂತು ಹಣ ಕಟ್ಟಲು ವಿಳಂಬವಾಗಿದ್ದಕ್ಕೆ ವಿವಿಧ ಮಹಿಳಾ ಸ್ವಸಹಾಯ ಸಂಘಗಳ ಸದಸ್ಯರಿಗೆ ಇನ್ನಿಲ್ಲದ ಕಿರುಕುಳ ನೀಡುತ್ತಿದ್ದಾರೆ ಎಂದು ಆರೋಪಿಸಿ ಯಾದಗಿರಿ ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳಿ ಮನವಿ ಪತ್ರ ಸಲ್ಲಿಸಿದರು.

ನಮಗೆ ಮಾನಸಿಕ ಹಿಂಸೆ ನೀಡುತ್ತಿದ್ದು ಇದರಿಂದ ಸಂಕಷ್ಟ ಎದುರಾಗಿರುವ ನಮಗೆ ಸ್ವಲ್ಪ ಕಾಲಾವಕಾಶ ಒದಗಿಸಿಕೊಡುವುದರ ಜೊತೆಗೆ ತೊಂದರೆ ಕೊಡುತ್ತಿರುವ ಕಂಪನಿಗಳ ವಿರುದ್ಧ ದೂರು ಸಲ್ಲಿಸಿದ್ದಾರೆ.

ಗ್ರಾಮೀಣ ಕೂಟ ಮೈಕ್ರೋ ಫೈನಾನ್ಸ್, ಆಶೀರ್ವಾದ ಮೈಕ್ರೋ ಫೈನಾನ್ಸ್ , ಗ್ರಾಮ ಶಕ್ತಿ ಮೈಕ್ರೋ ಫೈನಾನ್ಸ್, ಧರ್ಮಸ್ಥಳ ಗ್ರಾಮಾಬಿವೃದ್ಧಿ ಸಂಘ, ಸಮಸ್ತ ಮೈಕ್ರೋ ಫೈನಾನ್ಸ್, ನವಚೈತನ್ಯ ಮೈಕ್ರೋ ಫೈನಾನ್ಸ್, ಆರ್.ಬಿ. ಎಲ್. ಮೈಕ್ರೋ ಫೈನಾನ್ಸ್, ಸೇರಿದಂತೆ ಒಟ್ಟು 8 ಮೈಕ್ರೋ ಫೈನಾನ್ಸ್ ಕಂಪೆನಿಯವರಿಂದ ಸಾಲ ಪಡೆದು ನಾವು ಕಷ್ಟ ಅನುಭವಿಸುತ್ತಿದ್ದೇವೆ ಎಂದರು.

ಪ್ರತಿವಾರ ಹಾಗೂ ಕೆಲವು ಸಂಘಗಳಿಗೆ ತಿಂಗಳಿಗೆ ನಿಯಮಿತವಾಗಿ ಸಾಲ ಬಡ್ಡಿ ಕಂತು ಕಟ್ಟುತ್ತಾ ಬರುತ್ತಿದ್ದೇವೆ. ಆದರೆ ಯಾವಾಗಲಾದರೂ ಅನಿವಾರ್ಯ ಸಂದರ್ಭದಲ್ಲಿ ಒಂದು ಕಂತು ಇಲ್ಲವೇ ಎರಡು ಮೂರು ಕಂತುಗಳ ಹಣ ಕಟ್ಟಲು ವಿಳಂಬವಾದರೆ ಈ ಸಂಘದವರು ಇನ್ನಿಲ್ಲದ ಕಿರುಕುಳ ನೀಡುತ್ತಿದ್ದಾರೆ.

ನೇರವಾಗಿ ರಾತ್ರಿವೇಳೆ ಅಂದರೆ ಸಂಜೆ 6 ಗಂಟೆಗೆ ನಂತರ 8–9 ಗಂಟೆ ಹೊತ್ತಿನಲ್ಲಿ ಸುಮಾರು 7–8 ಜನ ಸಿಬ್ಬಂದಿಗಳು ಮನೆಗೆ ಬಂದು ತಕ್ಷಣ ಹಣ ಕಟ್ಟಬೇಕು ಎಂದು ಒತ್ತಾಯ ಮಾಡುತ್ತಾರೆ.

ಇಲ್ಲ ಸರ್ ಸ್ವಲ್ಪ ಸಮಸ್ಯೆ ಇದೆ ಸಮಯ ಕೊಡಿ ಎಂದರೆ ಹಗುರವಾಗಿ ಮಾತನಾಡುವುದು ಹಾಗೂ ಏಕವಚನ ಮಾತನಾಡುವುದು ಮಾಡುದ್ದಿದ್ದಾರೆ. ಮೊದಲೇ ಕಡುಬಡವರಾಗಿರುವ ನಾವು ನಿತ್ಯ ಕೂಲಿ ಇಲ್ಲವೇ ಸಣ್ಣ ಪುಟ್ಟ ಬೀದಿಬದಿ ವ್ಯಾಪಾರ ಮಾಡಿ ಜೀವನ ನಡೆಸುತ್ತಿದ್ದೇವೆ ಸ್ವಲ್ಪ ವಿಳಂಬವಾಗಿದ್ದಕ್ಕೆ ಇನ್ನಿಲ್ಲದ ಕಿರುಕುಳ ನೀಡುತ್ತಾರೆ.

ಬಹಳಷ್ಟು ಸಂದರ್ಭದಲ್ಲಿ ಮನೆಯುಲ್ಲಿ ಸಾವಾಗಿರಲಿ, ದೇವರು ಮಾಡುವುದು ಇರಲಿ ಯಾವುದನ್ನು ನೋಡದೇ ನಮಗೆ ಮಾನಸಿಕ ನೀಡುತ್ತಿರುವ ಕಂಪೆನಿಗಳ ಸಿಬ್ಬಂದಿಯವರ ಕಾರಣದಿಂದಾಗಿ ನಮಗೆ ಒತ್ತಡ ಉಂಟಾಗಿ ಕಷ್ಟದಲ್ಲಿ ರೋಗಗಳಿಗೆ ಈಡಾಗುವ ಪರಿಸ್ಥಿತಿ ನಿರ್ಮಾಣವಾಗಿದೆ.

ನಾವು ಹಣ ಪಾವತಿ ಮಾಡುವುದಕ್ಕೆ ನಿರಾಕರಿಸಿಲ್ಲ ಆದರೆ ಸ್ವಲ್ಪ ಕಾಲಾವಕಾಶ ನೀಡುವಂತೆ ಕೇಳಿದರೂ ಅದಕ್ಕೆ ಯಾವುದೇ ಕಿಮ್ಮತ್ತು ನೀಡದೇ ನಮಗೆ ನಿರಂತರ ಕಿರಕುಳ ನೀಡುತ್ತಿದ್ದಾರೆ.

ಆದ್ದರಿಂದ ನಮಗೆ ತೊಂದರೆ ಕೊಡುತ್ತಿರುವವರ ವಿರುದ್ಧ ಕ್ರಮ ಕೈಗೊಂಡು ನಮಗೆ ಕಿರುಕುಳ ನೀಡದಂತೆ ಮಾಡಬೇಕು ನಮಗೆ ಸಮಯಾವಕಾಶ ಕೊಡಿಸಿಕೊಡಬೇಕೆಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಮಾಶಬಿ, ರಾಜೇಶ್ವರಿ, ಅಕ್ಕಮ್ಮ, ರಸೂಲಬಿ, ಸೈದಾಬಿ, ನೂರಜಾ, ದೌಲಬಿ, ರಾಣುಬಾಯಿ ಇದ್ದರು.

### ಅರಣ್ಯ ಇಲಾಖೆಯ ದಾಸೋಹಕ್ಕೆ ಚಾಲನೆ

## ಅನ್ನದಾನ ಶ್ರೇಷ್ಠ ದಾನ: ಹೊನ್ನಾಲಿಂಗೇಶ್ವರ ಸ್ವಾಮಿಗಳು



ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ:ಶ್ರೀವೀರಭದ್ರೇಶ್ವರ ಜಾತ್ರಾ ಮಹೋತ್ಸವದಲ್ಲಿ ಕಳೆದ ಹತ್ತು ಹನ್ನೆರಡು ವರ್ಷಗಳಿಂದ ಅರಣ್ಯ ಇಲಾಖೆ ಹುಮನಾಬಾದ ವತಿಯಿಂದ ಜಾತ್ರಾ ಮಹೋತ್ಸವಕ್ಕೆ ಬರುವ ಭಕ್ತಾಧಿಗಳಿಗಾಗಿ ಅನ್ನದಾಸೋಹ ಮಾಡುತ್ತಿರುವ ಕಾರ್ಯ ಮೆಚ್ಚುವಂತದಾಗಿದೆ ಎಲ್ಲಾ ದಾನಗಳಕ್ಕಿಂತಲು ಅನ್ನದಾನ ಶ್ರೇಷ್ಠ ದಾನಯಾಗಿದೆ ಎಂದು ಸಿಂಧನಕೇರಾ ವಿರಕ್ತ ಮಠದ ಹೊನ್ನಲಿಂಗೇಶ್ವರ ಸ್ವಾಮಿಗಳು ಚಾಲನೆ ನೀಡಿ ಮಾತನಾಡುತ್ತಾ ತಿಳಿಸಿದರು. ಅರಣ್ಯ ಇಲಾಖೆ ಪವಿತ್ರವಾದ ಇಲಾಖೆಯಾಗಿದ್ದು ಅರಣ್ಯ ಸಂರಕ್ಷಣೆ, ಅರಣ್ಯ ಅಭಿವೃದ್ಧಿಗೆ ನಿಷ್ಠೆ, ಪ್ರಾಮಾಣಿಕತೆಯಿಂದ ಕೆಲಸ ನಿರ್ವಹಿಸಲು ಕರೆ ನೀಡಿದರು. ಬಸವಕಲ್ಯಾಣ ಉಪ ವಿಭಾಗದ ಸಹಕಾಯ ಅರಣ್ಯ ಸಂರಕ್ಷಣಾಧಿಕಾರಿ ಮಹಮ್ಮದ್ ಮುಜಬೋದ್ದಿನ ಮಾತನಾಡಿ, ಅರಣ್ಯ ಇಲಾಖೆ ಸಿಬ್ಬಂದಿ ವರ್ಗ ಒಗ್ಗಟ್ಟಿನಿಂದ ದಾಸೋಹ ಏರ್ಪಡಿಸುತ್ತಿರುವ ಕಾರ್ಯ ಮೆಚ್ಚುವಂತ ಕಾರ್ಯ ಮಾಡುತ್ತಿದ್ದಾರೆ ಎಂದು ಹೇಳಿದರು. ಪ್ರಾದೇಶಿಕ ವಲಯ ಅರಣ್ಯಧಿಕಾರಿ ಐಶ್ವರ್ಯ ಗೊಬ್ಬುರ್ ಮಾತನಾಡಿ, ಕಳೆದ ಹತ್ತು ಹನ್ನೆರಡು ವರ್ಷಗಳಿಂದ ನಡೆಯುತ್ತಿರುವ ದಾಸೋಹ ನಾನು ಅಧಿಕಾರ ವಹಿಸಿಕೊಂಡ ಮೇಲೆ ಪ್ರಥಮ ದಾಸೋಹ ಇದಾಗಿದೆ ನಮ್ಮೆಲ್ಲ ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳ ಮಾರ್ಗದರ್ಶನ ಹಾಗೂ ಸಿಬ್ಬಂದಿ ಗಳ ಸಹಕಾರದೊಂದಿಗೆ ಈ ದಾಸೋಹ ಏರ್ಪಡಿಸಲಾಗಿದೆ ಎಂದರು. ಬೀದರ್ ಸಾಮಾಜಿಕ ವಲಯ ಅರಣ್ಯಾಧಿಕಾರಿ ಶಿವಕುಮಾರ ರಾಠೋಡ್ ಮಾತನಾಡಿ, ಕಲ್ಯಾಣ ಕರ್ನಾಟಕದಲೇ ಹುಮನಾಬಾದ ಜಾತ್ರಾ ಮಹೋತ್ಸವ ಪ್ರಸಿದ್ಧವಾಗಿದೆ ಇಲ್ಲಿಯ ಸಂಘ ಸಂಸ್ಥೆಗಳು, ಸರ್ಕಾರಿ ನೌಕರರು, ವ್ಯಾಪಾರಸ್ಥರು ಜಾತ್ರೆಗೆ ಬರುವ ಭಕ್ತಾದಿಗಳಿಗೆ ಮಾದರಿಯಾಗಲಿ ಎಂದರು. ಈ ಸಂದರ್ಭದಲ್ಲಿ ರಮೇಶ ಕನಕಟ ಸಹಕಾರ ಅರಣ್ಯ ಸಂರಕ್ಷಣಾಧಿಕಾರಿ ಬೀದರ್ ಉಪ ವಿಭಾಗ, ಪ್ರೇಮಶೇಖರ ಸಾಮಾಜಿಕ ವಲಯ ಅರಣ್ಯ ಪ್ರಭಾರಿ ಹುಮನಾಬಾದ, ಜೇವರ್ಗಿ ಸಾಮಾಜಿಕ ವಲಯ ಅರಣ್ಯಧಿಕಾರಿ ಸಂತೋಷ ಯಾಖೆ, ಉಪ ವಲಯ ಅರಣ್ಯಧಿಕಾರಿ ಅಂಬಾದಾಸ್, ಸಂತೋಷ, ಪ್ರಭುರಾವ, ರೋಫಖಾನ್ ಸಾಮಾಜಿಕ ವಲಯ ಹುಮನಾಬಾದ, ಗಸ್ತು ಅರಣ್ಯ ಪಾಲಕರಾದ ಸದಾನಂದ, ಮಾಳಪ್ಪ, ಅಲಿಮೋದ್ದಿನ, ಗೋರಖನಾಥ, ಸುನೀಲ ಸೇರಿದಂತೆ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



“ ಹುಮನಾಬಾದ ಪಟ್ಟಣದ ಶ್ರೀ ವೀರಭದ್ರೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ಕಳೆದ ಹತ್ತು ಹನ್ನೆರಡು ವರ್ಷಗಳಿಂದ ಅರಣ್ಯ ಇಲಾಖೆ ಹುಮನಾಬಾದ ವತಿಯಿಂದ ಭಕ್ತಾಧಿಗಳಿಗೆ ಅನ್ನದಾಸೋಹ ಏರ್ಪಡಿಸುತ್ತೇವೆ. ಶ್ರೀ ವೀರಭದ್ರೇಶ್ವರ ದೇವಸ್ಥಾನ ಜಾತ್ರೆಗೆ ಆಗಮಿಸಿದ ಸಕಲ ಸದ್ಭಕ್ತಾಧಿಗಳ ಇಷ್ಟಾರ್ಥಗಳನ್ನು ಸಿದ್ದಿಯಾಗಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ. ಹುಮನಾಬಾದ ಪ್ರಾದೇಶಿಕ ವಲಯ ಅರಣ್ಯ ಕಚೇರಿಯಲ್ಲಿ ಪ್ರತಿ ವರ್ಷ ಅನ್ನದಾಸೋಹ ಏರ್ಪಡಿಸುತ್ತೇವೆ, ದಾಸೋಹಕ್ಕೆ ಸಹಕರಿಸಿದ ನಮ್ಮ ಇಲಾಖೆಯ ಸಿಬ್ಬಂದಿ ವರ್ಗಕ್ಕೆ ಹಾಗೂ ಅನ್ನ ದಾಸೋಹದಲ್ಲಿ ಭಾಗವಹಿಸಿದ ಭಕ್ತಾದಿಗಳಿಗೆ ಧನ್ಯವಾದಗಳು.

**–ಐಶ್ವರ್ಯ ಗೊಬ್ಬುರ್**
**ಪ್ರಾದೇಶಿಕ ವಲಯ ಅರಣ್ಯಧಿಕಾರಿಗಳು ಹುಮನಾಬಾದ.**

### ರಾಯಣ್ಣನ ವೃತ್ತ ಉದ್ಘಾಟನೆ..!

## ಕ್ರಾಂತಿವೀರ" ಸಂಗೊಳ್ಳಿ ರಾಯಣ್ಣನಿಗೆ ಕೋಟಿ, ಕೋಟಿ ನಮನಗಳು



ಮಲ್ಲಮ್ಮ ನುಡಿ ವಾರ್ತೆ

ನವದೆಹಲಿ: ದೇಶದ ಸ್ವಾತಂತ್ರ್ಯಕ್ಕಾಗಿ ಬ್ರಿಟಿಷರ ವಿರುದ್ಧ ಕಚ್ಚೆದೆಯಿಂದ ಹೋರಾಡಿದ ಸ್ವಾತಂತ್ರ್ಯ ಹೋರಾಟಗಾರ, ಮಹಾನ್ ದೇಶಭಕ್ತ, ವೀರ ರಾಣಿ ಕಿತ್ತೂರು ಚೆನ್ನಮ್ಮ, ಸಂಸ್ಥಾನದ ಸೇನಾಧಿಪತಿಯಾದ "ಕ್ರಾಂತಿವೀರ" ಸಂಗೊಳ್ಳಿ ರಾಯಣ್ಣನ ಪುಣ್ಯಸ್ಮರಣೆಯ ದಿನವಾದ ಇಂದು ಅವರನ್ನು ಮನಃಪೂರ್ವಕವಾಗಿ ಸ್ಮರಿಸುತ್ತಾ, ಕೋಟಿ, ಕೋಟಿ ನಮಗಳನ್ನು ಸಲ್ಲಿಸುತ್ತೇನೆ.

ಕಿತ್ತೂರು ಸಂಸ್ಥಾನದ ಮೇಲೆ ಆಕ್ರಮಣ ಮಾಡಿದ ಬ್ರಿಟಿಷರ ವಿರುದ್ಧ ಹೋರಾಡಿ ದೇಶದ, ಸ್ವಾತಂತ್ರ್ಯ ಸಂಗ್ರಾಮಕ್ಕೆ ಮೊಟ್ಟ ಮೊದಲು ಅಡಿಪಾಯ ಹಾಕಿದ ಮಹಾನ್ ವೀರ ಸೇನಾನಿ ಸಂಗೊಳ್ಳಿ ರಾಯಣ್ಣ. ಈ ವೀರ ಪುರುಷನ ಇತಿಹಾಸ ಕೇಳಿದರೆ, ಈಗಲೂ ನಮ್ಮ ನರ ನಾಡಿಗಳಲ್ಲಿ ದೇಶಭಕ್ತಿಯ ಕಿಚ್ಚು ಪುಟಿದೇಳುತ್ತದೆ.

ಸಂಗೊಳ್ಳಿ ರಾಯಣ್ಣನು ತನ್ನ ಜೀವನದ ಮೂವತ್ತೈದು ವರ್ಷಗಳ ಕಾಲ ಕಿತ್ತೂರು ನಾಡಿನ ಸ್ವಾತಂತ್ರ್ಯಕ್ಕಾಗಿ ತನ್ನ ಜೀವನವನ್ನೇ ಸಮರ್ಪಿಸಿದ ಮಹಾನ್ ವೀರ.

ಇಂತಹ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಅವರನ್ನು ಅವರ ಪುಣ್ಯಸ್ಮರಣೆಯ ದಿನವಾದ ಇಂದು ಗೌರವಪೂರ್ವಕವಾಗಿ ಸ್ಮರಿಸುತ್ತಾ, ಮತ್ತೊಮ್ಮೆ ಕೋಟಿ, ಕೋಟಿ ನಮನಗಳನ್ನು ಸಲ್ಲಿಸುತ್ತೇನೆ. ಉದ್ಘಾಟಿಸಿ ಮಾತನಾಡಿದ ಆದಿತ್ಯ ಪೊಲೀಸ್ ಪಾಟೀಲ್ ರವರು.. ಉದ್ಘಾಟನೆಯಲ್ಲಿ : ಕೆಂಭಾವಿ ಪಟ್ಟಣದ ಮುಖಂಡರಾದ ಸಂಗಣ್ಣ ಸಾಹುಕಾರ್ ತುಂಬಿಗಿ ಶರಣಪ್ಪ ಯಾಳಗಿ ಮಾಳಪ್ಪ ಸುಂಕದ್ ಉಮೇಶ್ ರೆಡ್ಡಿ ದೇವು ಯಾಳಗಿ ಸಿದ್ದು ಶಹಾಪುರ ಅಯ್ಯಳಪ್ಪ ಮೇಲಗಲ್ಲಿ ಬೀರು ಮೇಲಗಲ್ಲಿ ಬಸವರಾಜಪ್ಪ ಪೂಜಾರಿ ಪ್ರಧಾನಿ ಮ್ಯಾಗೇರಿ ಮಲ್ಲಣ್ಣ ನಡುಕುರ್ ಪರಶುರಾಮ್ ಹಿರೇಕುರುಬರು ರಾಜು ಅರಗಲ್ ಮಹೇಶ್ ಮಾಳು ಯಾಳಗಿ ಮಂಜು ಮುದನೂರ್ ರಮೇಶ್ ಬೇಕರಿ ಇನ್ನು ಅನೇಕ ಮುಖಂಡರು ಉದ್ಘಾಟನೆಯಲ್ಲಿ ಬಾಗಿ ಆಗಿದ್ದರು..!

# ಪುರಸಭೆಯಲ್ಲಿ 76ನೇ ಗಣರಾಜ್ಯೋತ್ಸವ ಆಚರಣೆ



ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ: ಪುರಸಭೆಯಲ್ಲಿ 76ನೇ ಗಣರಾಜ್ಯೋತ್ಸವ ಆಚರಣೆ ಮಾಡಲಾಯಿತ್ತು. ಮಹಾತ್ಮ ಗಾಂಧಿಜೀ ಮತ್ತು ಡಾ. ಬಿ.ಆರ್. ಅಂಬೇಡ್ಕರ ರವರ ಭಾವಚಿತ್ರಕ್ಕೆ ಪುರಸಭೆ ಅಧ್ಯಕ್ಷೆ ರೋಜಮ್ಮ ತಿಪ್ಪಣ್ಣ, ಉಪಾಧ್ಯಕ್ಷ ಮುಜಾಫರ್ ಪಟೇಲ್ ಮತ್ತು ಮುಖ್ಯಾಧಿಕಾರಿ ಹುಸಾಮುದ್ದೀನ್ ಬಾಬಾ ಅವರು ಹೂ ಮಾಲಾರ್ಪಣೆ ಮಾಡುವುದರ ಮೂಲಕ ಪೂಜೆ ನೆರವೇರಿಸಿದರು. ನಂತರ ಪುರಸಭೆ ಅವರಣದಲ್ಲಿ ಅಧ್ಯಕ್ಷೆ ರೋಜಮ್ಮ ಅವರು ಧ್ವಜಾರೋಹಣ ನೆರವೇರಿಸಿದರು. ಈ ಸಂದರ್ಭದಲ್ಲಿ ಸದಸ್ಯರಾದ ನಸೀರ ಖಾನ್, ರಹೇಮಾನ್ ಪಾಶ, ಮಹ್ಮದ ನಸೀರ ಹಕೀಂ, ರೇವಣಪ್ಪ ಭುತಾಳೆ, ಮಹ್ಮದ್ ನಿಸಾರೋದ್ದಿನ್ ತಬ್ರೇಜ್, ಜಲೀಸಾ ಬೇಗಂ, ಪಾರ್ವತಿ, ವನೀತಾಬಾಯಿ, ಪುರಸಭೆ ವ್ಯವಸ್ಥಾಪಕಿ ವಾಣಿ ಕುಲಕರ್ಣಿ, ಪರಿಸರ ಅಭಿಯಂತೆ ಪೂಜಾ ಪಾನಶೆಟ್ಟಿ, ವಿಜಯಕುಮಾರ, ರವಿಕುಮಾರ ಸ್ವಾಮಿ, ವೈಶಾಲಿ, ಚಿದಾನಂದ ಪತ್ರಿ, ಸಂತೋಷ ಬಿರಾದರ, ಸೂರ್ಯಕಾಂತ ಕುಲಕರ್ಣಿ, ಸರೋಜನಿ, ಕವಿತಾ, ಸಂತೋಷ, ರಾಜಕುಮಾರ ಗುತ್ತೆದಾರ್, ಸಂತೋಷಕುಮಾರ, ಸಚಿನ, ನಥಾನಿಯೇಲ್, ಅಶ್ವಿನಿ. ಮಂಜುಳಾ, ಬಕ್ಕಪ್ಪ, ಭೀಮಶಾ, ಇಲಾಹಿ, ರಾಜು ತೇಲಂಗ್ ಪ್ರಮುಖರಾದ ಅಶೋಕ ಸ್ವಾಮಿ, ಮಾಜಿ ಸದಸ್ಯ ಮಲ್ಲಿಕಾರ್ಜುನ ಪಾಟೀಲ, ಶ್ರೀಕಾಂತ್ ಭಟ್ಟ್, ಶರಣಪ್ಪ ಗಡಮಿ, ಪ್ರವೀಣಕುಮಾರ, ದತ್ತು ಹಲಗೆ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಸೀತಾಳಗೇರಾ ಗ್ರಾಮ ಪಂಚಾಯತನಲ್ಲಿ 76ನೇ ಗಣರಾಜ್ಯೋತ್ಸವ ಆಚರಣೆ



ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ: ತಾಲೂಕಿನ ಸೀತಾಳಗೇರಾ ಗ್ರಾಮದ ಗ್ರಾಮ ಪಂಚಾಯತಿಯಲ್ಲಿ 76ನೇ ಗಣರಾಜ್ಯೋತ್ಸವ ಆಚರಣೆ ಮಾಡಲಾಯಿತ್ತು. ಮಹಾತ್ಮ ಗಾಂಧಿಜೀ ಮತ್ತು ಡಾ. ಬಿ.ಆರ್. ಅಂಬೇಡ್ಕರ ಹಾಗೂ ಸಂಗೊಳ್ಳಿ ರಾಯಣ್ಣನವರ ಭಾವಚಿತ್ರಕ್ಕೆ ಅಧ್ಯಕ್ಷೆ ಗೋದಾವರಿ ಮಲ್ಲಪ್ಪ, ಉಪಾಧ್ಯಕ್ಷ ವಿಶ್ವನಾಥ ಕುಂಬಾರ ಮತ್ತು ಅಭಿವೃದ್ಧಿ ಅಧಿಕಾರಿ ರಮೇಶ ಮಂಠಾಳ ಅವರು ಹೂ ಮಾಲಾರ್ಪಣೆ ಮಾಡುವುದರ ಮೂಲಕ ಪೂಜೆ ನೆರವೇರಿಸಿದರು. ನಂತರ ಪಂಚಾಯತ್ ಅವರಣದಲ್ಲಿ ಅಧ್ಯಕ್ಷೆ ಗೋದಾವರಿ ಅವರು ಧ್ವಜಾರೋಹಣ ನೆರವೇರಿಸಿದರು. ಈ ಸಂದರ್ಭದಲ್ಲಿ ಸದಸ್ಯರಾದ ಸಾಯಿನಾಥ ನಾಗರಾಳೆ, ಚಂದ್ರಕಾಂತ ಸಿದ್ರಾಮ, ನಿಂಗಪ್ಪ ಭೀಮರೆಡ್ಡಿ, ಚನ್ನಬಸಪ್ಪ ಶ್ರೀನಿವಾಸ, ಅರ್ಜುನ್ ಗುಂಡಪ್ಪ, ಕಸ್ತೂರಿಬಾಯಿ ಅರುಣಕುಮಾರ, ಗೀತಾ ಸ್ವಾಮಿದಾಸ, ಸಿಬ್ಬಂದಿಗಳಾದ ಈಶ್ವರ ಕೋರಿ, ಅನೀಲಕುಮಾರ್, ಚಂದ್ರಶೇಖರ್, ಸುಧಾರಾಣಿ, ಮಹೇಶಕುಮಾರ, ವಿನೋದ್ ಪ್ರಮುಖರಾದ ಸುಧಾಕ ಕಲ್ಯಾಣ, ಓಂಕಾರ ಚಂದ್ರಗೊಂಡ, ವಿಜಯಕುಮಾರ ಪಾಟೀಲ್ ಸೇರಿದಂತೆ ಶಾಲಾ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

### ಗರ್ಭಿಣಿಯರಲ್ಲಿ ರಕ್ತಹೀನತೆ ಇದ್ದಲ್ಲಿ ನಿರ್ಲಕ್ಷಿಸಬೇಡಿ, ಉಚಿತ

## ಎಫ್‌ಸಿಎಮ್ ಚುಚ್ಚುಮದ್ದು ತಪ್ಪದೇ ಪಡೆಯಿರಿ: ಡಿಹೆಚ್‌ಓ ಡಾ.ಯಲ್ಲಾ ರಮೇಶ್ ಬಾಬು



ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಜ.27–ಗರ್ಭಿಣಿಯರಲ್ಲಿ ರಕ್ತಹೀನತೆ ಇದ್ದಲ್ಲಿ ನಿರ್ಲಕ್ಷಿಸಬಾರದು. ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಎಫ್‌ಸಿಎಮ್ ಚುಚ್ಚುಮದ್ದು ಹಾಕಿಸಿ ರಕ್ತಹೀನತೆ ತಡೆಗೆ ಮುಂದಾಗಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್ ಬಾಬು ಅವರು ಹೇಳಿದರು.

ಸಿರಗುಪ್ಪ ಪಟ್ಟಣದ ಹೊರವಲಯದ ವಲಸೆ ಜನವಿರುವ ಸಿದ್ದಪ್ಪನಗರಕ್ಕೆ ಗರ್ಭಿಣಿ ಮಹಿಳೆಯರ ಮನೆ ಭೇಟಿ ಮಾಡಿ ಸ್ಥಳೀಯ ಜನತೆಯೊಂದಿಗೆ ಅವರು ಮಾತನಾಡಿದರು.

ಮನೆಯಲ್ಲಿ ಗರ್ಭಿಣಿಯಿದ್ದರೆ ಅವರು ಮನೆಯ ಮಗಳಾಗಿರಲಿ ಅಥವಾ ಸೊಸೆಯಾಗಿರಲಿ ಯಾವುದೇ ಕಾರಣಕ್ಕೂ ರಕ್ತಹೀನತೆಯಾಗದಂತೆ ಕಾಳಜಿ ವಹಿಸಬೇಕು. ಈ ದಿಶೆಯಲ್ಲಿ ದುಬಾರಿಯಾದ ಎಫ್.ಸಿ.ಎಮ್ ಚುಚ್ಚುಮದ್ದನ್ನು ಎಲ್ಲ ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ಉಚಿತವಾಗಿ ನೀಡಲಾಗುತ್ತದೆ ಎಂದು ಅವರು ತಿಳಿಸಿದರು.

ನಿಮ್ಮ ವೃತ್ತಿಯೊಂದಿಗೆ ಮನೆಯಲ್ಲಿನ ಗರ್ಭಿಣಿಯ ಆರೈಕೆಗೆ ಆದ್ಯತೆ ನೀಡಬೇಕು. ಆರೋಗ್ಯ ಇಲಾಖೆಯಿಂದ ನೀಡುವ ಕಬ್ಬಿಣಾಂಶ ಮಾತ್ರೆಗಳನ್ನು ಊಟವಾದ ಒಂದು ಗಂಟೆಯ ನಂತರ ತಪ್ಪದೇ ನುಂಗಿಸಬೇಕು. ಕಬ್ಬಿಣಾಂಶ ಮಾತ್ರೆ ನುಂಗಿದರೆ, ಭ್ರೂಣ ದಪ್ಪವಾಗುತ್ತದೆ, ಕಪ್ಪು ಬಣ್ಣದ ಮಗು ಹುಟ್ಟುತ್ತದೆ ಎಂಬ ತಪ್ಪು ನಂಬಿಕೆಗಳನ್ನು, ಗಾಳಿಸುದ್ದಿಗಳನ್ನು ನಂಬಬಾರದು. ವೈದ್ಯರ ಸಲಹೆಯಂತೆ ಉಚಿತವಾಗಿ ನೀಡುವ ಕಬ್ಬಿಣಾಂಶ ಮಾತ್ರೆಗಳನ್ನು ಪ್ರತಿದಿನ ಒಂದರಂತೆ ಕನಿಷ್ಠ 180 ಸೇವಿಸಬೇಕು ಎಂದು ಅವರು ವಿನಂತಿಸಿದರು. ಗಂಡಾಂತರ ಗರ್ಭಿಣಿಯರು ಎಂದು ಗುರ್ತಿಸಿದ ನಂತರ ಅಂದರೆ ಚೊಚ್ಚಲು ಗರ್ಭಿಣಿ, ಎತ್ತರ ಕಡಿಮೆ, ಅಧಿಕ ರಕ್ತದೊತ್ತಡ, ರಕ್ತದಲ್ಲಿ ಕಬ್ಬಿಣಾಂಶ ಕೊರತೆ, ಅವಳಿ ಜವಳಿ ಗರ್ಭಣಿ, ವಿವಾಹವಾಗಿ ಐದಕ್ಕಿಂತ ಹೆಚ್ಚು ವರ್ಷಗಳ ನಂತರ ಗರ್ಭಿಣಿಯಾಗಿರುವುದು, ಮೊದಲ ಹೆರಿಗೆ ಸಿಸೇರಿಯನ್, ಮುಂತಾದ ಕಾರಣಗಳಿದ್ದರೆ ನಿರ್ಲಕ್ಷಿಸಬಾರದು. ಅಲ್ಲದೆ ತೀವ್ರ ರಕ್ತಹೀನತೆಯಂತಹ ಸನ್ನಿವೇಶದಲ್ಲಿ ಸ್ಥಳೀಯವಾಗಿ ನೀಡುವ ಚಿಕಿತ್ಸೆಯಾದ (ಐಎಫ್‌ಎ ಮಾತ್ರೆ, ಐರನ್ ಸುಕ್ರೋಸ್, ರಕ್ತ ಹಾಕಿಸುವಿಕೆ) ಸುಧಾರಣೆಯಾಗದಿದ್ದಲ್ಲಿ ತಜ್ಞರ ಬಳಿ ತಪ್ಪದೇ ಕಳುಹಿಸಬೇಕು. ಅಗತ್ಯವಿದ್ದಲ್ಲಿ ಸ್ಕ್ಯಾನ ಮಾಡಿಸಬೇಕು ಎಂದು ಹೇಳಿದರು.

**ಪೌಷ್ಟಿಕ ಆಹಾರ ತಪ್ಪದೆ ನೀಡಿ:**

ಗರ್ಭಿಣಿ ಮಹಿಳೆಯರಿಗೆ ಮೊಳಕೆ ಕಾಳು, ಹಸಿರು ತಪ್ಪಲು ಪಲ್ಯ ಮೊಟ್ಟೆ, ಮೀನು, ಸಾಂಸ್ಕೃತಿಕವಾಗಿ ಒಪ್ಪಿದರೆ ಮಾಂಸಹಾರಿ ಊಟ, ಋತುಮಾನದ ಹಣ್ಣುಗಳನ್ನು ತಪ್ಪದೇ ಕೊಡಬೇಕು. ಇದಕ್ಕೆ ಬೆಂಬಲವಾಗಿ ಈಗಾಗಲೇ ಪ್ರತಿ 9 ಹಾಗೂ 24 ತಾರೀಖುಗಳಂದು ಎಲ್ಲ ಆರೋಗ್ಯ ಕೇಂದ್ರಗಳಲ್ಲಿ ತಪಾಸಣೆಯೊಂದಿಗೆ ಪೌಷ್ಟಿಕತೆ ಇರುವ ಊಟದ ವ್ಯವಸ್ಥೆ ಕಲ್ಪಿಸಲಾಗಿದೆ ಎಂದರು.

**ರಕ್ತಶೇಖರಣಾ ಘಟಕ ಆರಂಭ:**

ಗರ್ಭಿಣಿ ಸೇರಿದಂತೆ ಇತರರಿಗೆ ರಕ್ತದ ಅವಶ್ಯಕತೆ ಇದ್ದರೆ ಒದಗಿಸಲು ಮೋಕಾ, ಕುರುಗೋಡು, ಕಂಪ್ಲಿ, ತೋರಣಗಲ್ಲು ಆರೋಗ್ಯ ಕೇಂದ್ರಗಳಲ್ಲಿ ರಕ್ತ ಶೇಖರಣಾ ಘಟಕ ಆರಂಭಿಸಲಾಗಿದ್ದು, ಸಾರ್ವಜನಿಕರು ಇದರ ಸದುಪಯೋಗ ಪಡೆಯಲು ತಿಳಿಸಿದರು.

**ಹೆರಿಗೆ ದಿನಾಂಕ 3 ದಿನ ಮೊದಲು ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ:**

ಹೆರಿಗೆಗೆ ನಿರೀಕ್ಷಿತ ದಿನಾಂಕದ 3 ದಿನ ಮೊದಲು ಗರ್ಭಿಣಿಯರು ಅದರಲ್ಲೂ ಗಂಡಾಂತರಕಾರಿ ಲಕ್ಷಣಗಳುಳ್ಳವರು ತಮ್ಮ ಹತ್ತಿರದ ಸರ್ಕಾರಿ ಆಸ್ಪತ್ರೆಗೆ ದಾಖಲಾಗಿ ಸರಳ ಹೆರಿಗೆಯ ಅವಕಾಶಗಳಿಗೆ ಬೆಂಬಲಿಸಬೇಕು ಎಂದು ಕೋರಿದರು.

**ಮಕ್ಕಳ ಜನನದ ಮಧ್ಯ ಅಂತರಕ್ಕಾಗಿ ತಾತ್ಕಾಲಿಕ ವಿಧಾನ ಬಳಸಿ:**

ಮೊದಲ ಹೆರಿಗೆ ಶಸ್ತ್ರಚಿಕಿತ್ಸೆ ಮೂಲಕವಾದಲ್ಲಿ ಪುನಃ ಗರ್ಭಿಣಿಯಾಗುವ ಅವಧಿಯನ್ನು ಕನಿಷ್ಠ 3 ವರ್ಷಕ್ಕೆ ಕಡ್ಡಾಯವಾಗಿ ಮುಂದೂಡಬೇಕು. ಇದಕ್ಕಾಗಿ ಅಂತರ ಚುಚ್ಚುಮದ್ದು, ಕಾಪರ್–ಟಿ, ನೀರೊಧ್ ಬಳಸಲು ವಿನಂತಿಸಿದರು.

ಈ ಸಂದರ್ಭದಲ್ಲಿ ಸಿರುಗುಪ್ಪ ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಬಸವರಾಜ್ ದಮ್ಮೂರ್, ಜಿಲ್ಲಾ ಆರೋಗ್ಯ ಶಿಕ್ಷಣಾದಿಕಾರಿ ಈಶ್ವರ ಹೆಚ್ ದಾಸಪ್ಪನವರ, ಅಂಗನವಾಡಿ ಸಹಾಯಕಿಯರು, ಸ್ಥಳೀಯರಾದ ಅಶೋಕ, ಕಾಸಿಮ್, ಹುಸೇನ್, ಶಿವಶಂಕರ ಉಪಸ್ಥಿತರಿದ್ದರು.

# ಕಮಲನಗರನಲ್ಲಿ 76ನೇ ಗಣರಾಜ್ಯೋತ್ಸವದ ಸಂಭ್ರಮ



ಮಲ್ಲಮ್ಮ ನುಡಿ ವಾರ್ತೆ

ಕಮಲನಗರ:ತಾಲೂಕಿನ ವಿವಿಧ ಶಾಲೆ ಸರಕಾರಿ ಕಚೇರಿಗಳಲ್ಲಿ 76ನೇ ಗಣರಾಜ್ಯೋತ್ಸವ ಸಂಭ್ರಮದಿಂದ ನಡೀತು.

ಪಟ್ಟಣದ ಬೀದಿಗಳಲ್ಲಿ ದೇಶ ಭಕ್ತಿ ಗೀತೆಗೆ ಮಕ್ಕಳ ನ್ರತ್ಯ ನೋಡುಗವರ ಎದೆಯಲ್ಲಿ ದೇಶ ಭಕ್ತಿಯ ನಾದ ನುಡಿಯುತ್ತಿತು.

ಪಟ್ಟಣದ ಹೊರ ವಲದಲ್ಲಿ ಇರುವ ದಿ ಗೋಲ್ಡನ್ ವ್ಯಾಲಿ ಇಂಟರ್ನ್ಯಾಷನಲ್ ಸ್ಕೂಲ್, ಕಮಲನಗರನಲ್ಲಿ ವಿಶೇಷವಾಗಿ 76ನೇ ಗಣರಾಜ್ಯೋತ್ಸವ ಆಚರಣೆ ಮಾಡಲಾಯಿತು.

ಸಂಸ್ಥೆಯ ಅಧ್ಯಕ್ಷರಾದ ಜಯಶ್ರೀ ಪ್ರವೀಣ್ ಬಿರಾದಾರ್ ಧ್ವಜಾರೋಹಣ ಕಾರ್ಯಕ್ರಮ ನೆರೆವರೆಸಿದರು ಮಾತನಾಡಿದರು, ದೇಶದ ಇಂದು ವ್ಯವಸ್ಥೆತವಾಗಿವಾಗಿ ನಡೆಯ ಬೆಕ್ಕಾದರೆ ಅದ್ಕಕೆ ಸೂಕ್ತ ಕಾನೂನು ಅವಶ್ಯಕ ಅದು ನಮ್ಮ ಸಂವಿದಾನ ನಮಗೆ ನೀಡಿದ್ದೆ ಎಂದು ಹೇಳಿದರು. ಜಗತ್ತಿನಲ್ಲಿ ಅತಿ ದೊಡ್ಡ ಮತ್ತು ಲಿಖಿತವಾದ ಸಂವಿದಾನ ತಂದು ಕೊಟ್ಟ ಡಾ. ಬಿ. ಆರ್. ಅಂಬೇಡ್ಕರ ಅವರನ್ನು ಇಂದು ನಾವು ನೆನಸಬೇಕು ಎಂದು ತಿಳಿಸಿದರು.

ಮುಖ್ಯಗುರು ಶರಣು ಸೋಲಾಪುರೆ ರಾಷ್ಟ್ರೀಯ ಭಾವೈಕ್ಯತೆಗೆ ಇಂತಹ ರಾಷ್ಟ್ರೀಯ ಹಬ್ಬಗಳು ವಿಜ್ರುಂಭಣೆಯಿಂದ ನಮ್ಮ ಶಾಲೆಯಲ್ಲಿ ಪ್ರತಿ ವರ್ಷ ಆಚರಣೆ ಮಾಡುತ್ತಿದ್ದೇವೆ ಎಂದು ತಿಳಿಸಿದರು.

ನಂತರ ಶಾಲೆ ವತಿಯಿಂದ ಕಮಲನಗರ ಪಟ್ಟಣದ ಪ್ರಮುಖ ವೃತಗಳಲ್ಲಿ ಮಕ್ಕಳಿಂದ ಭಾಷಣ ಮತ್ತು ನೃತ್ಯ ಕಾರ್ಯಕ್ರಮಗಳು ನೋಡುಗರ ಗಮನ ಸೆಳೆದು ಹರ್ಷಮಯ ವಾತಾವರಣ ನಿರ್ಮಾಣವಾಗಿತ್ತು.

ಶಾಲೆಯ ಸಹಶಿಕ್ಷಕರಾದ ವಿವೇಕ ಎಂ ಸಂಚಾಲನೆ ಮಾಡಿದರು.

ಈ ಕಾರ್ಯಕ್ರಮಕ್ಕೆ ಸಿಬ್ಬಂದಿ ವರ್ಗದವರಾದ ಲೋಕೇಶ ಕೆ, ಜಯಕುಮಾರ್ ಎಸ್, ನೀಲಕಂಠ ಎಂ, ಶ್ರೀರಾಜ, ಹಣಮಂತ, ಬಸವಾಂಬಿಕಾ, ವಿಜಯಲಕ್ಮಿ ಎಸ್, ಆಶರಾಣಿ ಕೆ, ಪೂಜಾ, ಶ್ವೇತಾ, ಜ್ಯೋತಿ, ಜರಿನಾ, ಸಫಿಯಾ, ಅನಿತಾ, ಪಿಂಕಿ ಶಿಕ್ಷಕಿಯರು ಉಪಸ್ಥಿತರಿದ್ದರು.

## ರೈತರ ಬೆಳೆದ ಬೆಳೆಗೆ ಸೂಕ್ತ ಬೆಲೆ ಒದಗಿಸಿ, ಬಸವರಾಜ್ ನಾಟೇಕರ್ ಆಗ್ರಹ

ಮಲ್ಲಮ್ಮ ನುಡಿ ವಾರ್ತೆ

ಶಾಹಪೂರ: ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಪ್ರೊಫೆಸರ್ ಬಿ ಕೃಷ್ಣಪ್ಪ ಬಣದ ಕರ್ನಾಟಕ ದಲಿತ ಸಂಘರ್ಷ ಸಮಿತಿ ವತಿಯಿಂದ ಒಣ ಮೆಣಸಿನ ಕಾಯಿ ಸೂಕ್ತ ಬೆಲೆ ನೀಡಬೇಕೆಂದು ಮಾನ್ಯ ಜಿಲ್ಲಾ ಆಡಳಿತ ಭವನ ಯಾದಗಿರಿ



ಇವರಿಗೆ ಶಹಾಪುರ ತಹಶೀಲ್ದಾರರಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಎಚ್ ಆರ್ ಬಡಿಗೇರ್ ರೈತ ಸಂಘ ಜಿಲ್ಲಾಧ್ಯಕ್ಷರು. ಭೀಮಣ್ಣ ಮಾಲಿ ಬಿರಾದರ್ ಮರ್ದಾನಿ ಶಲದಾಪುರ್. ನಿಂಗಣ್ಣ ಗಂಗನಾಳ. ಯಮನಪ್ಪ ಗೌಡ ಕುಂಬಾರ್ ಗೌರವ ಅಧ್ಯಕ್ಷರು. ಮಲ್ಲಣ್ಣ ಶಾಂತಪುರ್ ಸುಭಾಷ್ ಹೊತಪೇಟ. ಮಾಳಪ್ಪ ಬೋಸ್ಗಿ ಭೀಮನಗೌಡ ಪೊಲೀಸ್ ಪಾಟೀಲ್ ಬಸವರಾಜ ನಾಟೇಕಾರ್ ಆಖಖ ತಾಲೂಕು ಸಂಚಾಲಕರು ಶಹಾಪುರ. ಜಿಂದಾ ವಲಿ ಡಿ ಎಸ್ ಎಸ್ ಸಂ. ಸಂಚಾಲಕರು ಭೀಮರಾಯ ರಾಜಪುರ್ ಶರಣಪ್ಪ ಮದುರಕಿ ರಾಯಪ್ಪ ಕಂಚನಕವಿ ನಾಗರಾಜ್ ಮ್ಯಾಗೇರಿ ದಲಿತ ಯುವ ಮುಖಂಡರು. ಸೋಮಲಿಂಗ ಉಗ್ಗಿ ನಿಂಗಣ್ಣ ಹುಲಿಕಲ್ ಮಲ್ಲಿಕಾರ್ಜುನ್ ಸೇರಿದಂತೆ ಇನ್ನೂ ಕಾರ್ಯಕರ್ತರು ಭಾಗವಹಿಸಿದ್ದರು.

## ಹಾರಕೂಡ ಶ್ರೀ ಗುರುಲಿಂಗ ಶಿವಾಚರ್ಯ ಉಚಿತ ವಸತಿ ಶಾಲೆಯಲ್ಲಿ 76ನೇ ಗಣರಾಜ್ಯೋತ್ಸವ



ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ:–ಸಂವಿಧಾನ ಭಾರತದಮೂಲಾಧಾರ,ತಿರಂಗ ಪ್ರತಿ ಭಾರತೀಯನ ಅಂತರಂಗ ಎಂದು ಹಾರಕೂಡದ ಪೂಜ್ಯಶ್ರೀ ಡಾ. ಚನ್ನವೀರ ಶಿವಾಚರ್ಯರು ನುಡಿದರು.

ತಾಲೂಕಿನ ಹಾರಕೂಡ ಶ್ರೀಮಠದ ಶ್ರೀ ಗುರುಲಿಂಗ ಶಿವಾಚರ್ಯ ಉಚಿತ ವಸತಿ ಶಾಲೆಯಲ್ಲಿ ಹಮ್ಮಿಕೊಂಡ 76ನೇ ಗಣರಾಜ್ಯೋತ್ಸವ ಸಮಾರಂಭದ ಪಾವನ ಸಾನಿಧ್ಯವಹಿಸಿ ಮಾತನಾಡಿದ ಶ್ರೀಗಳು,ಗಣರಾಜ್ಯೋತ್ಸವನಮ್ಮ ದೇಶದ ದೊಡ್ಡ ರಾಷ್ಟ್ರೀಯ ಹಬ್ಬವಾಗಿದ್ದು,ಭಾರತೀಯರೆಲ್ಲರೂ ಸಂವಿಧಾನಿಕ ಬದುಕಿಗೆ ಅಣಿಯಾದ ಪವಿತ್ರ ದಿನ.

ಈ ದೇಶಕ್ಕೆ ಶ್ರೇಷ್ಠ ಹಾಗೂ ಸರ್ಥ ಸಂವಿಧಾನ ಕೊಡುವುದರ ಮೂಲಕಜಗತ್ತಿನಲ್ಲಿಯೇಭಾರತ ದೊಡ್ಡ ಯಶಸ್ವಿ ಪ್ರಜಾಪ್ರಭುತ್ವ ರಾಷ್ಟವಾಗಿ ಬೆಳೆಯಲು ಡಾ. ಬಾಬಾ ಸಾಹೇಬ ಅಂಬೇಡ್ಕರ್ ರವರ ಕೊಡಿಗೆ ಅತ್ಯಂತ ಮಹತ್ವದ್ದಾಗಿದೆ.

ಲಕ್ಷಾಂತರ ದೇಶಭಕ್ತರ ತ್ಯಾಗ ಬಲಿದಾನಗಳಿಂದ ಸಿಕ್ಕಿರುವ ಸ್ವತಂತ್ರ ಹಾಗೂ ಪ್ರಜಾ ರಾಜ್ಯ ವ್ಯವಸ್ಥೆವನ್ನು ಸಂವಿಧಾನಿಕ ಮೌಲ್ಯಗಳ ಚೌಕಟ್ಟಿನಲ್ಲಿ ಉಳಿಸಿ, ಬೆಳೆಸಿಕೊಂಡು ಬರುವುದು ಪ್ರತಿ ಭಾರತೀಯನ ಹೊಣೆಗಾರಿಕೆಯಾಗಿದೆ.

ಘನತೆಯ ಬದುಕು ದೇಶದ ಐಕ್ಯತೆ, ಸಮಗ್ರತೆ ಹಾಗೂ ಅಖಂಡತೆ ಕುರಿತಾದ ಪ್ರಜ್ಞೆ ಸದಾ ಜಾಗೃತವಾಗಿರಬೇಕು.

ವಿಶ್ವದಲ್ಲಿಯೇ ಪ್ರಚಂಡ ಯುವಶಕ್ತಿಹೊಂದಿರುವಭಾರತ, ನಮ್ಮದಾಗಿರುವುದರಿಂದ ರಾಷ್ಟ್ರ ಕಟ್ಟುವ ಕರ್ಯದಲ್ಲಿ ಯುವಕರು ಮುಂದಾಗಬೇಕು.

ಎಲ್ಲ ರಂಗಗಳಲ್ಲೂ ತಿರಂಗ ಪ್ರಜ್ವಲಿಸುತ್ತಿರಬೇಕು ಎಂದು ನುಡಿದರು.

ಶಾಲೆಯ ಆಡಳಿತ ಅಧಿಕಾರಿ ಐ.ಜಿ.ಮಠಪತಿ,ಆನಂದರಾವ ಝುಳಕೆ,ಶಿವಶರಣಯ್ಯಕಂಬಳಿಮಠ, ವಿಜಯಕುಮಾರ ಸಂಗೊಳಗೆ, ಪಂಡಿತರಾವ ದೇಗಾಂವ, ನಾಗೇಶ ಮಹಾಜನ, ವಿಠಲ ಹೂಗಾರ, ವಿಜಯಕುಮಾರ ದೇಸಾಯಿ, ಡಾ. ರಾಜಶೇಖರ ಮದ್ರಿ, ನಾಗಣ್ಣ ಪಾಟೀಲ ಹಾಗೂ ಶ್ರೀ ಗುರುಲಿಂಗ ಶಿವಾಚರ್ಯ ಉಚಿತ ವಸತಿ ಶಾಲೆಯ ಶಿಕ್ಷಕ, ಶಿಕ್ಷಕಿಯರು ಉಪಸ್ಥಿತರಿದ್ದರು.

ನಂತರ ಶ್ರೀ ಗುರುಲಿಂಗ ಶಿವಾಚರ್ಯ ಉಚಿತ ವಸತಿ ಶಾಲೆಯ ಮಕ್ಕಳು ಸಂಸ್ಕೃತಿಕ ಕರ್ಯಕ್ರಮಗಳನ್ನುನಡೆಸಿಕೊಟ್ಟರು.

ಕರ್ತಿಕ ಸ್ವಾಮಿ ಯಲದಗುಂಡಿ ಪ್ರರ್ಥನಾ ಗೀತೆ ನಡೆಸಿಕೊಟ್ಟರು.

ಪ್ರಹ್ಲಾದ ಚೌವ್ಹಾಣ ಸ್ವಾಗತಿಸಿ, ನಿರೂಪಿಸಿದರು.

ಶಿವಾನಂದ ಪೂಜಾರಿ ವಂದಿಸಿದರು.

## ತಾಲೂಕು ಆಡಳಿತದಿಂದ 76ನೇ ಗಣರಾಜ್ಯೋತ್ಸವ ಆಚರಣೆ

# ಪಟ್ಟಣದ ಸಮಗ್ರ ಅಭಿವೃದ್ಧಿಗಾಗಿ ನಿಷ್ಪಕ್ಷಪಾತದಿಂದ ಶ್ರಮಿಸೋಣ: ಪಾಟೀಲ್



ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ: ಸಮಬಾಳು–ಸಮಪಾಲು ಎನ್ನುವ ನಿಟ್ಟಿನಲ್ಲಿ ಡಾ.ಬಾಬಾ ಸಾಹೇಬ ಅಂಬೇಡ್ಕರ್ ಅವರು ನೀಡಿರುವ ಸಂವಿಧಾನದ ಆಶಯದಂತೆ ತಾಲೂಕಿನ ಸಮಗ್ರ ಅಭಿವೃದ್ಧಿಗಾಗಿ ನಾವೆಲ್ಲರೂ ಸೇರಿ ನಿಷ್ಪಕ್ಷಪಾತದಿಂದ ಅಭಿವೃದ್ಧಿಗಾಗಿ ಶ್ರಮಿಸೋಣ ಎಂದು ಶಾಸಕ ಡಾ. ಸಿದ್ದು ಪಾಟೀಲ್ ಹೇಳಿದರು.

ಪಟ್ಟಣದ ತಹಶೀಲ್ ಕಚೇರಿಯ ಆವರಣದಲ್ಲಿ ರವಿವಾರ ತಾಲೂಕು ಆಡಳಿತದಿಂದ ಹಮ್ಮಿಕೊಂಡಿರುವ 76ನೇ ಗಣರಾಜ್ಯೋತ್ಸವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು,ಭಾರತ ರತ್ನ ಡಾ.ಅಂಬೇಡ್ಕರ್ ಅವರು, ನಮ್ಮ ದೇಶಕ್ಕೆ ಪವಿತ್ರವಾದ ಸಂವಿಧಾನವನ್ನು ನೀಡಿದ್ದಾರೆ.

ಜೊತೆಗೆ ಹಕ್ಕುಮತ್ತುಕರ್ತವ್ಯಗಳನ್ನು ಅಳವಡಿಸಿದ್ದಾರೆ. ಅವುಗಳನ್ನು ಚಾಚು ತಪ್ಪದೆ ಪಾಲಿಸಿಕೊಂಡು ಹೊಗುವ ಜವಾಬ್ದಾರಿಗಳನ್ನು ಸಹ ನಮಗೆ ನೀಡಿದ್ದಾರೆ. ಆ ನಿಟ್ಟಿನಲ್ಲಿ ಸಾಂವಿಧಾನಿಕ ಹುದ್ದೆಯಲ್ಲಿರುವ ಪ್ರತಿಯೊಬ್ಬರು ಸಮಾನತೆ, ಸಹಕಾರ, ಭಾತೃತ್ವ, ಭಾವೈಕ್ಯತೆ, ಸಮಾನತೆಯಿಂದ ನಡೆಯುವುದು ಅತ್ಯಂತ ಪ್ರಮುಖವಾಗಿದೆ ಎಂದರು. ಚಿಟಗುಪ್ಪ ಪಟ್ಟಣ ನಿಜಾಮ ಆಡಳಿತದಲ್ಲಿ ಜಿಲ್ಲಾ ಕೇಂದ್ರವಾಗಿದ ಚಿಟಗುಪ್ಪ ಪಟ್ಟಣದ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಶ್ರಮಿಸುತ್ತೇನೆ ಎಂದರು. ಮಿನಿ ವಿಧಾನಸೌಧ, ಕ್ರೀಡಾಂಗಣ, ತಾಲೂಕ ಪಂಚಾಯತ್ ಕಚೇರಿ ನಿರ್ಮಾಣ ಕಾರ್ಯಗಳು ಅತೀ ಶೀಘ್ರದಲ್ಲೇ ಪ್ರಾರಂಭವಾಗಲಿವೆ, ಈಗಾಗಲೇ ಶಾಮತಾಬಾದ(ಹೊಸಳ್ಳಿ)ಯಿಂದ ರಾಷ್ಟ್ರೀಯ ರಸ್ತೆ ಕಾಮಗಾರಿ ಪ್ರಗತಿಯಲ್ಲಿದೆ. ನಾನಾ ಹಜರತ್ ದರ್ಗಾದಿಂದ ಪಟ್ಟಣದವರೆಗೆ ಡಿವೈಡರ್ ರಸ್ತೆನಿರ್ಮಿಸುವುದು,ಸ್ಲಂ ಬೋರ್ಡನಿಂದ ನಿರ್ಮಿಸುತ್ತಿರುವ ನೂತನ ಮನೆಗಳು ಹೆಚ್ಚಿಸುವುದು, ಸಮುದಾಯ ಆರೋಗ್ಯ ಕೇಂದ್ರದಲ್ಲಿರುವ 30 ಹಾಸಿಗೆ ಹೆಚ್ಚಿಸಿ 50 ಹಾಸಿಗೆಯುಳ್ಳ ಆಸ್ಪತ್ರೆ ಮಾಡುವುದಕ್ಕೆ ಈಗಾಗಲೇ ಕೆ ಕೆಆರ್ಡಿಬಿಯಿಂದ ಹಣ ಮಂಜೂರಾಗಿದೆ ಎಂದು ತಿಳಿಸಿದರು. ತಹಶೀಲ್ದಾರ್ ಮಂಜುನಾಥ್ ಪಂಚಾಳ ಧ್ವಜಾರೋಹಣ ನೆರವೇರಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಈ ಸಂದರ್ಭದಲ್ಲಿ ಪುರಸಭೆ ಅಧ್ಯಕ್ಷೆ ರೋಜಮ್ಮ ತಿಪ್ಪಣ್ಣ, ಉಪಾಧ್ಯಕ್ಷ ಮುಜಾಫರ್ ಪಟೇಲ್, ಮುಖ್ಯಾಧಿಕಾರಿ ಹುಸಾಮುದ್ದಿನ ಬಾಬಾ, ತಾಲೂಕ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಲಕ್ಷ್ಮಿ ಎಸ್. ಬಿರಾದಾರ್, ಆಡಳಿತ ವೈದ್ಯಾಧಿಕಾರಿ ಡಾ. ವಿಜಯ ಹಿರಸ್ಕರ್, ಪುರಸಭೆ ಸದಸ್ಯರು, ಪ್ರಮುಖರು, ಪುರಸಭೆ, ಕಂದಾಯ ಇಲಾಖೆ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

### ಹಜರತ್ ನಿಜಾಮುದ್ದೀನ್ ಕೆಎಸ್ಆರ್ ಬೆಂಗಳೂರು ರಾಜಧಾನಿ

## ಎಕ್ಸ್‌ಪ್ರೆಸ್ ರೈಲಿಗೆ ವೀಡಿಯೊ ಕಾನ್ಫರೆನ್ಸ್ ಮೂಲಕ ಹಸಿರು ನಿಶಾನೆ

ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ : ಜನವರಿ 27 : ಪ್ರಧಾನ ವ್ಯವಸ್ಥಾಪಕರು ದಕ್ಷಿಣ ಮಧ್ಯ ರೈಲ್ವೆಯಾದಗಿರಿ ನಿಲ್ದಾಣದಲ್ಲಿ ಹೆಚ್ಚುವರಿ ನಿಲುಗಡೆಯೊಂದಿಗೆ ರೈಲು ಸಂಖ್ಯೆ 22692 ಹಜರತ್ ನಿಜಾಮುದ್ದೀನ್ ಕೆಎಸ್ಆರ್ ಬೆಂಗಳೂರು ರಾಜಧಾನಿ ಎಕ್ಸ್‌ಪ್ರೆಸ್ ರೈಲಿಗೆ ವೀಡಿಯೊ ಕಾನ್ಫರೆನ್ಸ್ ಮೂಲಕ ಹಸಿರು ನಿಶಾನೆಯನ್ನು 2025ರ ಜನವರಿ 28ರ ಮಂಗಳವಾರ ರಂದು ಹಮ್ಮಿಕೊಳ್ಳಲಾಗಿದೆ.

ಭಾರತ ಸರ್ಕಾರ ರೈಲ್ವೆ ಹಾಗೂ ಜಲ ಶಕ್ತಿ ರಾಜ್ಯ ಸಚಿವರಾದ ಶ್ರೀ ವಿ. ಸೋಮಣ್ಣ ಅವರು ಬೆಂಗಳೂರು ರಾಜಧಾನಿ ಎಕ್ಸ್‌ಪ್ರೆಸ್ ರೈಲಿಗೆ ವೀಡಿಯೊ ಕಾನ್ಫರೆನ್ಸ್ ಮೂಲಕ ಹಸಿರು ನಿಶಾನೆ ನೀಡಿ ಉದ್ಘಾಟಿಸುವರು.

ಸಣ್ಣಕೈಗಾರಿಕೆಮತ್ತುಸಾರ್ವಜನಿಕ ಉದ್ದಿಮೆಗಳ ಸಚಿವರು ಹಾಗೂ ಯಾದಗಿರಿ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಶರಣಬಸಪ್ಪ ದರ್ಶನಾಪೂರ, ಹಾಗೂ ಕರ್ನಾಟಕ ವಿಧಾನ ಪರಿಷತ್ತು ವಿರೋಧ ಪಕ್ಷದ ನಾಯಕ ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ, ರಾಯಚೂರು ಲೋಕಸಭಾ ಸದಸ್ಯರು ಶ್ರೀ ಜಿ.ಕುಮಾರ ನಾಯಕ, ವಿಧಾನ ಪರಿಷತ್ತು ಸದಸ್ಯರು ಶ್ರೀ ಬಿ.ಜಿ.ಪಾಟೀಲ್, ಡಾ.ಚಂದ್ರಶೇಖರ ಬಿ.ಪಾಟೀಲ್,ಶ್ರೀ ಶಶೀಲ್ ಜಿ.ನಮೋಶಿ,ಯಾದಗಿರಿ ವಿಧಾನಸಭಾ ಕ್ಷೇತ್ರದ ಶಾಸಕ ಶ್ರೀ ಚನ್ನಾರೆಡ್ಡಿ ಪಾಟೀಲ್ ತುನ್ನೂರ, ಗುರುಮಠಕಲ್ ವಿಧಾನಸಭಾ ಕ್ಷೇತ್ರದ ಶಾಸಕ ಶ್ರೀ ಶರ–ಣಗೌಡ ಕಂದಕೂರ, ಸುರಪುರ ವಿಧಾನಸಭಾ ಕ್ಷೇತ್ರದ ಶಾಸಕ ಶ್ರೀ ರಾಜಾ ವೇಣುಗೋಪಾಲ ನಾಯಕ, ಘನ ಉಪಸ್ಥಿತಿಯಲ್ಲಿ ನೆರವೇರಿಸುವರು.

ಕಾರ್ಯಕ್ರಮಕ್ಕೆ ಮಾಧ್ಯಮ ಮಿತ್ರರು ಹಾಗೂ ಸರ್ವರೂ ಆಗಮಿಸುವಂತೆ ಗುಂತಕಲ್ ವಿಭಾಗೀಯ ರೈಲ್ವೆ ವ್ಯವಸ್ಥಾಪಕರು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಜ.31 ಹೂಗಾರ ದತ್ತಿ ಪ್ರಶಸ್ತಿ ಪ್ರದಾನ ಸಮಾರಂಭ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಜ.27–ಬಾಗಲಕೋಟೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಪ್ರತಿ ವರ್ಷ ನೀಡುವ ಕಲಾದಗಿಯ ಪಿ.ಎಲ್.ಹೂಗಾರ ದತ್ತಿ ಸಾಹಿತ್ಯ ಪ್ರಶಸ್ತಿಯ 2024 ನೇ ಸಾಲಿನ ಪ್ರಶಸ್ತಿ ಪ್ರದಾನ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭ ಜ.31ರಂದು ತಾಲೂಕಿನ ಕಲಾದಗಿಯಲ್ಲಿ ಜರುಗಲಿದೆ.

ಕಲಾದಗಿಯ ಹಣ್ಣು ಬೆಳೆಗಾರರ ಶಿಕ್ಷಣ ಸಂಸ್ಥೆಯ ಸಭಾಭವನದಲ್ಲಿ ಅಂದು ಬೆಳಿಗ್ಗೆ 10:30 ಗಂಟೆಗೆ ನಡೆಯುವ ಸಮಾರಂಭದಲ್ಲಿ ಜಿಲ್ಲಾಧಿಕಾರಿ ಜಾನಕಿ ಕೆ.ಎಂ. ಕಾರ್ಯಕ್ರಮ ಉದ್ಘಾಟಿಸುವರು. ಧಾರವಾಡ ಆಕಾಶವಾಣಿಯ ವಿಶ್ರಾಂತ ನಿರ್ದೇಶಕ ಬಸು ಬೇವಿನಗಿಡದ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ಪತ್ರಕರ್ತ ದ.ರಾ.ಪುರೋಹಿತ ಅಭಿನಂದನಾ ನುಡಿ ಹೇಳಲಿದ್ದು, ಅತಿಥಿಗಳಾಗಿ ಸಾರ್ವಜನಿಕ ಶಿಕ್ಷಣ ಇಲಾಖೆ ವಿಶ್ರಾಂತ ನಿರ್ದೇಶಕ ಎಸ್.ಆರ್.ಮನಹಳ್ಳಿ,ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಎಂ.ವಿವೇಕಾನಂದ,ಎಸ್.ಬಿ.ಅಂಗಡಿ, ವಿ.ಜಿ.ದೇಶಪಾಂಡೆ, ದತ್ತಿದಾನಿ ಪಿ.ಎಲ್.ಹೂಗಾರ ಆಗಮಿಸಲಿದ್ದು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಅಧ್ಯಕ್ಷ ಶಿವಾನಂದ ಶೆಲ್ಲಿಕೇರಿ ಅಧ್ಯಕ್ಷತೆ ವಹಿಸುವರು ಎಂದು ಎಸ್.ಎಲ್.ಹೂಗಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮಾ.31ರಿಂದ ಬಂಗಾರಮಕ್ಕಿಯಲ್ಲಿ ಧಾರ್ಮಿಕ ಕಾರ್ಯಕ್ರಮ



ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ: ಮಾ.31ರಿಂದ ಏಪ್ರಿಲ್ 13ರ ವರೆಗೆ ಧಾರ್ಮಿಕ ಕಾರ್ಯಕ್ರಮ ಮತ್ತು ಶ್ರೀ ವೀರಾಂಜನೇಯ ಸ್ವಾಮಿಯ ಪ್ರಾಣ ಪ್ರತಿಷ್ಠಾಪನೆಯನ್ನು ಮಾಡಲಾಗುವುದು ಎಂದು ಬಂಗಾರಮಕ್ಕಿ ಶ್ರೀ ಮಾರುತು ಗುರುಜಿ ಅವರು ಹೇಳಿದರು.

ಇಲ್ಲಿನ ಗೋವಿಂದಪ್ಪ ಕಲ್ಯಾಣ ಮಂಟಪದಲ್ಲಿ ಶ್ರೀ ಕ್ಷೇತ್ರ ಬಂಗಾರಮಕ್ಕಿಯ ಧಾರ್ಮಿಕ ಕಾರ್ಯಕ್ರಮಗಳ ಕುರಿತು ಆಯೋಜಿಸಿದ್ದ ಸಂಪರ್ಕ ಅಭಿಯಾನ ಕಾರ್ಯಕ್ರಮದ ದಿವ್ಯ ಸಾನಿಧ್ಯವಹಿಸಿ ಮಾತನಾಡಿದ ಅವರು,ಶ್ರೀ ವಿಶ್ವವೀರಾಂಜನೇಯ ಮಹಾಸಂಸ್ಥಾನಮ್,ಹೇಮಪುರ ಮಾಹಾಪೀಠಮ್, ಶ್ರೀ ವೀರಾಂಜನೇಯ ಧಾರ್ಮಿಕ ಹಾಗೂ ದತ್ತಿ ಸಂಸ್ಥೆ ಹಾಗೂ ಶ್ರೀ ಕ್ಷೇತ್ರ ಬಂಗಾರ ಮಕ್ಕಿ ಗೇರುಸೊಪ್ಪ, ಹೊನ್ನಾವರ ಇವರ ಸಂಯುಕ್ತಾಶ್ರಯದಲ್ಲಿ ಸಂಪರ್ಕ ಅಭಿಯಾನದ ಜೊತೆಗೆ ಆಚರಣೆಗಳು ನಡೆಯಲಿವೆ ಎಂದರು. ಏ. 3ರಂದು ಶ್ರೀ ವೀರಾಂಜನೇಯ ಸ್ವಾಮಿಯ ಪ್ರಾಣ ಪ್ರತಿಷ್ಠಾಪನೆ, ಮಹಾಗಣಪತಿಯ ಪ್ರಾಣ ಪ್ರತಿಷ್ಠಾಪನೆ, ಚೌಡೇಶ್ವರಿ ಪ್ರಾಣ ಪ್ರತಿಷ್ಠಾಪನೆ, ಸುಬ್ರಹ್ಮಣ್ಯ ದೇವರ ಪ್ರಾಣ ಪ್ರತಿಷ್ಠಾಪನೆ, ನೂತನ ಗೋಪುರ ಲೋಕಾರ್ಪಣೆ ಮತ್ತು ಸ್ವರ್ಣ ಕಳಸ ಲೋಕಾರ್ಪಣೆ ಜರುಗಲಿದೆ ಎಂದರು.

ಜನಕಲ್ಯಾಣಕ್ಕಾಗಿ ಶತಜಂಡಿ–ಯಾಗ,ಮಹಾರುದ್ರಹೋಮಹವನ ಸೇರಿದಂತೆ ಅನೇಕ ಧಾರ್ಮಿಕ ಕಾರ್ಯಕ್ರಮಗಳು ಶ್ರೀ ಮಠದಲ್ಲಿ ಹಮ್ಮಿಕೊಳ್ಳಲಾಗಿದೆ. ಮಠದಲ್ಲಿ ನಡೆಯುವ ಈ ಮಹಾ ಕಾರ್ಯಕ್ಕೆ ರಾಜ್ಯದ ಹಲವು ಜಿಲ್ಲೆಗಳಿಂದ ಆಗಮಿಸಲಿದ್ದಾರೆ. ಬರುವ ಭಕ್ತಾದಿಗಳಿಗೆ ಎಲ್ಲಾ ರೀತಿಯ ವ್ಯವಸ್ಥೆ ಮಾಡಲಾಗುವುದು ಎಂದು ಅವರು ತಿಳಿಸಿದರು.

ಮಹಾನಗರಪಾಲಿಕೆಯ ಮಾಜಿ ಮೇಯರ್ ಎಂ.ರಾಜೇಶ್ವರಿ ಸುಬ್ಬರಾಯಡು, ಭೀಮನೇನಿ ಪ್ರಸಾದ್, ಅಲ್ಲಾಭಕ್ಷ, ವೀರೇಶ್, ನವೀನ್, ಕೊಟ್ರೇಶ್, ಮಹಾಂತೇಶ್, ಸುರೇಶ್, ಸೂರ್ಯಪ್ರಕಾಶ್, ಜಯಲಲಿತಾ, ಇಂದಿರಾ, ಆನಂದ ದುರ್ಗಾರಾಣಿ ಮತ್ತು ಸಂಧ್ಯಾ ಸೇರಿದಂತೆ ಹಲವು ಭಕ್ತರು ಈ ಸಂದರ್ಭದಲ್ಲಿ ಇದ್ದರು.

### ಮತದಾರರ ಪ್ರತಿಜ್ಞಾ ವಿಧಿ ಭೋದನಾ ಸ್ವೀಕಾರ

## ಮತದಾನದ ಹಕ್ಕು ಮೂಲಭೂತ ಹಕ್ಕು ಎಂಬ ಅಂಶದ ಮೇಲೆ ಕೇಂದ್ರೀಕರಿಸುತ್ತದೆ

ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ : ಜನವರಿ 27: ರಾಷ್ಟ್ರೀಯ ಮತದಾರರ ದಿನದ ಪ್ರಯುಕ್ತ ಮತದಾರರ ಪ್ರತಿಜ್ಞಾ ವಿಧಿ ಭೋದನಾ ಸ್ವೀಕಾರಿಸಿ ಮತದಾನದ ಹಕ್ಕು ಮೂಲಭೂತ ಹಕ್ಕು ಎಂಬ ಅಂಶದ ಮೇಲೆ ಕೇಂದ್ರೀಕರಿಸುತ್ತದೆ ಎಂದು ಜಿಲ್ಲಾ ಪಂಚಾಯತ ಯಾದಗಿರಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿ (ಪ್ರಭಾರ) ಶ್ರೀ ಲವೀಶ್ ಒರಡಿಯಾ ಅವರು ಹೇಳಿದರು. ಯಾದಗಿರಿ ನಗರದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಸಂಯೋಗದಲ್ಲಿ ಹಮ್ಮಿಕೊಂಡಿದ್ದ ಮತದಾರರ ಪ್ರತಿಜ್ಞಾ ವಿಧಿ , ಭೋದನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ರಾಷ್ಟ್ರೀಯ ಮತದಾರರ ದಿನ ಚುನಾವಣಾ ಪ್ರಕ್ರಿಯೆಯಲ್ಲಿ ಮತದಾನದಲ್ಲಿ ಭಾಗವಹಿಸಲು ಯುವಕರನ್ನು ಉತ್ತೇಜಿಸಲು ಜನವರಿ 25 ರಂದು ರಾಷ್ಟ್ರೀಯ ಮತದಾರರ ದಿನವನ್ನು ಆಚರಿಸಲಾಗುತ್ತದೆ. ಇದು ಯುವಕರನ್ನು ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸಲು ಪ್ರೋತ್ಸಾಹಿಸುವುದಲ್ಲದೆ ಮತದಾನದ ಹಕ್ಕು ಮೂಲಭೂತ ಹಕ್ಕು ಎಂಬ ಅಂಶದ ಮೇಲೆ ಕೇಂದ್ರೀಕರಿಸುತ್ತದೆ ಎಂದು ತಿಳಿಸಿದರು.

ಪ್ರತಿ ವರ್ಷ ಜನವರಿ 25 ರಂದು, 1950 ರಲ್ಲಿ ಭಾರತದ ಚುನಾವಣಾ ಆಯೋಗದ ಸ್ಥಾಪನೆಯ ದಿನವನ್ನು ಗೌರವಿಸಲು ರಾಷ್ಟ್ರೀಯ ಮತದಾರರ ದಿನವನ್ನು ಆಚರಿಸಲಾಗುತ್ತದೆ. ಪ್ರಜಾಪ್ರಭುತ್ವದಲ್ಲಿ ಮತದಾನದ ಮೌಲ್ಯದ ಅರಿವು ಮೂಡಿಸುವುದು ಮತ್ತು ಸಕ್ರಿಯವಾಗಿ ತೊಡಗಿಸಿಕೊಳ್ಳುವುದನ್ನು ಉತ್ತೇಜಿಸುವುದು ಇದರ ಉದ್ದೇಶವಾಗಿದೆ. ಚುನಾವಣಾ ಪ್ರಕ್ರಿಯೆ. ಪ್ರತಿಯೊಬ್ಬ ವ್ಯಕ್ತಿಯ ಮತವು ದೇಶದ ಭವಿಷ್ಯದ ಮೇಲೆ ಹೇಗೆ ಮಹತ್ವದ ಪ್ರಭಾವ ಬೀರಬಹುದು ಎಂಬುದನ್ನು ಇದು ಒತ್ತಿಹೇಳುತ್ತದೆ ಮತ್ತು ಜವಾಬ್ದಾರಿಯುತವಾಗಿ, ನೈತಿಕವಾಗಿ ಮತ್ತು ಜ್ಞಾನದೊಂದಿಗೆ ಮತದಾನದ ಮಹತ್ವವನ್ನು ಒತ್ತಿಹೇಳುತ್ತದೆ ಎಂದರು.

ಈ ಸಂದರ್ಭದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಾದ ಡಾ.ಮಹೇಶ್ ಬಿರಾದಾರ, ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳಾದ ಡಾ.ಮಲ್ಲಪ್ಪ, ಜಿಲ್ಲಾ ಆಸ್ಪತ್ರೆಯ ಶಸ್ತ್ರಚಿಕಿತ್ಸಕರಾದ ಡಾ.ರಿಜ್ವಾನ್ ಆಫ್ರೀನ್, ಜಿಲ್ಲಾ ಕುಟುಂಬ ಕಲ್ಯಾಣ ಆದಿಕಾರಿಗಳಾದ ಡಾ.ಜ್ಯೋತಿ ಕಟ್ಟಿಮನಿ ಹಾಗೂ ಆರೋಗ್ಯ ಇಲಾಖೆ ಅಧಿಕಾರಿ, ಸಿಬ್ಬಂದಿಗಳು ಹಾಗೂ ಇನ್ನಿತರರು ಉಪಸ್ಥಿತರಿದ್ದರು.

## ವಾಹನ ಚಾಲನೆ ಮಾಡುವಾಗ ಮೊಬೈಲ್ ಬಳಸಬೇಡಿ, ಅಧಿಕ ವೇಗ ಬೇಡ, ಮಕ್ಕಳಿಗೆ ರಸ್ತೆ ಸುರಕ್ಷತೆ ಜಾಗೃತಿ ಅರಿವು ಕಾರ್ಯಕ್ರಮ



ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ : ಜನವರಿ 27– 36 ನೇ ರಾಷ್ಟ್ರೀಯ ರಸ್ತೆ ಸುರಕ್ಷತಾ ಸಪ್ತಾಹ ಡಾನ್ ಬಾಸ್ಕೋ ಶಾಲೆಯ ಮಕ್ಕಳಿಗೆ ರಸ್ತೆ ಸುರಕ್ಷತೆ ಕುರಿತು ವಾಹನ ಚಾಲನೆ ಮಾಡುವಾಗ ಮೊಬೈಲ್ ಬಳಸಬೇಡಿ, ಅಧಿಕ ವೇಗ ಬೇಡ ಮಕ್ಕಳಿಗೆ ರಸ್ತೆ ಸುರಕ್ಷತೆ ಜಾಗೃತಿ ಅರಿವು ಮೂಡಿಸಲಾಯಿತು ಎಂದು ಯಾದಗಿರಿ ಪ್ರಾದೇಶಿಕ ಸಾರಿಗೆ ಅಧಿಕಾರಿ ಶ್ರೀ ಮಿಲಿಂದ ಕುಮಾರ ಅವರು ಹೇಳಿದರು.

ಯಾದಗಿರಿ ನಗರದ ಡಾನ್ ಬಾಸ್ಕೋ ಪ್ರೌಢ ಶಾಲೆಯಲ್ಲಿ 36ನೇ ರಾಷ್ಟ್ರೀಯ ರಸ್ತೆ ಸುರಕ್ಷತಾ ಸಪ್ತಾಹ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

36ನೇ ರಾಷ್ಟ್ರೀಯ ರಸ್ತೆ ಸುರಕ್ಷತಾ ಮಾಸದಲ್ಲಿ ರಸ್ತೆಯಲ್ಲಿನ ಸುರಕ್ಷತೆ ಕೇವಲ ಧ್ಯೇಯ ವಾಕ್ಯವಾಗದೆ ಜೀವನದ ಸಂಸ್ಕೃತಿ ಆಗಬೇಕು. ರಸ್ತೆಯ ಬಲಭಾಗದಲ್ಲಿ ನಡೆಯಿರಿ, ರಸ್ತೆ ದಾಟಲು ಪಾದಚಾರಿಗಳಿಗಾಗಿ ನಿರ್ಮಿಸಿದ ಕ್ರಾಸಿಂಗ್ ಬಳಸಿ, ನೀವು ರಸ್ತೆದಾಟುವ ಮೊದಲು ಎರಡೂ ಕಡೆ ನೋಡಿ, ರಸ್ತೆಯಲ್ಲಿ ಆಟವಾಡಬೇಡಿ, ನಿಮಗೆ ನಿದ್ರೆ ಬರುವಂತಾದರೆ ಅಥವಾ ಆಯಾಸವಾಗಿದ್ದರೆ ವಾಹನ ಚಾಲನೆ ಮಾಡಬೇಡಿ ಎಂದು ಹೇಳಿದರು.

ವಾಹನ ಚಾಲನೆ ಮಾಡುವಾಗ ಮೊಬೈಲ್ ಬಳಸಬೇಡಿ, ಅಧಿಕ ವೇಗ ಬೇಡ, ವಾಹನ ಚಾಲನೆ ಮಾಡುವಾಗ ಮದ್ಯಪಾನ ಮಾಡಬೇಡಿ, ಯಾವಾಗಲೂ ಹೆಲ್ಮೆಟ್, ಸೀಟ್ ಬೆಲ್ಟ್ ಧರಿಸಿ, ಜೀಬ್ರಾ ಕ್ರಾಸಿಂಗ್‌ನಲ್ಲಿ ಪಾದಚಾರಿಗಳಿಗೆ ಆದ್ಯತೆ ನೀಡಿ, ಸಾರ್ವಜನಿಕರು ತಮ್ಮ ವಾಹನದ ಇನ್ಸೂರೆನ್ಸ್ ಡ್ರೈವಿಂಗ್ ಲೈಸೆನ್ಸ್, ವಾಯು ಮಾಲಿನ್ಯ ಪ್ರಮಾಣ ಪತ್ರ ಸಿಂದುತ್ವದಲ್ಲಿರಿಸಿಕೊಳ್ಳಿ, ದ್ವಿಚಕ್ರ ವಾಹನದಲ್ಲಿ 3 ವಾಹನ ಸವಾರರು ಸವಾರಿ ಮಾಡಬಾರದು, ನಾಳೆ ಬದುಕಲು ಇಂದೇ ಎಚ್ಚರಿಕೆ ನೀಡಿ ಎಂದರು.

ಮೂರ್ಖರಾಗಬೇಡಿ, ರಸ್ತೆ ಸುರಕ್ಷತೆ ನಿಯಮಗಳನ್ನು ಗೌರವಿಸಿ ಉತ್ತಮವಾಗಿ ಬದುಕಲು ಉತ್ತಮ ಚಾಲಕರಾಗಿರಿ, ನಿಮ್ಮ ಭವಿಷ್ಯವನ್ನು ಉಳಿಸಲು ರಸ್ತೆ ಸಂಸ್ಕೃತಿಯನ್ನು ಅನುಸರಿಸಿ, ಅಪ್ರಾಪ್ತ ವಯಸ್ಕರಿಂದ ವಾಹನ ಚಾಲನೆ ಶಿಕ್ಷಾರ್ಹ ವಾಹನಗಳಲ್ಲಿ ಅಧಿಕ ಭಾರ, ಹೆಚ್ಚು ಪ್ರಯಾಣಿಕರನ್ನು ಕೊಂಡೊಯ್ಯದಿರಿ ಜಾಗೃತಿ ಮೂಡಿಸಿ ತಿಳಿಸಿದರು.

36 ನೇ ರಾಷ್ಟ್ರೀಯ ರಸ್ತೆ ಸುರಕ್ಷತಾ ಸಪ್ತಾಹ ಡಾನ್‌ಬಾಸ್ಕೋ ಪ್ರೌಢ ಶಾಲೆಯ ಪ್ರಾಂಶುಪಾಲರು, ಸಿಬ್ಬಂದಿ ವರ್ಗ ಹಾಗೂ ಶಾಲಾ ಮಕ್ಕಳಿಗೆ ರಸ್ತೆ ಸುರಕ್ಷತೆ ಕುರಿತು ಮುಜಾಗೃತ ವಿಷಯಗಳ ಕುರಿತು ವಿಶೇಷ ಅರಿವು ಮೂಡಿಸಲಾಯಿತು.

ಈ ಸಂದರ್ಭದಲ್ಲಿ ಮೋಟಾರು ವಾಹನ ನಿರೀಕ್ಷಕರು ಅಯ್ಯಾಳಪ್ಪ, ಮೋಟಾರು ವಾಹನ ನಿರೀಕ್ಷಕರು ಚಂದ್ರಕಾಂತ, ಮೋಟಾರು ವಾಹನ ನಿರೀಕ್ಷಕರು ಚಂದ್ರಕಾಂತ, ಅಧೀಕ್ಷಕರು ಮೌನೇಶ, ಪ್ರಥಮ ದರ್ಜೆ ಸಹಾಯಕ ಶಿವಕುಮಾರ, ಹರೀಶ ರಾಠೋಡ, ಪ್ರಶಾಂತ, ಕಾಶಿನಾಥ, ಹಾಗೂ ಇನ್ನಿತರರು ಉಪಸ್ಥಿತರಿದ್ದರು.


## ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷರು ಶ್ರೀ ಸೋಮಣ್ಣ ಬೇವಿನಮರದ ಯಾದಗಿರಿ ಜಿಲ್ಲಾ ಪ್ರವಾಸ

ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ : ಜನವರಿ 27 : ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷರು ಶ್ರೀ ಸೋಮಣ್ಣ ಬೇವಿನಮರದ ಅವರು ಜನವರಿ 27, ಹಾಗೂ 28 ರಂದು ಯಾದಗಿರಿ ಜಿಲ್ಲಾ ಪ್ರವಾಸ ಕೈಗೊಳ್ಳಲಿದ್ದಾರೆ ಎಂದು ಅಪರ ಜಿಲ್ಲಾಧಿಕಾರಿ ಶ್ರೀ ಶರಣಬಸಪ್ಪ ಕೋಟೆಪ್ಪಗೊಳ ಅವರು ತಿಳಿಸಿದ್ದಾರೆ.

2025ರ 27ರ ಸೋಮವಾರ ರಂದು ರಾತ್ರಿ 9.30 ಗಂಟೆಗೆ ಕಲಬುರಗಿದಿಂದ ನಿರ್ಗಮಿಸಿ ರಾತ್ರಿ 11 ಗಂಟೆಗೆ ಯಾದಗಿರಿ ಜಿಲ್ಲೆಗೆ ಆಗಮಿಸುವರು. ನಂತರ ಯಾದಗಿರಿ ಸರ್ಕಾರಿ ಅತಿಥಿ ಗೃಹದಲ್ಲಿ ವಾಸ್ತವ್ಯ ಹೊಡಲಿದ್ದಾರೆ. 2025ರ 28ರ ಮಂಗಳವಾರ ರಂದು ಮಧ್ಯಾಹ್ನ 12 ಗಂಟೆಗೆ ಯಾದಗಿರಿ ಜಿಲ್ಲೆಯ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಅಪರ ಜಿಲ್ಲಾಧಿಕಾರಿಗಳೊಂದಿಗೆ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದಿಂದ ನೀಡಲಾದ ಅನುದಾನಕ್ಕೆ ಸಂಬಂಧಿಸಿದಂತೆ ಪ್ರಗತಿ ಪರಿಶೀಲನೆ ಸಭೆ ನಡೆಯಲಿದೆ. ನಂತರ ಸಂಜೆ 4 ಗಂಟೆಗೆ ಬೀದರ್ ಪ್ರಯಾಣ ಬೆಳೆಸುವರು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅದ್ದೂರಿಯಾಗಿ ಮುಗಿದ ಶ್ರೀ ವೀರಭದ್ರೇಶ್ವರ ಜಾತ್ರಾ ಮಹೋತ್ಸವ



### ಭಕ್ತರ ಪರದಾಟ

ದೂರ ದೂರದಿಂದ ಬಂದ ಭಕ್ತರು ದೇವರ ದರ್ಶನ ಪಡೆಯಲು ಪರದಾಡುವಂತಾಯಿತು. ವೃದ್ದರು ಅಗವಿಕಲರು,ಮಹಿಳೆಯರು ಬಿಸಿಲಿನಲ್ಲಿ ನಿಂತು ಸುಸ್ತಾಗಿರುವ ಪ್ರಸಂಗ ನಡೆಯಿತು. ಕೆಲವರು ಕುಡಿಯುವ ನೀರಿಗಾಗಿ ಪರದಾಡಿದರೆ ಕೆಲವರು ಮೂತ್ರ ವಿಸರ್ಜನೆಗಾಗಿ ಪರದಾಡಿದ್ದಾರೆ. ಜಾತ್ರೆ ಎಂದರೆ ಹೀಗೆ ಇರುತ್ತದೆ. ಆದರೆ ಜಾತ್ರೆ ಯಲ್ಲಿ ಬದಲಾವಣೆಗಳು ಹೇಳಿಕೊಳ್ಳುವ ರೀತಿ ಯಾವುದೇ ಇರದೇ ಇರುವುದು ಚರ್ಚೆಗೆ ಗ್ರಾಸವಾಯಿತು.

ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ್.ಇಲ್ಲಿನಗ್ರಾಮದೇವರಾದ ಶ್ರೀ ವೀರಭದ್ರೇಶ್ವರ ಜಾತ್ರಾಮಹೋತ್ಸವವು ಸೊಮವಾರವು ರಥೋತ್ಸವದೊಂದಿಗೆ ಅತಿ ವಿಜ್ರಂಭಣೆಯಿಂದ ಮುಕ್ತಾಯಗೊಂಡಿತು. ದೇವಸ್ಥಾನದಿಂದ ಪಲ್ಲಕ್ಕಿ ಉತ್ಸವವು ಭಾನುವಾರ ತೆರಳಿ ಪ್ರಮುಖ ಬೀದಿಗಳ ಮುಖಾಂತರ ಅಗ್ನಿ ಕುಂಡಕ್ಕೆ ತಲುಪಿತ್ತು. ವಿವಿಧ ರಾಜ್ಯದ. ಜಿಲ್ಲೆ. ಗ್ರಾಮಗಳಿಂದ ಬಂದ ಭಕ್ತರು ದೇವರಿಗೆ ಶಾಲು ಸಮರ್ಪಿಸಿ.ಅಗ್ಗಿ ತುಳಿದು ತಮ್ಮ ಭಕ್ತಿ ಸಮರ್ಪಿಸಿದರು. ಪಲ್ಲಕ್ಕಿ ಉತ್ಸವ ಮುಂದೆ ಡೊಳ್ಳು ಕುಣಿತ, ಸೇರಿದಂತೆ ಇತರೆ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.ದೇವಸ್ಥಾನಕ್ಕೆಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ, ಮಾಜಿ ಕೇಂದ್ರ ಸಚಿವ ಭಗವಂತ ಖೂಬಾ, ಮಾಜಿ ಸಚಿವ ರಾಜಶೇಖರ ಪಾಟೀಲ,ಹಾಲಿ ಶಾಸಕರುಗಳಾದ ಡಾ.ಸಿದ್ದಲಿಂಗಪ್ಪಾ ಪಾಟೀಲ,ಡಾ.ಚಂದ್ರಶೇಖರ ಪಾಟೀಲ, ಭೀಮರಾವ ಪಾಟೀಲ,ದೇವಸ್ಥಾನ ಸೇವಾ ಸಮಿತಿ ಅಧ್ಯಕ್ಷ ವೀರಣ್ಣ ಪಾಟೀಲ, ಪದ್ಮಾಕರ ಪಾಟೀಲ, ಸೇರಿದಂತೆ ಇತರೆ ಜನಪ್ರತಿನಿಧಿಗಳು,ವಿವಿಧ ಮುಖಂಡರು ಅಗಮಿಸಿ ದರ್ಶನ ಪಡೆದರು.

**ಬಿಗಿಬಂದೊಬಸ್ತ:** ಡಿವಾಯ್ ಎಸ್ ಪಿ ನ್ಯಾಮೆಗೌಡರವರ ನೇತೃತ್ವದಲ್ಲಿ ಪೊಲೀಸ್ ಬಿಗಿ ಬಂದೊಬಸ್ತ ಮಾಡಲಾಗಿತ್ತು. ಯಾವುದೆ ತರಹದ ಅಹಿತಕರ ಘಟನೆಗಳು ನಡೆಯದಂತೆ ನೊಡಿಕೊಳ್ಳಲಾಯಿತು.

# ವಿಟಿಯು ಜೊತೆ ಗುರು ನಾನಕ ದೇವ್ ಇಂಜಿನೀಯರಿಂಗ್ ಕಾಲೇಜ್ ಒಪ್ಪಂದ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಜ. 27 : ಗುರು ನಾನಕ ದೇವ್ ಇಂಜಿನೀಯರಿಂಗ್ ಕಾಲೇಜಿಲ್ಲಿನ ಸಭಾಂಗಣದಲ್ಲಿ ನಡೆದ ಒಂದು ಐತಿಹಾಸಿಕ ಸಮಾರಂಭದಲ್ಲಿ, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು) ಮತ್ತು ಗುರು ನಾನಕ ದೇವ್ ಇಂಜಿನೀಯರಿಂಗ್ ಕಾಲೇಜ್‌ಯೊಂದಿಗೆ ಎಂ.ಓ.ಯು.ಗೆ ಒಪ್ಪಂದ ಮಾಡಿಕೊಳ್ಳಲಾಗಿದೆ.

ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ನಿರ್ದೇಶಕರುಗಳಾದ ಡಾ॥ ಸಂಧ್ಯಾ ಆರ್. ಅನ್ವೇಕರ್ ಮತ್ತು ಜಿಎನ್‌ಡಿ ಕಾಲೇಜಿನ ಉಪಾಧ್ಯಕ್ಷೆ ಡಾ॥ ರೇಷ್ಮಾ ಕೌರ್ ಅವರ ಉಪಸ್ಥಿತಿಯಲ್ಲಿ ತಿಳುವಳಿಕೆ ಪತ್ರಕ್ಕೆ ಸಹಿ ಹಾಕಲಾಯಿತು ಮತ್ತು ಡಾಕ್ಯುಮೆಂಟ್ ಹಸ್ತಾಂತರ ಸಮಾರಂಭದಲ್ಲಿ ಎಂಒಯು ವಿನಿಮಯ ಮಾಡಿಕೋಳ್ಳಲಾಯಿತು.

ಈ ಸಂದರ್ಭದಲ್ಲಿ ಡಾ. ರೇಷ್ಮಾ ಕೌರ ಅವರು ಮಾತನಾಡುತ್ತ ಕಲ್ಯಾಣ ಕರ್ನಾಟಕದ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಈ ಒಪ್ಪಂದವನ್ನು ಮಾಡಿಕೊಳ್ಳಲಾಗಿದೆ. ಇದರಿಂದ ಆಗುವ ಸೌಲಭ್ಯಗಳನ್ನು ವಿವರಿಸುತ್ತ ವಿದ್ಯಾರ್ಥಿಗಳಿಗೆ ಕೌಶಲ್ಯ ಅಭಿವೃದ್ಧಿ ಕೇಂದ್ರವನ್ನು ಸ್ಥಾಪಿಸಲು ತಿಳುವಳಿಕೆ ಪತ್ರಕ್ಕೆ ಸಹಿ ಹಾಕಲಾಗಿದೆ. ಈ ಕೇಂದ್ರವು ವಿದ್ಯಾರ್ಥಿಗಳು, ಅಧ್ಯಾಪಕರು, ಉದ್ಯಮ ವೃತ್ತಿಪರರು ಮತ್ತು ಸಾಮಾನ್ಯ ಜನರಿಂದ ಫಲಾನುಭವಿಗಳಿಗೆ ಸಮಗ್ರ ಕೌಶಲ್ಯ ಅಭಿವೃದ್ಧಿಯ ಮೇಲೆ ಕೇಂದ್ರಿಕರಿಸುತ್ತದೆ. ರಾಷ್ಟ್ರೀಯ ಕೌಶಲ್ಯ ಅಭಿವೃದ್ಧಿ ನಿಗಮ, ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ ಮತ್ತು ಇತರ ಸಂಸ್ಥೆಗಳ ವಿವಿಧ ಉಪಕ್ರಮಗಳ ಅಡಿಯಲ್ಲಿ ತರಬೇತಿಯನ್ನು ನೀಡಲಾಗುವುದು ಎಂದು ತಿಳಿಸಿದರು.

ಕರ್ನಾಟಕದಾದ್ಯಂತ ಕೌಶಲ್ಯ ಅಭಿವೃದ್ಧಿ, ಉದ್ಯೋಗ ಸೃಷ್ಟಿ ಮತ್ತು ಒಟ್ಟಾರೆ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಪ್ರತಿಭಾವಂತರಿಗೆ ಅವಕಾಶಗನ್ನು ಕೊಡಲು ಮತ್ತು ರಾಜ್ಯಾದಾದ್ಯಂತ ಬೆಳೆಯಲು ಸರಿಯಾದ ದಿಕ್ಕಿನಲ್ಲಿ ದಾರಿ ತೋರಿಸುವುದೆ ಇದರ ಉದ್ದೇಶವಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಪ್ರಾಂಶುಪಾಲರುಗಳಾದ ಡಾ. ಎಂ ಧನಂಜಯ್ ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಬೃಹತ್ ಗಣತಂತ್ರ ಹೊಂದಿದ ದೇಶ ಭಾರತ : ಸಚಿವ ತಿಮ್ಮಾಪೂರ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಜ.27:ಮಹಾನ್ ಮೇಧಾವಿಗಳ ಸತತ ಅಧ್ಯಯನ, ಚರ್ಚೆಗಳ ಅವಿರತ ಶ್ರಮದ ಫಲವಾಗಿ ಭಾರತ ಸಂವಿಧಾನ ರಚನೆಗೊಂಡು ದೇಶದೊಳಗಿದ್ದ ಎಲ್ಲ ರಾಜ್ಯಗಳು, ಸಂಸ್ಥಾನಗಳು ವಿಲೀನಗೊಂಡು ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ ಏಕ ಸಂವಿಧಾನದಡಿ ಬೃಹತ್ ಗಣತಂತ್ರವಾಗಿ ಹೊರಹೊಮ್ಮಿದ ದೇಶ ಭಾರತ ಎಂದು ಅಬಕಾರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪೂರ ಹೇಳಿದರು.

ನವನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ರವಿವಾರ ಜಿಲ್ಲಾಡಳಿತದಿಂದ ಹಮ್ಮಿಕೊಂಡ 76ನೇ ಗಣರಾಜ್ಯೋತ್ಸವದ ಧ್ವಜಾರೋಹಣ ನೆರವೇರಿಸಿ, ಗೌರವ ವಂದನೆ ಸ್ವೀಕರಿಸಿ ಮಾತನಾಡಿದ ಅವರು, ರಾಷ್ಟ್ರ ಕಟ್ಟುವ ಕಾರ್ಯದಲ್ಲಿ ತ್ಯಾಗ, ಬಲಿದಾನ, ಪ್ರಾಣಾರ್ಪಣೆ ಮಾಡಿದ ಅಸಂಖ್ಯಾತ ದೇಶ ಭಕ್ತರನ್ನು, ರಾಷ್ಟ್ರಪಿತ ಮಹಾತ್ಮ ಗಾಂಧೀಜಿ, ಜವಾಹರಲಾಲ್ ನೆಹರು, ವಲ್ಲಭಭಾಯಿ ಪಟೇಲ್, ಲಾಲಬಹಾದ್ದೂರ ಶಾಸ್ತ್ರಿ, ಬಾಬು ರಾಜೇಂದ್ರಪ್ರಸಾದ ಮುಂತಾದ ಮಹಾನ್ ಮೇಧಾವಿಗಳನ್ನು ನೆನಪಿಸಬೇಕಾಗುತ್ತದೆ. ಇದು ನಮ್ಮೆಲ್ಲರ ಕರ್ತವ್ಯ ಕೂಡಾ ಆಗಿದೆ ಎಂದರು.

ಕೃಷ್ಣಾಮೇಲ್ದಂಡೆಯೋಜನೆಯ 3ನೇ ಹಂತದ ಯೋಜನೆ ಅನುಷ್ಠಾನಕ್ಕೆ ನಮ್ಮ ಸರಕಾರ ಬದ್ಧತೆಯನ್ನು ಸ್ಪಷ್ಟಪಡಿಸಿದೆ. ಇದರಿಂದ ಮುಳುಗಡೆಯಾಗುವ ಸುಮಾರು 73 ಸಾವಿರ ಎಕರೆ ಭೂಮಿಯನ್ನು ಕನ್ಸೆಂಟ್ ಅವಾರ್ಡಿನ ಮೂಲಕ ಒಂದೇ ಹಂತದಲ್ಲಿ ಭೂಸ್ವಾಧೀನಪಡಿಸುವ ಮಹತ್ವದ ತೀರ್ಮಾನ ಕೈಗೊಳ್ಳಲಾಗಿದೆ. ವಾಡಿಕೆಗಿಂತ ಹೆಚ್ಚಿನ ಮಳೆಯಿಂದಾಗಿ ಗ್ರಾಮೀಣ ರಸ್ತೆಗಳು ತೀವ್ರ ಹಾನಿಗೊಳಗಾಗಿದ್ದು, ಇವುಗಳ ಸುಧಾರಣೆಗಾಗಿ ಪ್ರತಿ ಮತಕ್ಷೇತ್ರಕ್ಕೆ ತಲಾ 10 ಕೋಟಿ ರೂ.ಗಳಂತೆ ಜಿಲ್ಲೆಗೆ ಅನುದಾನ ಹಂಚಿಕೆ ಮಾಡಲಾಗಿದೆ ಎಂದು ತಿಳಿಸಿದರು.

ಪ್ರಸಕ್ತ ಸಾಲಿಗೆ ರೈತರಿಗೆ ಸಮರ್ಪಕವಾಗಿ ಬಿತ್ತನೆ ಬೀಜ ಹಾಗೂ ರಸಗೊಬ್ಬರವ ವಿತರಣೆ ಮಾಡಲಾಗಿದೆ. ಬಾಗಲಕೋಟೆ ತೋಟಗಾರಿಕೆ ಬೆಳೆಗೆ ಹೆಸರುವಾಸಿಯಾಗಿದ್ದು, ದ್ರಾಕ್ಷಿ, ದಾಳಿಂಬೆ, ಅರಿಶಿಣ, ಮೆಣಸಿನಕಾಯಿ ಹಾಗೂ ಬಾಳೆ ಬೆಳೆಗೆ ಹೆಚ್ಚಿನ ಬೇಡಿಕೆ ಇದ್ದು, ಒಟ್ಟು 34,100 ಮೆಟ್ರಿಕ್ ಟನ್ ತೋಟಗಾರಿಕೆ ಉತ್ಪನ್ನಗಳು ವಿವಿಧ ರಾಜ್ಯ ಹಾಗೂ ವಿದೇಶಕ್ಕೂರಪ್ತು ಮಾಡಲಾಗಿದೆ. ವಿವಿಧ ಸಾಮಾಜಿಕ ಭದ್ರತೆ ಯೋಜನೆಯಡಿ 2.55 ಲಕ್ಷ ಫಲಾನುಭವಿಗಳು ಲಾಭ ಪಡೆ-ಯುತ್ತಿದ್ದಾರೆ. ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟವು ತನ್ನ ಮಾರಾಟದ ಜಾಲವನ್ನು ನೆರೆ-ಯ ಮಹಾರಾಷ್ಟ್ರ ರಾಜ್ಯಕ್ಕೂ ವಿಸ್ತರಿಸಿದೆ ಎಂದು ತಳಿಸಿದರು.

ಸರಕಾರದ ಮಹತ್ವಾಕಾಂಕ್ಷಿ ಪಂಚಗ್ಯಾರಂಟಿ ಯೋಜನೆಗಳಲ್ಲಿ ಶಕ್ತಿ ಯೋಜನೆಯಡಿ ಒಟ್ಟು ಪ್ರಯಾಣಿಕರಲ್ಲಿ ಶೇ.62 ಪ್ರಯಾಣಿಕರು ಮಹಿಳಾ ಪ್ರಯಾಣಿಕರು ಉಚಿತವಾಗಿ ಪ್ರಯಾಣ ಮಾಡುತ್ತಿದ್ದಾರೆ. ಅನ್ನಭಾಗ್ಯ ಯೋಜನೆಯಡಿ ಶೇ.96.49 ರಷ್ಟು ಲಾಭ ಪಡೆಯುತ್ತಿದ್ದರೆ. ಗೃಹಲಕ್ಷ್ಮೀ ಯೋಜನೆಯಡಿ ಶೇ.94.81 ರಷ್ಟು ಲಾಭ ಪಡೆಯುತ್ತಿದ್ದಾರೆ. ಗೃಹ ಜ್ಯೋತಿ ಯೋಜನೆಯಡಿ ಒಟ್ಟು 4,20,514 ಜನ ನೋಂದಾಯಿಸಿಕೊಂಡು ಇದರ ಪ್ರಯೋಜನಪಡೆದುಕೊಳ್ಳುತ್ತಿದ್ದಾರೆ. ಯುವನಿಧಿ ಯೋಜನೆಯಡಿ ಪದವೀಧರರು 7637, ಡಿಪ್ಲೋಮಾ 91 ಸೇರಿ ಒಟ್ಟು 7729 ಫಲಾನುಭವಿಗಳು ಪ್ರಯೋಜನಪಡೆದುಕೊಳ್ಳುತ್ತಿದಾರೆ ಎಂದರು.

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಇಲ್ಲಿಯವರೆಗೆ 34.94ಲಕ್ಷ ಮಾನವದಿನಗಳನ್ನು ಸೃಜಿಸಿ ರೂ. 153.05 ಕೋಟಿ ಖರ್ಚು ಭರಿಸಲಾಗಿರುತ್ತದೆ. ದೀನ್‌ದಯಾಳ ಅಂತ್ಯೋದಯ ಯೋಜನೆಯಡಿ 3322 ಸ್ವ-ಸಹಾಯ ಸಂಘಗಳಿಗೆ ರೂ.3621.00 ಲಕ್ಷಗಳ ಸಮುದಾಯ ಬಂಡವಾಳ ನಿಧಿಯನ್ನು ಜೀವನೋಪಾಯ ಚಟುವಟಿಕೆಗಳಿಗಾಗಿ ಬಿಡುಗಡೆ ಮಾಡಲಾಗಿದೆ. ಜಿಲ್ಲೆಯ 800 ಗ್ರಾಮೀಣ ನಿರುದ್ಯೋಗ ಯುವಕ, ಯುವತಿಯರಿಗೆ ಕೌಶಲ್ಯ ತರಬೇತಿಯನ್ನು ನೀಡಿ ಸ್ವ-ಉದ್ಯೋಗ ಚಟುವಟಿಕೆಗಳನ್ನು ಕೈಗೊಳ್ಳಲು ಪ್ರೋತ್ಸಾಹಿಸಲಾಗುತ್ತಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಂಸದ ಪಿ.ಸಿ.ಗದ್ದಿಗೌಡರ, ಶಾಸಕ ಎಚ್.ವಾಯ್.ಮೇಟಿ, ವಿಧಾನ ಪರಿಷತ್ ಸದಸ್ಯರಾದ ಪಿ.ಎಚ್.ಪೂಜಾರ, ಹನಮಂತ ನಿರಾಣಿ, ನಗರಸಭೆ ಅಧ್ಯಕ್ಷೆ ಸವಿತಾ ಲೆಂಕೆನ್ನವರ, ಜಿಲ್ಲಾಧಿಕಾರಿ ಜಾನಕಿ ಕೆ.ಎಂ, ಜಿ.ಪಂ ಸಿಇಓ ಶಶಿಧರ ಕುರೇರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಮರನಾಥ ರೆಡ್ಡಿ, ಉಪ ಅರಣ್ಯ ಸಂರಕ್ಷಣಾಧಿಕಾರಿ ರುಥ್ರೇನ್ ಪಿ, ಅಪರ ಜಿಲ್ಲಾಧಿಕಾರಿ ಪರಶುರಾಮ ಶಿನ್ನಾಳಕರ, ಉಪವಿಭಾಗಾಧಿಕಾರಿ ಸಂತೋಷ ಜಗಲಾಸರ, ತಹಶೀಲ್ದಾರ ಅಮರೇಶ ಪಮ್ಮಾರ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಬಹುಮಾನ:ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಪಥಸಂಚಲನ ಮಾಡಿದ ತಂಡಗಳಿಗೆ ಬಹುಮಾನ ವಿತರಣೆ ಮಾಡಲಾಯಿತು.

# ಜಮಖಂಡಿ, ಮುಧೋಳದಲ್ಲಿ 'ಅಕ್ಕ ಕೆಫೆ'

## ಏಕಕಾಲಕ್ಕೆ 100 ಸಹೋದರಿ ಸಂಜೀವಿನಿ ಕ್ಯಾಂಟೀನ್‌ಗೆ ಚಾಲನೆ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಜ.27:ಬಾಗಲಕೋಟೆ ಜಿಲ್ಲಾ ಪಂಚಾಯತ ವ್ಯಾಪ್ತಿಯ ಪ್ರತಿ ಗ್ರಾಮ ಪಂಚಾಯತಿಯಲ್ಲಿ ಏಕ ಕಾಲದಲ್ಲಿ ಒಟ್ಟು 100 ಸಹೋದರಿ ಸಂಜೀವಿನಿ ಕ್ಯಾಂಟೀನ್‌ಗಳಿಗೆ ಅಬಕಾರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪೂರ ರವಿವಾರ ಚಾಲನೆ ನೀಡಿದರು.

ನವನಗರದ ಜಿಲ್ಲಾ ಕ್ರೀಡಾಂಗಣದಲ್ಲಿ 76ನೇ ಗಣರಾಜ್ಯೋತ್ಸವ ಕಾರ್ಯಕ್ರಮದ ನಂತರ ಸಹೋದರಿ ಸಂಜೀವಿನಿ ಕ್ಯಾಂಟೀನ್‌ಗೆ ಚಾಲನೆ ನೀಡಿ ಮಾತನಾಡಿದ ಅವರು, ಏಕ ಕಾಲದಲ್ಲಿ ಜಿಲ್ಲೆಯಾದ್ಯಂತ ಗ್ರಾಮೀಣ ಪ್ರದೇಶದಲ್ಲಿ 100 ಸಂಜೀವಿನಿ ಕ್ಯಾಂಟಿನ್ ಪ್ರಾರಂಭಿಸಿರುವುದು ರಾಜ್ಯದಲ್ಲಿಯೇ ಪ್ರಥಮ ಎಂದರು. ಮಹಿಳೆಯರಿಗೆ ಸ್ವಾವಲಂಭಿ ಜೀವನ ನಡೆಸಲು ಕ್ಯಾಂಟಿನ್ ಸಹಕಾರಿಯಾಗಲಿದ್ದು, ಇತರೆ ಮಹಿಳಾ ಸಂಘದವರು ಸ್ವ-ಉದ್ಯೋಗ ಕೈಗೊಳ್ಳಲು ಮುಂದೆ ಬರಬೇಕೆಂದು ತಿಳಿಸಿದರು.

ಎನ್.ಆರ್.ಎಲ್.ಎಂ ಯೋಜನೆಯಡಿ ಮಹಿಳಾ ಸ್ವ-ಸಹಾಯ ಸಂಘಗಳೇ ನಿರ್ವಹಿಸುತ್ತಿರುವ ಉತ್ತಮ ಗುಣಮಟ್ಟದ ಆಹಾರ ಹಾಗೂ ಕೈಗೆಟಕುವದರದಲ್ಲಿ ಸಾರ್ವಜನಿಕರಿಗೆ ಅನುಕೂಲವಾಗುವ ದೃಷ್ಠಿಯಿಂದ ಮುಧೋಳ ಹಾಗೂ ಜಮಖಂಡಿ ತಾಲೂಕಿನಲ್ಲಿ 22.40 ಲಕ್ಷ ರೂ.ಗಳಲ್ಲಿ 2 ಅಕ್ಕ ಕೆಫೆ ತೆರೆಯುತ್ತಿರುವುದು ಸಹ ಹೆಮ್ಮೆಯ ವಿಷಯವಾಗಿದೆ ಎಂದರು. ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ ಮಾತನಾಡಿ, ಎನ್.ಆರ್.ಎಲ್.ಎಂ ಯೋಜನೆಯಡಿ ಸಮುದಾಯ ಬಂಡವಾಳ ನಿಧಿ ಮೂಲಕ ಸಹೋದರಿ ಸಂಜೀವಿನ ಕ್ಯಾಂಟಿನ್ ಪ್ರಾರಂಭಿಸಲು ಪ್ರೋತ್ಸಾಹಿಸಲಾಗುತ್ತಿದೆ. ಜಿಲ್ಲೆಯ ಪ್ರತಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಕ್ಯಾಂಟಿನ್ ತೆರೆಯಲಾಗಿದೆ. ಬಾದಾಮಿ ತಾಲೂಕಿನಲ್ಲಿ 12, ಬಾಗಲಕೋಟೆ ತಾಲೂಕಿನಲ್ಲಿ 15, ಬೀಳಗಿ ತಾಲೂಕಿನಲ್ಲಿ 12, ಗುಳೇದಗಡ್ಡ ತಾಲೂಕಿನಲ್ಲಿ 8, ಹುನಗುಂದ ತಾಲೂಕಿನಲ್ಲಿ 12, ಇಲಕಲ್ಲ ತಾಲೂಕಿನಲ್ಲಿ 10, ಜಮಖಂಡಿ ತಾಲೂಕಿನಲ್ಲಿ 14, ಮುಧೋಳ ತಾಲೂಕಿನಲ್ಲಿ 14 ಹಾಗೂ ರಬಕವಿ-ಬನಹಟ್ಟಿ ತಾಲೂಕಿನಲ್ಲಿ 7 ಕ್ಯಾಂಟಿನ್ ಪ್ರಾರಂಭಿಸಲಾಗಿದೆ ಎಂದು ತಿಳಿಸಿದರು.

ಆಹಾರೋತ್ಪನ್ನ ಚಟುವಟಿಕೆಯಲ್ಲಿ ತೊಡಗಿಕೊಂಡಿರುವ ಪ್ರತಿ ಸ್ವ-ಸಹಾಯ ಸಂಘದ ಮಹಿಳೆಯರಿಗೆ ರೂ. 40 ಸಾವಿರ ರೂ.ಗಳಂತೆ ಇಲ್ಲಿಯವರೆಗೆ 450 ಫಲಾನುಭವಿಗಳಿಗೆ ರೂ.180.00 ಲಕ್ಷಗಳ ಬೀಜಧನ (ಪಿ.ಎಂ.ಎಫ್.ಎಂ.ಇ) ಆಹಾರೋತ್ಪನ್ನ ಚಟುವಟಿಕೆಗಳಿಗಾಗಿ ಸಾಲ ನೀಡಲಾಗಿದೆ. ಅಲ್ಲದೇ ಜಿಲ್ಲೆಯ 800 ಗ್ರಾಮೀಣ ನಿರುದ್ಯೋಗ ಯುವಕ ಮತ್ತು ಯುವತಿಯರಿಗೆ ಕೌಶಲ್ಯ ತರಬೇತಿಯನ್ನು ನೀಡಿ ಸ್ವ-ಉದ್ಯೋಗ ಚಟುವಟಿಕೆಗಳನ್ನು ಕೈಗೊಳ್ಳಲು ಪ್ರೋತ್ಸಾಹಿಸಲಾಗುತ್ತಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸಂಸದ ಪಿ.ಸಿ.ಗದ್ದಿಗೌಡರ, ಶಾಸಕ ಎಚ್.ವಾಯ್.ಮೇಟಿ, ವಿಧಾನಪರಿಷತ್ ಸದಸ್ಯರಾದ ಪಿ.ಎಚ್.ಪೂಜಾರ, ಹನಮಂತ ನಿರಾಣಿ, ನಗರಸಭೆ ಅಧ್ಯಕ್ಷೆ ಸವಿತಾ ಲೆಂಕೆನ್ನವರ, ಜಿಲ್ಲಾಧಿಕಾರಿ ಜಾನಕಿ ಕೆ.ಎಂ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಮರನಾಥ ರೆಡ್ಡಿ, ಉಪ ಅರಣ್ಯ ಸಂರಕ್ಷಣಾಧಿಕಾರಿ ರುಥ್ರೇನ್ ಪಿ, ಅಪರ ಜಿಲ್ಲಾಧಿಕಾರಿ ಪರಶುರಾಮ ಶಿನ್ನಾಳಕರ, ಜಿ.ಪಂ ಉಪಕಾರ್ಯದರ್ಶಿ ಎನ್.ವಾಯ್.ಬಸರಿಗಿಡದ, ಸಹಾಯಕ ಯೋಜನಾಧಿಕಾರಿ ಭೀಮಪ್ಪ ತಳವಾರ ಸೇರಿದಂತೆ ಇತರರು ಉಪಸ್ಥಿರಿದ್ದರು.

## ಎ ಟಿ ಎಂ ದರೋಡೆ-ಷೂಟ್ ಔಟ್ ಎದುರಿಸಿದ ಶಿವು ಗುನ್ನಳ್ಳಿಗೆ

# ಶೌರ್ಯ ಪ್ರಶಸ್ತಿ ನೀಡಬೇಕು : ವೀರಭದ್ರಪ್ಪ ಉಪ್ಪಿನ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಜ. 27 : ಇದೇ ದಿನಾಂಕ 16 ರಂದು ಬೀದರ್ ನಗರದ ಶಿವಾಜಿ ವೃತ್ತದಲ್ಲಿರುವ ಎಸಬಿಐ ಏಟಿಎಂ ಎದುರುಗಡೆ ದರೋಡೆ ಕೋರರ ಶೂಟ್ ಔಟ್ನಲ್ಲಿ ಎದೆಗೆ ಗುಂಡೇಟು ತಿಂದು, ಸಾವು ಬದುಕಿನ ಮಧ್ಯ ಹೋರಾಡಿ 10 ದಿನ ಚಿಕಿತ್ಸೆ ಪಡೆದು, ಬದುಕುಳಿದಿರುವ ಶಿವು ಗುನ್ನಳ್ಳಿ ಯವರಿಗೆ ರಾಜ್ಯ ಸರಕಾರದಿಂದ ಖಾಯಂ ನೌಕರಿ ಕೊಟ್ಟು, ಇನ್ನಿತರ ಸೌಲಭ್ಯಗಳನ್ನು ನೀಡಬೇಕೆಂದು ಪಶು ವೈದ್ಯಕೀಯ ವಿಶ್ವವಿದ್ಯಾಲಯದ ನಿವೃತ್ತ ಅಧಿಕಾರಿ ವೀರಭದ್ರಪ್ಪ ಉಪ್ಪಿನವರು ಮಲ್ಲಮ್ಮ ನುಡಿ ಜಿಲ್ಲಾ ವರದಿಗಾರರು ಸಂತೋಷ ಚೆಟ್ಟಿ ಸರಕಾರ-ಕ್ಕೆ ಒತ್ತಾಯಿಸಿದರು. ಅವರು ಇಂದು ಅಖಿಲ ಭಾರತ ವಿಶ್ವ ವಿದ್ಯಾಲಯ ನೌಕರರ ಒಕ್ಕೂಟದ ನಿಯೋಗದಿಂದ ನಗರದ ಲಾಡಗೇರಿ ಬಡಾವಣೆಯಲ್ಲಿನ ಶಿವು ಗುನಳ್ಳಿ ಯವರನ್ನು ಅವರ ನಿವಾಸದಲ್ಲಿ ಭೇಟಿಯಾಗಿ ಮಾತನಾಡುತ್ತಿದ್ದರು. ಶಿವು ರವರು ಚಿಕಿತ್ಸೆಗಾಗಿ ಮಾಡಿರುವ ವೆಚ್ಚವನ್ನು ರಾಜ್ಯ ಸರಕಾರವು ತಕ್ಷಣ ಮರುಪಾವತಿಸಬೇಕು. ಎ.ಟಿ.ಎಂಗೆ ತುಂಬಿಸಬೇಕಾಗಿರುವ ಸರಕಾರಿ ಹಣವನ್ನು ಇಬ್ಬರು ದರೋಡೆಕೋರರು ಕಸಿಯಲೆತ್ನಿಸಿದಾಗ, ಜೀವದ ಹಂಗು ತೊರೆದು ಸರಕಾರದ ಹಣವು ಕಳ್ಳರ ಕೈಗೆ ಸಿಗಬಾರದೆಂದು, ದರೋಡೆಕೋರರ ಜೊತೆ ಯಲ್ಲಿ ಸೆಣಸಾಡುತ್ತ, ಗುಂಡೇಟು ತಿಂದಿರುವುದು ಶಿವು ಅವರ ಪರಾಕ್ರಮವನ್ನು ಎತ್ತಿ ತೋರಿಸುತ್ತದೆ. ಶಿವು ಅವರ ಈ ದಿಟ್ಟತನದ ನಿಲುವಿಗೆ *ಶೌರ್ಯ* ಪ್ರಶಸ್ತಿಗೆ ಅವರ ಹೆಸರನ್ನು ಶಿಫಾರಸ್ಸು ಮಾಡಬೇಕು.

ಆ ಬ್ಯಾಂಕು ಭಾರತೀಯ ರಿಸರ್ವ್ ಬ್ಯಾಂಕಿನ ಅಧೀನದಲ್ಲಿ ಬರುವುದ ರಿಂದ ಕೇಂದ್ರ ಸರಕಾರವು ಶಿವು ರವರಿಗೆ ಆರ್ಥಿಕ ಧನಸಹಾಯ ಮಾಡಬೇಕೆಂದು ಒತ್ತಾಯಿಸಿದರು. ರಾಜ್ಯ ಸರಕಾರವು ಶಿವುರವರ ಭವಿಷ್ಯದ ಭದ್ರತೆ ಬಗ್ಗೆ ಕ್ರಮ ಕೈಗೊಂಡ ಕ್ರಮದ ಬಗ್ಗೆ ಜನತೆಗೆ ಪ್ರಾಮಾಣಿಕವಾದ ಮಾಹಿತಿ ನೀಡಬೇಕು ಎಂದರು. ವೈದ್ಯರ ದೇವರ ದಯೆದಿಂದ ಹಾಗೂ ಎಲ್ಲ ಜನರ ಶುಭಕಾಮನೆಗಳಿಂದ ತಾನು ಬದುಕುಳಿದಿದ್ದು ಎಲ್ಲರಿಗೆ ಚಿರಋಣಿಯಾಗಿದ್ದೇನೆ. ಎಂದು ಶಿವು ನುಡಿದರು. ಸರಿಯಾದ ಸಮಯಕ್ಕೆ ಸೂಕ್ತ ನಿರ್ಧಾರ ತೆಗೆದು ಕೊಂಡು ಹೈದ್ರಾಬಾದಿನ ಕೆಯರ್ ಆಸ್ಪತ್ರೆ ಯಲ್ಲಿ ಶಿವು ಅವರ ಜೊತೆಗೆ ಇದ್ದು, ಸೂಕ್ತ ಚಿಕಿತ್ಸೆ ಕೊಡಿಸಿದ ಶಿವು ಅವರ ಭಾವ ಜಗನ್ನಾಥ ಶಿವಯೋಗಿ, ಶಿವುರವರ ತಾಯಿ ಚಿತ್ರಮ್ಮ, ತಂಗಿ ಪೂಜಾ ಇದ್ದರು. ಇದೇ ಸಂದರ್ಭದಲ್ಲಿ ಶಿವುಗೆ ಶಾಲು ಹೊದಿಸಿ ಸನ್ಮಾನವನ್ನು ಮಾಡಲಾಯಿತು. ಬಡಾವಣೆಯ ಜನರು ಹಾಜರಿದ್ದರು.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.
Editor: Ramesh Reddy, Office Ph. No: +91 9449732000.